TIGHT BINDING BOOK

UNIVERSAL LIBRARY
OU_198616
UNIVERSAL LIBRARY

OSMANIA UNIVERSITY LIBRARY

Call No. K 377 R16M

Accession No. K 2610

Author

Title

This book should be returned on or before the date last marked below.

ಶಾಕ್ಯ ಸಾಹಿತ್ಯ ಮಂಟಪದ ಎರಡನೆಯ ಉಪಪುಷ್ಪ

# ಮೂರು ಪಾಲಿ ಸೂತ್ರಗಳು

"ದೀಘನಿಕಾಯ"

ಎಂಬ

ಪಾಲಿ ಗ್ರಂಥದಿಂದ ಆಯ್ದ ಮೂರು ಸೂತ್ರಗಳ

ಕನ್ನಡ ಅನುವಾದ.

ಅನುವಾದಕ:

ಜಿ. ಪಿ. ರಾಜರತ್ನಂ



ಶಾಕ್ಯ ಸಾಹಿತ್ಯ ಮಂಟಪ

೧೯೩೭] ಮಲ್ಲೇಶ್ವರ – ಬೆಂಗಳೂರು [ರೂ. ೧/-

ಎಲ್ಲ ಹಕ್ಕುಗಳನ್ನು ಕಾದಿರಿಸಿದೆ.

---

## ಜಿ. ಪಿ. ರಾಜರತ್ನಂ ಅವರ ಬೌದ್ಧ ಗ್ರಂಥಗಳು.

ಚೀನಾದೇಶದ ಬೌದ್ಧ ಯಾತ್ರಿಕರು

ಧರ್ಮದಾನಿ ಬುದ್ಧ (ಮುಗಿದಿವೆ)

ಗೌತಮ ಬುದ್ಧ (ಮಕ್ಕಳಿಗೆ)

ಬುದ್ಧ ವಚನ ಪರಿಚಯ

ಪಾಲಿ ಪಜ್ಜ ಪುಪ್ಫಂಜಲಿ

ಮೂರು ಪಾಲೀ ಸೂತ್ರಗಳು

ಮಿಲಿಂದ ಪ್ರಶ್ನೆ

ಧರ್ಮ—ಸಾಹಿತ್ಯ—ದೃಷ್ಟಿ

ಪಾಲೀ ಸಾಹಿತ್ಯ ಪರಿಚಯ*

ಶಾಕ್ಯ ಧರ್ಮ ಪರಿಚಯ*



*ಮೊದಲನೆಯದು ೧೯೩೭ರ ಆಗಸ್ಟು ತಿಂಗಳಿನಲ್ಲೂ, ಎರಡನೆಯದು ೧೯೩೭ರ ಡಿಸೆಂಬರು ತಿಂಗಳಿನಲ್ಲೂ ಪ್ರಕಟವಾಗುವುದು.

---

ಈ ಪುಸ್ತಕದ ಪುಟ ೧—೮೧ ಮೈಸೂರು ವೆಸ್ಲಿ ಪ್ರೆಸ್ಸಿನಲ್ಲಿಯೂ ಉಳಿದುದು ಮಂಗಳೂರಿನ ಧರ್ಮಪ್ರಕಾಶ ಮುದ್ರಾಲಯದಲ್ಲಿಯೂ ಅಚ್ಚಾಗಿ, 'ಧರ್ಮಪ್ರಕಾಶ'ದಲ್ಲಿ ಬೈಂಡಾಯಿತು.

# ಪ್ರವೇಶ

ಈ ಪುಸ್ತಕದಲ್ಲಿರುವ ಮೂರು ಸೂತ್ರಗಳು 'ದೀಘನಿಕಾಯ'ವೆಂಬ ಪಾಲಿ ಗ್ರಂಥದಿಂದ ಆಯ್ದು ಅನುವಾದ ಮಾಡಿದುವು. ಮೂಲ ಪಾಲಿಯಿಂದ ಕನ್ನಡಕ್ಕೆ ಆದ ಅನುವಾದವು ಇದೆ ಮೊದಲಾದುದರಿಂದ, ಸೂತ್ರಗಳ ಮೂಲಸ್ವರೂಪವನ್ನು ಯಥಾಭೂತವಾಗಿ ಕನ್ನಡದಲ್ಲಿ ತೋರಿಸಬೇಕೆಂಬ ಆಸೆಯಿಂದ, ಮೂಲದ ಅರ್ಥ ವ್ಯಂಜನಗಳೆರಡನ್ನೂ ಹಿಡಿದು ಇಲ್ಲಿ ಅನುವಾದ ಮಾಡಿದ್ದೇನೆ. ಆದರಿಂದ ಈ ಅನುವಾದ ಸುಲಭವಾಗಿಲ್ಲ, ಇದರ ಕನ್ನಡ ಕನ್ನಡವಾಗಿಲ್ಲ. ಆದರೆ ಇದು ಮೂಲದ ಮಾದರಿಗಾಗಿ ಮಾಡಿದ್ದು ಮಾತ್ರ.

ವ್ಯಂಜನಕ್ಕಿಂತ ಅರ್ಥಕ್ಕೆ ಹೆಚ್ಚು ಗಮನಕೊಟ್ಟರೆ ಅನುವಾದವು ಎಷ್ಟು ಸುಗಮವಾಗುತ್ತದೆಂಬುದಕ್ಕೆ ಈ ಪುಸ್ತಕದ 'ಶ್ರಾಮಣ್ಯ ಫಲ ಸೂತ್ರ', 'ಅಂಬಷ್ಠ ಸೂತ್ರ', ಮತ್ತು 'ಸೋಣದಂಡ ಸೂತ್ರ'ಗಳೊಡನೆ 'ಬುದ್ಧ ವಚನ ಪರಿಚಯ' ಎಂಬ ಗ್ರಂಥದ ಪುಟ ೧೮೦—೨೦೪, ೮೭—೧೧೨, ಮತ್ತು ೧೧೩—೧೨೯ಗಳನ್ನು ಸಹೃದಯ ವಾಚಕರು ನೋಡಬೇಕು. ಈ ಅನುವಾದಗಳಿಗಿಂತ ಅವು ಸುಲಭವಾಗಿ ಅರ್ಥವಾಗುತ್ತವೆ.

ಈ ಮೂರು ಸೂತ್ರಗಳ ಅನುವಾದಗಳು ಮೊದಲು ೧೯೩೭ರ 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟವಾದುವು. ಆ ಪತ್ರಿಕೆಯ ಸಂಪಾದಕರ ಕೃಪೆಯಿಂದ ಇವು ಪುನಃ ಮುದ್ರಿತವಾಗಿವೆ.

'ಶಾಕ್ಯ ಸಾಹಿತ್ಯ ಮಂಟಪ'
ಮಲ್ಲೇಶ್ವರ, ಬೆಂಗಳೂರು.

ಜಿ. ಪಿ. ರಾಜರತ್ನಂ.

# ವಿವರ


ಪುಟ

೧. ಶ್ರಾಮಣ್ಯ ಫಲ ಸೂತ್ರ . . . . . . ೧

೨. ಅಂಬಷ್ಟ ಸೂತ್ರ . . . . . . ೪೦

೩. ಸೋಣದಂಡ ಸೂತ್ರ . . . . . . ೬೬

"ನಮೋ ತಸ್ಸ ಭಗವತೋ ಅರಹತೋ ಸಮ್ಮಾ ಸಂಬುದ್ಧಸ್ಸ."

# ಶ್ರಾಮಣ್ಯ[1] ಫಲ ಸೂತ್ರ

[ಈ ಸೂತ್ರವು 'ದೀಘನಿಕಾಯ'ದ ಮೂವತ್ತುನಾಲ್ಕು ಸೂತ್ರಗಳಲ್ಲಿ ಎರಡನೆಯದು. ಮನುಷ್ಯನು ಸಂನ್ಯಾಸಿಯಾಗುವುದರಿಂದ ಏನು ಫಲ ಸಾಧಿಸಬಲ್ಲನೆಂಬುದನ್ನು ಭಗವಾನನು ಈ ಸೂತ್ರದಲ್ಲಿ ವಿವರಿಸುವನು. ಓದುಗರ ಸೌಲಭ್ಯಕ್ಕಾಗಿ ಈ ಸೂತ್ರವಸ್ತುವನ್ನು ಕೆಳಗೆ ಕಂಡಂತೆ ವಿಭಜಿಸಬಹುದು—

## ಸೂತ್ರಮುಖ (§ ೧–೧೨)

ಮಗಧದ ರಾಜ ಅಜಾತಶತ್ರು ತನ್ನ ತಂದೆಯನ್ನು ಕೊಂದುದರ ಫಲವಾಗಿ ಮನಶ್ಶಾಂತಿಯನ್ನು ಕಳೆದುಕೊಂಡಿದ್ದಾನೆ. ಆ ಕಾಲದ ಆರು ಜನ ಗಣಾಚಾರ್ಯರಿಂದಲೂ ಅವನ ಚಿತ್ತ ಪ್ರಸನ್ನವಾಗಿಲ್ಲ. ಆಸ್ಥಾನ ವೈದ್ಯನಾದ ಜೀವಕನ ಸಲಹೆಯಂತೆ ದೊರೆ ಬುದ್ಧದರ್ಶನಕ್ಕೆ ಹೋಗುವನು. ಅಂದಿನ ಬೆಳುದಿಂಗಳಿನಲ್ಲಿ ನಡೆಯುತ್ತಿದ್ದ ಆ ಧರ್ಮಸಭೆಯಲ್ಲಿ ನೆಲಸಿದ್ದ ಶಾಂತಿಯನ್ನು ಕಂಡು ದೊರೆ ಪ್ರಸನ್ನನಾಗುವನು, ಬುದ್ಧನನ್ನು ಕಂಡು ನುಡಿಸುವನು.

## ಅಜಾತಶತ್ರು ಬುದ್ಧ ಸಂವಾದ (§ ೧೩–೩೯)

ಶ್ರಮಣತ್ವದ ಫಲವೇನೆಂದು ದೊರೆ ಬುದ್ಧನನ್ನು ಕೇಳುವನು. ತಾನು ಯಾರಿಂದಲೂ ಅದನ್ನು ತಿಳಿದಿಲ್ಲವೆಂದು ಹೇಳುತ್ತ, ಆಗಿನ ಆರು ಜನ ಆಚಾರ್ಯರ ತತ್ತ್ವಸಿದ್ಧಾಂತಗಳನ್ನು ತಿಳಿಸುವನು. ೧. ಪೂರ್ಣಕಶ್ಯಪನ 'ಅಕ್ರಿಯಾ' (§ ೧೬-೧೮). ೨. ಮಕ್ಖಲಿ ಗೋಶಾಲನ 'ಸಂಸಾರಶುದ್ಧಿ' (§ ೧೯-೨೧). ೩. ಅಜಿತಕೇಶಕಂಬಳಿಯ 'ಉಚ್ಛೇದ ವಾದ' (§ ೨೨-೨೪). ೪. ಪಕುಧ ಕಾತ್ಯಾಯನನ ವಿಲಪನ (§ ೨೫-೨೭). ೫. ನಿರ್ಗ್ರಂಥನಾತಪುತ್ರನ 'ಚಾತುರ್ಯಾಮ ಸಂವರ' (§ ೨೮-೩೧). ೬. ಸಂಜಯ ಬೆಲಟ್ಠಿಪುತ್ರನ 'ವಿಕ್ಷೇಪ' (§ ೩೨-೩೪).

ದೊರೆಯ ಪ್ರಶ್ನೆಗೆ ಉತ್ತರವಾಗಿ ಬುದ್ಧನು ಅವನನ್ನೇ ಪ್ರತಿಪ್ರಶ್ನಿಸಿ, ಸಂನ್ಯಾಸಿಗೆ ಜನರಿಂದ ಸಿಕ್ಕುವ ಸತ್ಕಾರ ಗೌರವಗಳೇ ಮೊದಲಿನ ಶ್ರಾಮಣ್ಯಫಲವೆಂದು ಅವನ

---

[1] ಶ್ರಾಮಣ್ಯ=ಶ್ರಮಣತ್ವ. ಶ್ರಮಣನೆಂದರೆ ಬೌದ್ಧಸಂನ್ಯಾಸಿ ಮಾತ್ರವೆಂದಲ್ಲ, ಯಾವ ಸಂನ್ಯಾಸಿಯಾದರೂ ಆಗಬಹುದು.

ಬಾಯಿಂದಲೇ ಹೇಳಿಸುವನು. ದೊರೆಯ ಪ್ರಾರ್ಥನೆಯಂತೆ ಸಂನ್ಯಾಸತ್ವದ ಮುಂದಿನ ಫಲಗಳನ್ನು ವಿವರಿಸಲು ಭಗವಾನನು ಒಪ್ಪುವನು.

## ತಥಾಗತ ವ್ಯಾಕರಣ (§ ೪೦–೯೮)

ಬುದ್ಧನ ಉದಯ (§ ೪೦), ಶ್ರೋತೃವಿನ ಪ್ರವ್ರಜ್ಯ (§ ೪೧)

ಸಂನ್ಯಾಸಿಯು ಸಂನ್ಯಾಸತ್ವದ ಫಲ ಪಡೆಯಬೇಕಾದರೆ, ಬೇಕಾಗುವ ಸಪ್ತಸಂಪತ್ತಿ (§ ೪೨-೭೪)—

೧. ಶೀಲಸಂಪತ್ತಿ (§ ೪೩-೬೨)
 ಕ್ಷುಲ್ಲಶೀಲ (§ ೪೩-೪೫)
 ಮಧ್ಯಮಶೀಲ (§ ೪೬-೫೫)
 ದೀರ್ಘಶೀಲ (§ ೫೬-೬೨)
೨. ಭಯರಾಹಿತ್ಯ (§ ೬೩)
೩. ಇಂದ್ರಿಯದ್ವಾರಗೋಪನ (§ ೬೪)
೪. ಸ್ಮೃತಿ ಸಂಪ್ರಜಾನ್ಯ (§ ೬೫)
೫. ಸಂತುಷ್ಟಿ (§ ೬೬)
೬. ವಿವೇಕ (§ ೬೭)
೭. ಪಂಚನೀವರಣ ಅತಿಕ್ರಮ (§ ೬೮-೭೪)

ಮೇಲೆ ಹೇಳಿದ ಸಂಪತ್ತಿಯುಳ್ಳ ಸಂನ್ಯಾಸಿಗೆ ಸಿಕ್ಕುವ ಶ್ರಾಮಣ್ಯ ಫಲಗಳು—

೧. ಪ್ರಥಮ ಧ್ಯಾನ (§ ೭೫-೭೬)
೨. ದ್ವಿತೀಯ ಧ್ಯಾನ (§ ೭೭-೭೮)
೩ ತೃತೀಯ ಧ್ಯಾನ (§ ೭೯-೮೦)
೪. ಚತುರ್ಥ ಧ್ಯಾನ (§ ೮೧-೮೨)
೫. ಜ್ಞಾನದರ್ಶನ (§ ೮೩-೮೪)
೬ ಮನೋಮಯಕಾಯ ನಿರ್ಮಾಣ (§ ೮೫-೮೬)
೭. ಋದ್ಧಿವಿಧ (§ ೮೭-೮೮)
೮. ದಿವ್ಯಶ್ರೋತ್ರ (§ ೮೯-೯೦)
೯. ಚೇತೋಪರಿಯ ಜ್ಞಾನ (§ ೯೧-೯೨)
೧೦. ಪೂರ್ವನಿವಾಸಾನುಸ್ಮೃತಿ ಜ್ಞಾನ (§ ೯೩-೯೪)
೧೧. ಸತ್ತ್ವಗಳ ಚ್ಯುತೋಪಪಾತ ಜ್ಞಾನ (§ ೯೫-೯೬)
೧೨. ಆಸ್ರವಕ್ಷಯ ಜ್ಞಾನ (§ ೯೭-೯೮)

ಈ ಹನ್ನೆರಡು ಫಲಗಳು ಬೌದ್ಧರ ಪರಮಾರ್ಥವಾದ ಅರ್ಹತ್ವಕ್ಕೆ ಏರಲು ಅನುಕೂಲವಾಗುವ ಹನ್ನೆರಡು ಸೋಪಾನಗಳಂತೆ ಇವೆ. ಈ ಫಲಗಳ **ಜೋಡಣೆ** ಯೇನೋ ವಿಶೇಷವಾಗಿ **ಬೌದ್ಧರದು** ಹೌದು. ಆದರೂ ಇದೇ ಫಲಗಳ **ಆವಶ್ಯಕತೆಗೆ ಯಾವ ಸಂನ್ಯಾಸಿಯೂ** ಆಕ್ಷೇಪಿಸಲಾರನು. ಈ ವ್ಯಾಕರಣದ ಭಾಗವು 'ದೀಘ ಮಜ್ಝಿಮ ನಿಕಾಯ'ಗಳ ಅನೇಕ ಸೂತ್ರಗಳಲ್ಲಿ—ಪೂರ್ಣವಾಗಿಯೋ ಕೊಂಚಭಾಗವಾಗಿಯೋ—ಮೇಲಿಂದ ಮೇಲೆ ಬರುವುದರಿಂದ ಈ ಭಾಗದ ಬೆಲೆ ಏನೆಂಬುದನ್ನು ಅಳೆಯಬಹುದು.

## ಅಜಾತಶತ್ರು ಶರಣಾಗತಿ (§ ೯೯–೧೦೨)

ಬುದ್ಧನ ಧರ್ಮೋಪದೇಶ ಕೇಳಿ ದೊರೆ ಶಾಂತನಾಗುವನು. ತಾನು ತಂದೆಯನ್ನು ಕೊಂದುದಕ್ಕೆ ಪರಿತಪಿಸಿ, ತನ್ನ ಪಾಪವನ್ನು ಭಗವಾನನಿಗೆ ನಿವೇದಿಸಿ, ಕ್ಷಮೆ

ಬೇಡಿ ಶರಣಾಗುವನು. ಬುದ್ಧನು ಆತನ ಪಾಪನಿವೇದನೆಯನ್ನು ಕೇಳಿ, ಅವನಿಗೆ ಅಭಯಪ್ರದಾನಮಾಡುವನು. ದೊರೆ ಸಂತೃಪ್ತನಾಗಿ ಹೊರಡುವನು. ಭಿಕ್ಷುಗಳು ಭಗವಾನನ ನುಡಿಗೆ ಅಭಿನಂದಿಸುವರು. ಸೂತ್ರ ಮುಗಿಯುವುದು.]

೧. ನಾನು ಹೀಗೆ ಕೇಳಿರುವೆನು : ಒಂದು ಸಲ ಭಗವಾನನು[1] ರಾಜಗೃಹದಲ್ಲಿ ಮಕ್ಕಳ ವೈದ್ಯನಾದ ಜೀವಕನ ಆಮ್ರವನದಲ್ಲಿ ಮಹಾ ಭಿಕ್ಷುಸಂಘದೊಡನೆ, ಹದಿಮೂರೂವರೆ ನೂರು ಭಿಕ್ಷುಗಳೊಡನೆ, ತಂಗಿದ್ದನು. ಆಗ ಆ ಸಮಯದಲ್ಲಿ ಚಾತುರ್ಮಾಸ್ಯದ [2]ಕೌಮುದಿಯ ಹದಿನೈದನೆಯ ಉಪವಸಥದಂದು,[2] ಪೂರ್ಣ ಹುಣ್ಣಿಮೆಯ ರಾತ್ರಿಯಲ್ಲಿ ಮಗಧದ ರಾಜ ಅಜಾತಶತ್ರು ವೈದೇಹಿಪುತ್ರನು ರಾಜಾಮಾತ್ಯ ಪರಿವೃತನಾಗಿ ಪ್ರಾಸಾದದ ಮೇಲುಗಡೆ ಹೋಗಿ ಕುಳಿತಿದ್ದನು.

ಆಗ ಆ ಉಪವಸಥದಂದು, ಮಗಧದ ರಾಜ ಅಜಾತಶತ್ರು ವೈದೇಹಿಪುತ್ರನು "ಭೋ ![3] ಬೆಳುದಿಂಗಳು ರಾತ್ರಿಯು ರಮಣೀಯವಲಾ ! ಭೋ ! ಬೆಳುದಿಂಗಳು ರಾತ್ರಿಯು ಅಭಿರೂಪವಲಾ ! ಭೋ ! ಬೆಳುದಿಂಗಳು ರಾತ್ರಿಯು ದರ್ಶನೀಯವಲಾ ! ಭೋ ! ಬೆಳುದಿಂಗಳು ರಾತ್ರಿಯು ಪ್ರಾಸಾದಿಕ[4]ವಲಾ ! ಭೋ ! ಬೆಳುದಿಂಗಳು ರಾತ್ರಿಯು ಲಕ್ಷಣ್ಯ[5]ವಲಾ ! ಈಗ ಯಾವ ಶ್ರಮಣ ಬ್ರಾಹ್ಮಣರನ್ನು ಪರ್ಯುಪಾಸನೆಗೈಯುವ ? ಯಾರ ಪರ್ಯುಪಾಸನೆಯಿಂದ ಚಿತ್ತವು ಪ್ರಸನ್ನವಾಗುವುದು ? " ಎಂದು ಉದಾನ[6]ವನ್ನು ಉದಾನಿಸಿದನು.

೨. ಹಾಗೆನ್ನಲು, ಒಬ್ಬ ರಾಜಾಮಾತ್ಯನು ಅಜಾತಶತ್ರುವಿಗೆ ಹೀಗೆಂದನು-- "ದೇವ ! ಪೂರ್ಣಕಶ್ಯಪ[7]ನುಂಟು. ಆತನು ಸಂಘಕ್ಕೆ ಮುಖ್ಯಸ್ಥನು, ಗಣಕ್ಕೆ ಮುಖಂಡನು, ಗಣಾಚಾರ್ಯನು, ಜ್ಞಾತನು, ಯಶಸ್ವಿ, ತೀರ್ಥಕರನು, ಸಾಧು ಸನ್ಮಾನಿತನು, [8]ಬಹುಜನರಲ್ಲಿ ಬಹುಕಾಲದಿಂದ ಚಿರಪ್ರವ್ರಜಿತನು,[8] ಅಧ್ವಗತನು[9], ವಯಸ್ಸಾದವನು. ದೇವರು ಪೂರ್ಣಕಶ್ಯಪನನ್ನು ಪರ್ಯುಪಾಸಿಸಲಿ, ಪೂರ್ಣಕಶ್ಯಪನ

---

[1] ಬುದ್ಧನ ಪ್ರತಿನಾಮ. [2] ಪ್ರತಿ ಮಾಸದ ೧, ೮, ೧೫, ೨೩ನೆಯ ದಿನಗಳು ಉಪವಸಥ ದಿನಗಳು. ಎಂದರೆ ವಾರಕ್ಕೊಂದು ಉಪವಸಥ. ಈ ಉಪವಸಥದಂದು ಬೌದ್ಧರ ಸಂಘದಲ್ಲಿ ಧರ್ಮ ಕಥನ ನಡೆಯುವುದು. ಕಾರ್ತಿಕಮಾಸದ ಹುಣ್ಣಿಮೆಯ ರಾತ್ರಿಗೆ ಕೌಮುದಿಯೆಂದು ಹೆಸರು. [3] ಒಬ್ಬರನ್ನೊಬ್ಬರು ಸಂಬೋಧಿಸುವಾಗ ಗೌರವಾರ್ಥದಲ್ಲಿ ಹೇಳುವುದು. [4] ಮನಸ್ಸನ್ನು ಪ್ರಸನ್ನವಾಗಿಸುವುದು. [5] ಶುಭವನ್ನು ಸೂಚಿಸುವುದು. [6] ಸಂತೋಷ ದುಃಖಗಳ ಆಧಿಕ್ಯದಿಂದ ಉಸುರಿದ ಭಾವಪೂರ್ಣವಾದ ಮಾತು. ಉದಾನಗಳು ಸಾಮಾನ್ಯವಾಗಿ ಪದ್ಯರೂಪದಲ್ಲಿರುವುದುಂಟು. [7] 'ಪೂರಣ ಕಸ್ಸಪ.' [8] ಪರಿವ್ರಾಜಕರಾದ ಅನೇಕರಲ್ಲಿ ಹಳಬನಾದವನು. [9] ಜೀವನದ ದಾರಿಯಲ್ಲಿ ನಡೆದವನು, ವಯಸ್ಸಾದವನು.

ಪರ್ಯುಪಾಸನೆಯಿಂದ ದೇವರ ಚಿತ್ತವು ಪ್ರಸನ್ನವಾಗುವುದು.'' ಹಾಗೆನ್ನಲು, ಅಜಾತ ಶತ್ರುವು ಮೌನದಿಂದಿದ್ದನು.

೩–೭. ಆಗ ಬೇರೆ ಐದು ಜನ ರಾಜಾಮಾತ್ಯರು ಮಕ್ಖಲಿ ಗೋಶಾಲ[1], ಅಜಿತಕೇಶಕಂಬಳಿ[2], ಪಕುಧ ಕಾತ್ಯಾಯನ[3], ಸಂಜಯ ಬೆಲಟ್ಠಿಪುತ್ರ[4], ನಿರ್ಗ್ರಂಥ ನಾತಪುತ್ರ[5] ಎಂಬ ಐವರು ಗಣಾಚಾರ್ಯರನ್ನು ಮೇಲಿನ ಪೂರ್ಣಕಶ್ಯಪನಂತೆಯೇ ಕೀರ್ತಿಸಿದರು. ಪ್ರತಿ ರಾಜಾಮಾತ್ಯನೂ ತಾನು ಹೇಳಿದ ಗಣಾಚಾರ್ಯನ ಪರ್ಯುಪಾಸನೆಯಿಂದ ದೊರೆಯ ಚಿತ್ತವು ಪ್ರಸನ್ನವಾಗುವುದೆಂದನು. ಹಾಗೆನ್ನಲು, ಅಜಾತ ಶತ್ರುವು ಮೌನದಿಂದಿದ್ದನು.

೮. ಆಗ ಆ ಸಮಯದಲ್ಲಿ ಮಕ್ಕಳ ವೈದ್ಯನಾದ ಜೀವಕನು ಅಜಾತಶತ್ರುವಿಗೆ ಅನತಿ ದೂರದಲ್ಲಿ ಮೌನವಾಗಿ ಕುಳಿತಿದ್ದನು. ಆಗ ಅಜಾತಶತ್ರುವು ಮಕ್ಕಳ ವೈದ್ಯನಾದ ಜೀವಕನಿಗೆ ಹೀಗೆಂದನು—

'' ಪ್ರಿಯ ಜೀವಕ! ನೀನೇಕೆ ಸುಮ್ಮನಿರುವೆ? ''

'' ದೇವ! ಅರ್ಹತ[6]ನೂ ಸಮ್ಯಕ್ಸಂಬುದ್ಧ[7]ನೂ ಆದ ಭಗವಾನನುಂಟು. ಆತನು ಮಹಾ ಭಿಕ್ಷುಸಂಘದೊಡನೆ, ಹದಿಮೂರೂವರೆ ನೂರು ಭಿಕ್ಷುಗಳೊಡನೆ, ನಮ್ಮ ಆಮ್ರವನದಲ್ಲಿ ತಂಗಿರುವನು. ಭಗವಂತನಾದ ಆ ಗೌತಮನನ್ನು ಕುರಿತು ಹರಡಿರುವ ಕಲ್ಯಾಣ ಕೀರ್ತಿಶಬ್ದವಿದು: 'ಆ ಭಗವಾನನು ಅರ್ಹತನು, ಸಮ್ಯಕ್ಸಂಬುದ್ಧನು, ವಿದ್ಯಾಚರಣ[8] ಸಂಪನ್ನನು, ಸುಗತನು[9], ಲೋಕವಿದನು, [10]ಅನುತ್ತರನಾದ ಪುರುಷ ದಮ್ಯ ಸಾರಥಿಯು[10], ದೇವ ಮನುಷ್ಯರಿಗೆ ಶಾಸ್ತೃವು[11], ಬುದ್ಧನು, ಭಗವಾನನು.'

---

1 'ಮಕ್ಖಲಿ ಗೋಸಾಲ.' 2 'ಅಜಿತ ಕೇಸ ಕಂಬಳಿ.' 3 'ಪಕುಧ ಕಚ್ಚಾನ.' 4 'ಸಂಜಯ ಬೆಲಟ್ಠಿಪುತ್ತ.' 5 'ನಿಗಂಠ ನಾತಪುತ್ತ. 6 ಬೌದ್ಧರ ಪರಮಪದವಾದ ನಿರ್ವಾಣವನ್ನು ಸಾಧಿಸಿದವನು. 7 ಸಂಪೂರ್ಣ ಬೋಧಿಯನ್ನು ಕಂಡವನು, ಸ್ಮೃತಿ, ಧರ್ಮವಿಚಯ, ವೀರ್ಯ, ಪ್ರೀತಿ ಪ್ರಶ್ರಬ್ಧಿ, ಸಮಾಧಿ, ಉಪೇಕ್ಷೆ ಎಂಬ ಸಪ್ತ ಬೋಧ್ಯಂಗಗಳನ್ನೂ ಸಾಧಿಸಿದವನು. 8 ಶೀಲ, ಇಂದ್ರಿಯ ಸಂವರ, ಸ್ಮೃತಿ ಸಂಪ್ರಜಾನ್ಯ, ಸಂತುಷ್ಟಿ ಎಂಬ ಶೀಲಸಂಪದ, ಪಂಚನೀವರಣಗಳನ್ನು ಅತಿಕ್ರಮಿಸಿ, ನಾಲ್ಕು ಧ್ಯಾನಗಳನ್ನು ಪಡೆಯುವ ಚಿತ್ತಸಂಪದ; ಜ್ಞಾನದರ್ಶನ, ಮನೋಮಯಕಾಯ ನಿರ್ಮಾಣ, ಋದ್ಧಿ, ದಿವ್ಯಶ್ರೋತ್ರ, ಚೇತೋಪರಿಯ ಜ್ಞಾನ, ಪೂರ್ವನಿವಾಸಾನುಸ್ಮೃತಿ ಜ್ಞಾನ, ಚ್ಯುತೋಪಪತ್ತಿ ಜ್ಞಾನ, ಆಸ್ರವಕ್ಷಯ ಜ್ಞಾನ ಎಂಬ ಪ್ರಜ್ಞಾಸಂಪದ—ಇವು ಮೂರು ಸಂಪದಗಳು ಕೂಡಿ ವಿದ್ಯೆಯಾಗುವುದು. ಶೀಲಸಂವರ, ಇಂದ್ರಿಯದ್ವಾರಗೋಪನ ಇತ್ಯಾದಿ ಹದಿನೈದು ತೆರದ ನಡತೆ ಚರಣವಾಗುವುದು. ಇವುಗಳ ವಿವರ ಮುಂದೆ ಬರುವುದು. 9 ಸುಗತಿಯನ್ನು ಪಡೆದವನು. 10 ದಮನವನ್ನು ಬಯಸುವ ಜನರನ್ನು ಸಾರಥಿಯಂತೆ ನಡೆಸುವುದರಲ್ಲಿ ಎಲ್ಲರನ್ನೂ ಮೀರಿಸಿದವನು. 11 ಬೌದ್ಧರಲ್ಲಿ 'ಸತ್ಥರ್' (ಗುರು) ಎಂಬುದು ಬುದ್ಧನಿಗೆ ಪ್ರತಿನಾಮ.

ದೇವರು ಭಗವಂತನನ್ನು ಪರ್ಯುಪಾಸಿಸಲಿ. ಭಗವಾನನ ಪರ್ಯುಪಾಸನೆಯಿಂದ ದೇವರ ಚಿತ್ತವು ಪ್ರಸನ್ನವಾಗುವುದು."

"ಹಾಗಾದರೆ, ಪ್ರಿಯ ಜೀವಕ, ಹಸ್ತಿಯಾನಗಳನ್ನು ಸಿದ್ಧಗೊಳಿಯಿಸು."

೯. "ಹಾಗೆಯೆ ಆಗಲಿ, ದೇವ!" ಎಂದು ಮಕ್ಕಳ ವೈದ್ಯನಾದ ಜೀವಕನು ಅಜಾತಶತ್ರುವಿನ ಮಾತಿಗೆ ಒಪ್ಪಿ, ಸುಮಾರು ಐದು ನೂರು ಹೆಣ್ಣಾನೆಗಳನ್ನೂ ರಾಜನಿಗೆ ಆರೋಹಣ ಯೋಗ್ಯವಾದ ಆನೆಯನ್ನೂ ಸಿದ್ಧಗೊಳಿಯಿಸಿ, "ದೇವ! ಹಸ್ತಿಯಾನಗಳನ್ನು ಕಲ್ಪಿಸಿದುದಾಗಿದೆ. ಚಿತ್ತಕ್ಕೆ ಬಂದಂತೆ ಮಾಡಬಹುದು" ಎಂದು ಅಜಾತಶತ್ರುವಿಗೆ ತಿಳಿಸಿದನು. ಆಗ ಅಜಾತಶತ್ರು ಐನೂರು ಹೆಣ್ಣಾನೆಗಳ ಮೇಲೆ ಪ್ರತ್ಯೇಕವಾಗಿ ಸ್ತ್ರೀಯರನ್ನು ಹತ್ತಿಸಿ, ಆರೋಹಣೀಯವಾದ ಆನೆಯನ್ನು ಏರಿ, ಪಂಜು ಹಿಡಿದವರೊಡನೆ, ಮಹಾರಾಜಾನುಭಾವದಿಂದ ಹೊರಟು, ಮಕ್ಕಳ ವೈದ್ಯನಾದ ಜೀವಕನ ಆಮ್ರವನವನ್ನು ಕುರಿತು ರಾಜಗೃಹದಿಂದ ತೆರಳಿದನು.

೧೦. ಆಮ್ರವನಕ್ಕೆ ಸ್ವಲ್ಪ ದೂರದಲ್ಲಿರುವಾಗ ಅಜಾತಶತ್ರುವಿಗೆ ಭಯವಾಯಿತು, ಆತ್ಮ ಸ್ತಂಭಿತವಾಯಿತು, ರೋಮಾಂಚವಾಯಿತು. ಈಗ ಅಜಾತಶತ್ರು ಭೀತನಾಗಿ, ಸಂವಿಗ್ನನಾಗಿ, ರೋಮಾಂಚಗೊಂಡು ಮಕ್ಕಳ ವೈದ್ಯನಾದ ಜೀವಕನಿಗೆ ಹೀಗೆಂದನು—"ಪ್ರಿಯ ಜೀವಕ, ನನ್ನನ್ನು ವಂಚಿಸುತ್ತಿಲ್ಲವಷ್ಟೆ? ಪ್ರಿಯ ಜೀವಕ, ನನ್ನನ್ನು ಮೋಸಗೊಳಿಸುತ್ತಿಲ್ಲವಷ್ಟೆ? ಪ್ರಿಯ ಜೀವಕ, ಶತ್ರುಗಳಿಗೆ ನನ್ನನ್ನು ಒಪ್ಪಿಸುತ್ತಿಲ್ಲವಷ್ಟೆ? ಮಹಾ ಭಿಕ್ಷುಸಂಘವು, ಹದಿಮೂರೂವರೆ ನೂರು ಭಿಕ್ಷುಗಳಿರುವಲ್ಲಿ ಸದ್ದಾಗಲಿ, ಕೆಮ್ಮಿದ ಶಬ್ದವಾಗಲಿ, ಸೀಂತ ಶಬ್ದವಾಗಲಿ ಇಲ್ಲದಿರುವುದು ಹೇಗೆ?"

"ಭಯ ಬೇಡ, ಮಹಾರಾಜ! ದೇವರನ್ನು ವಂಚಿಸೆನು. ದೇವರನ್ನು ಮೋಸಗೊಳಿಸೆನು. ದೇವರನ್ನು ಶತ್ರುಗಳಿಗೆ ಒಪ್ಪಿಸೆನು. ಮಹಾರಾಜ, ಮುಂದೆ ನಡೆ. ಮುಂದೆ ನಡೆ, ಮಹಾರಾಜ. ಅಲ್ಲಿ ಮಂಡಲಮಾಳ[1]ದಲ್ಲಿ ದೀಪಗಳು ಬೆಳಗುತ್ತಿವೆ."

೧೧. ಆಗ ಅಜಾತಶತ್ರು ಆನೆ ಹೋಗಲು ದಾರಿಯಿರುವವರೆಗೆ ಆನೆಯಮೇಲೆ ಹೋಗಿ, ಆನೆಯಿಂದ ಇಳಿದು ಪಾದಚಾರಿಯಾಗಿ ಮಂಡಲಮಾಳದ ದ್ವಾರದ ಒಳಸಾರಿ, ಜೀವಕನಿಗೆ ಹೀಗೆಂದನು—"ಆದರೆ ಪ್ರಿಯ ಜೀವಕ, ಭಗವಾನನೆಲ್ಲಿ?"

"ಅದೋ ಅವನೇ ಭಗವಾನನು, ಮಹಾರಾಜ. ಮಹಾರಾಜ, ಮಧ್ಯದ ಕಂಬವನ್ನು ಒರಗಿ, ಭಿಕ್ಷುಸಂಘಪರಿವೃತನಾಗಿ, ಪೂರ್ವಾಭಿಮುಖನಾಗಿ ಕುಳಿತಿರುವವನು, ಅದೋ ಅವನೇ ಭಗವಾನನು!"

೧೨. ಆಗ ಅಜಾತಶತ್ರು ಭಗವಾನನಿರುವ ಒಳಸಾರಿ, ಒಂದು ಪಕ್ಕಕ್ಕೆ

---

1 ಮಂಡಲಾಕಾರವಾದ ಸಭಾಸ್ಥಾನ.

ನಿಂತನು. ಒಂದು ಪಕ್ಕಕ್ಕೆ ನಿಂತು, ಅಜಾತಶತ್ರು ವಿಪ್ರಸನ್ನವಾದ ಸರಸ್ಸಿನಂತೆ ಬಹು ತೂಷ್ಣೀಭಾವದಿಂದಿರುವ ಭಿಕ್ಷುಸಂಘವನ್ನು ಕುರಿತು ನೋಡಿ—"ಈ ಭಿಕ್ಷುಸಂಘಕ್ಕೆ ಕೂಡಿ ಬಂದಿರುವ ಉಪಶಮೆಯುಂತಹುದೇ ಉಪಶಮೆಯು ನನ್ನ ಕುಮಾರ ಉದಾಯಿ ಭದ್ರನಿಗೆ ಕೂಡಿಬರಲಿ!" ಎಂದು ಉದಾನವನ್ನು ಉದಾನಿಸಿದನು.

"ಪ್ರೇಮದ ಕಡೆ ತಿರುಗಿದೆಯು, ಮಹಾರಾಜ?"

"ಭನ್ತೆ[1]! ಕುಮಾರ ಉದಾಯಿ ಭದ್ರನು ನನಗೆ ಪ್ರಿಯನು. ಭನ್ತೆ! ಈ ಭಿಕ್ಷುಸಂಘಕ್ಕೆ ಕೂಡಿ ಬಂದಿರುವ ಉಪಶಮೆಯುಂತಹುದೇ ಉಪಶಮೆಯು ನನ್ನ ಕುಮಾರ ಉದಾಯಿ ಭದ್ರನಿಗೆ ಕೂಡಿಬರಲಿ!"

೧೩. ಆಗ ಅಜಾತಶತ್ರು ಭಗವಂತನಿಗೆ ಅಭಿನಂದಿಸಿ, ಭಿಕ್ಷುಸಂಘಕ್ಕೆ ಅಂಜಲಿಯಿಂದ ಪ್ರಣಾಮಗೆಯ್ದು ಒಂದು ಕಡೆ ಕುಳಿತನು. ಒಂದು ಕಡೆ ಕುಳಿತು, ಅಜಾತಶತ್ರು ಭಗವಂತನಿಗೆ ಹೀಗೆಂದನು—"ಭನ್ತೆ! ಭಗವಂತನನ್ನು ವಿಚಾರವೊಂದು ಕೇಳಬಯಸುವೆನು. ಭಗವಾನನು ನನಗೆ ಅವಕಾಶಕೊಟ್ಟರೆ, ಪ್ರಶ್ನೆಯನ್ನು ತಿಳಿಸುವೆನು."

"ಬಯಸಿದುದನ್ನು ಕೇಳು, ಮಹಾರಾಜ!"

೧೪. "ಭನ್ತೆ! ಬೇರೆ ಬೇರೆ ಶಿಲ್ಪಾಯತನ[2]ಗಳುಂಟು: ಹಸ್ತ್ಯಾರೋಹಿಗಳು, ಅಶ್ವಾರೋಹಿಗಳು, ರಥಿಕರು, ಧನುರ್ಗ್ರಾಹಿಗಳು, ಚೇಲಕರು,[3] ಚಲಕರು,[4] ಪಿಂಡದಾಯಿಕರು,[5] ಉಗ್ರ ರಾಜಪುತ್ರರು, ಪ್ರಸ್ಕಂದಿಗಳು,[6] ಮಹಾನಾಗರು,[7] ಶೂರರು, ಚರ್ಮಯೋಧರು,[8] ದಾಸಕಪುತ್ರರು, ಅಡುಗೆಯವರು, ನಾಪಿತರು, ಸ್ನಾಪಕರು, ಮಿಠಾಯಿ ಮಾಡುವವರು, ಮಾಲಾಕಾರರು, ರಜಕರು, ನೆಯ್ಗೆಯವರು, ಬುಟ್ಟಿ ಹೆಣೆಯುವವರು, ಕುಂಬಾರರು, ಗಣಕರು,[9] ಮುದ್ರಿಕರು[9] ಇನ್ನೂ ಬೇರೆ ಬೇರೆ ಇಂತಹ ಶಿಲ್ಪಾಯತನಗಳುಂಟು. ಅವರು ತಮ್ಮ ಶಿಲ್ಪಫಲವನ್ನು ಆಗಲೇ ಕಂಡುಂಡು, ತಾವು ಸುಖಿಸಿ ಹಾಯಾಗಿರುವರು; ತಂದೆತಾಯಿಯನ್ನೂ ಹೆಂಡಿರು ಮಕ್ಕಳನ್ನೂ ಮಿತ್ರರನ್ನೂ ಸುಖಪಡಿಸಿ ಹಾಯಾಗಿರಿಸುವರು. ಮೇಲು ಮಾಡುವ,

---

[1] ಪೂಜ್ಯರನ್ನು ಸಂಬೋಧಿಸುವಾಗ ಗೌರವಾರ್ಥವಾಗಿ ಉಪಯೋಗಿಸುವ ಶಬ್ದ. ಭನ್ತೆ ಎಂಬುದು ಭದಂತೆ, ಭದ್ದಂತೆ (ಭದ್ರಂ ತೇ=ನಿನಗೆ ಮಂಗಳವಾಗಲಿ) ಎಂಬುವರ ಸಂಕ್ಷಿಪ್ತ ರೂಪವೆನ್ನುವರು. 'ಭನ್ತೆ' ಎಂಬುದಕ್ಕೆ ಬೌದ್ಧ ಭಿಕ್ಷುಗಳ ಸಂಬೋಧನಾರ್ಥದಲ್ಲಿ ಬಹಳವಾಗಿ ಪ್ರಯೋಗ. [2] ಶಿಲ್ಪವೆಂದರೆ ಕಲೆ, ವಿದ್ಯೆ, ಆಯತನವೆಂದರೆ ಆ ಕಲೆ ವಿದ್ಯೆಗಳ ಬೇರೆ ಬೇರೆ ಶಾಖೆ [3] ಬಾವುಟ ಹಿಡಿಯುವವರು. [4] ಒಂದು ತೆರದ ಸೈನ್ಯಾಧಿಕಾರಿ (adjutant). [5] ಸೇನೆಗೆ ಆಹಾರ ಹಂಚುವವರು. [6] ಮೇಲೆ ಬಿದ್ದು ನುಗ್ಗುವ ಸೈನಿಕರು [7] ಆನೆಯುಂತಹ ವೀರರು. [8] ಚರ್ಮಕಂಚುಕವನ್ನು ಹಾಕಿದವರು. [9] ಲೆಕ್ಕಾಚಾರ ಬಲ್ಲವರು

ಸ್ವರ್ಗ ಮುಟ್ಟಿಸುವ, ಸುಖವಿಪಾಕವುಳ್ಳ, ಸ್ವರ್ಗದಲ್ಲಿ ಮರಳಿ ಜನಿಯಿಸುವಂತಹ ದಕ್ಷಿಣೆಯನ್ನು ಶ್ರಮಣ ಬ್ರಾಹ್ಮಣರಲ್ಲಿ ಪ್ರತಿಸ್ಥಾಪಿಸುವರು. ಭನ್ತೆ! ಹೀಗೆ ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲವನ್ನು ತಿಳಿಸಲು ಶಕ್ಯವೆ?"

೧೫. "ಮಹಾರಾಜ! ಬೇರೆ ಶ್ರಮಣ ಬ್ರಾಹ್ಮಣರನ್ನು ನೀನು ಈ ಪ್ರಶ್ನೆ ಕೇಳಿರುವುದು ಗೊತ್ತಿದೆಯೆ?"

"ಭನ್ತೆ! ಬೇರೆ ಶ್ರಮಣ ಬ್ರಾಹ್ಮಣರನ್ನು ನಾನು ಈ ಪ್ರಶ್ನೆ ಕೇಳಿರುವುದು ಗೊತ್ತಿದೆ."

"ಮಹಾರಾಜ! ಅದಕ್ಕೆ ಅವರು ಹೇಗೆ ಉತ್ತರ ಕೊಟ್ಟರೆಂಬುದನ್ನು ಹೇಳಲು ಆಕ್ಷೇಪವಿಲ್ಲದಿದ್ದರೆ ಹೇಳು."

"ಭನ್ತೆ! ಭಗವಾನನ, ಭಗವಾನನಂತಹವರ ಬಳಿಯಲ್ಲಿ ನನಗೇನೂ ಆಕ್ಷೇಪವಿಲ್ಲ."

"ಹಾಗಾದರೆ ಹೇಳು, ಮಹಾರಾಜ!"

೧೬. "ಭನ್ತೆ! ಒಂದು ಸಲ ನಾನು ಪೂರ್ಣಕಶ್ಯಪನ ಬಳಿ ಹೋದೆನು. ಹೋಗಿ, ಪೂರ್ಣಕಶ್ಯಪನನ್ನು ನುಡಿಸಿ, ಕುಶಲಪ್ರಶ್ನೆಗಳಾದಮೇಲೆ ಒಂದು ಕಡೆ ಕುಳಿತೆನು. ಒಂದು ಕಡೆ ಕುಳಿತು, ಪೂರ್ಣಕಶ್ಯಪನನ್ನು ಹೀಗೆ ನುಡಿಸಿದೆನು—'ಭೋ ಕಶ್ಯಪ! ಬೇರೆ ಬೇರೆ ಶಿಲ್ಪಾಯತನಗಳುಂಟು. . . . [§ ೧೪ರಲ್ಲಿರುವಂತೆ] . . . ಪ್ರತಿಸ್ಥಾಪಿಸುವರು. ಭೋ ಕಶ್ಯಪ! ಹೀಗೆ ಇಲ್ಲಿಯೇ ಕಂಡುಬರುವ ಶ್ರಾಮಣ್ಯ ಫಲವನ್ನು ತಿಳಿಸಲು ಶಕ್ಯವೆ?'

೧೭. "ಹೀಗೆನ್ನಲು ಭನ್ತೆ, ಪೂರ್ಣಕಶ್ಯಪನು ನನಗೆ ಹೀಗೆಂದನು—'ಮಹಾರಾಜ! ಮಾಡಲಿ ಮಾಡಿಸಲಿ, ಕತ್ತರಿಸಲಿ ಕತ್ತರಿಸುವಂತೆ ಮಾಡಲಿ, ಹಿಂಸಿಸಲಿ ಹಿಂಸೆಗೊಳಿಯಿಸಲಿ, ದುಃಖಪಡಿಸಲಿ, ಗೋಳಾಡಿಸಲಿ, ನಡುಗಲಿ ನಡುಗಿಸಲಿ, ಪ್ರಾಣ ಹೋಗಿಸಲಿ, ಕೊಡದುದನ್ನು ತೆಗೆದುಕೊಳ್ಳಲಿ, ಮನೆ ಒಡೆಯಲಿ, ನಿರ್ಲೋಪವಾಗಿ ಲೂಟಿಮಾಡಲಿ, ಕಳ್ಳತನಮಾಡಲಿ, ದಾರಿ ಕಾಯಲಿ, ಪರಪತ್ನಿಯಲ್ಲಿ ಹೋಗಲಿ, ಸುಳ್ಳಾಡಲಿ—ಅವನಿಗೆ ಪಾಪವಾಗದು. ಕ್ಷೌರದ ಕತ್ತಿಯಂತೆ ಹರಿತವಾದ ಚಕ್ರದಿಂದ ಈಯೆಲ್ಲ ಪೃಥ್ವಿಯ ಪ್ರಾಣಿಗಳನ್ನು ಒಂದೇ ಮಾಂಸರಾಶಿಯಾಗಿಸಲಿ, ಒಂದೇ ಮಾಂಸ ಪುಂಜವಾಗಿಸಲಿ—ಅದರಿಂದ ಪಾಪ ಸಂಚಯವಿಲ್ಲ, ಪಾಪ ಬರುವುದಿಲ್ಲ. ಗಂಗೆಯ ದಕ್ಷಿಣತೀರದಲ್ಲಿಯೇ ಕೊಲ್ಲುತ್ತ, ಘಾತಿಸುತ್ತ, ಕತ್ತರಿಸುತ್ತ, ಕತ್ತರಿಸುವಂತೆ ಮಾಡುತ್ತ, ಗೋಳುಹುಯ್ಯುತ್ತ, ಗೋಳುಹುಯಿಸುತ್ತ ಬರಲಿ—ಅದರಿಂದ ಪಾಪ ಸಂಚಯವಿಲ್ಲ, ಪಾಪಬರುವುದಿಲ್ಲ. ಗಂಗೆಯ ಉತ್ತರ ತೀರದಲ್ಲಿಯೇ ದಾನಕೊಡುತ್ತ,

ದಾನಕೊಡಿಸುತ್ತ, ಯಾಗಮಾಡುತ್ತ, ಯಾಗಮಾಡಿಸುತ್ತ ಬರಲಿ—ಅದರಿಂದ ಪುಣ್ಯಾ ಸಂಚಯವಿಲ್ಲ, ಪುಣ್ಯಾ ಬರುವುದಿಲ್ಲ. ದಾನದಿಂದ, ದಮೆಯಿಂದ, ಸಂಯಮದಿಂದ, ಸತ್ಯವಾದದಿಂದ ಪುಣ್ಯವಿಲ್ಲ, ಪುಣ್ಯಾ ಬರುವುದಿಲ್ಲ.'

೧೮. "ಹೀಗೆ ಭನ್ತೆ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಾಫಲವನ್ನು ಕೇಳಿದರೆ, ಪೂರ್ಣಕಶ್ಯಪನು ಅಕರಣ[1]ವನ್ನು ತಿಳಿಸಿದನು. ಭನ್ತೆ! ಆಮ್ರವನ್ನು ಕೇಳಿದರೆ ಲಬುಜ[2]ವನ್ನು ತಿಳಿಸುವಂತೆ, ಲಬುಜವನ್ನು ಕೇಳಿದರೆ ಆಮ್ರವನ್ನು ತಿಳಿಸುವಂತೆ—ಅಂತೆಯೇ, ಭನ್ತೆ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಾಫಲವನ್ನು ಕೇಳಿದರೆ, ಪೂರ್ಣಕಶ್ಯಪನು ಅಕರಣವನ್ನು ತಿಳಿಸಿದನು. ಆಗ ಭನ್ತೆ, ನನಗೆ ಹೀಗೆನಿಸಿತು—'ನನ್ನ ರಾಜ್ಯದಲ್ಲಿ ವಾಸಿಸುವ ಶ್ರಮಣನಿಗಾಗಲಿ, ಬ್ರಾಹ್ಮಣನಿಗಾಗಲಿ ನನ್ನಂತಹವನು ಪ್ರತಿಹೇಳುವುದನ್ನು ಯೋಚಿಸುವುದಾದರೂ ಹೇಗೆ?' ಅದರಿಂದ ಭನ್ತೆ, ಪೂರ್ಣಕಶ್ಯಪನು ಹೇಳಿದುದಕ್ಕೆ ನಾನು ಅಭಿನಂದಿಸಲಿಲ್ಲ, ದೂಷಿಸಲೂ ಇಲ್ಲ. ಅಭಿನಂದಿಸದೆ, ದೂಷಿಸದೆ, ಮನವೊಪ್ಪದಿದ್ದರೂ ಮನವೊಪ್ಪದುದನ್ನು ಪ್ರಕಟಪಡಿಸದೆ, ಅವನ ಮಾತನ್ನು ಸ್ವೀಕರಿಸದೆ, ತಿರಸ್ಕರಿಸದೆ, ಆಸನದಿಂದ ಎದ್ದು ಹೊರಟೆನು.

೧೯. [ಇಲ್ಲಿಯದು § ೧೬ರಂತೆ. ಆದರೆ 'ಪೂರ್ಣಕಶ್ಯಪ'ನಿಗೆ ಬದಲಾಗಿ 'ಮಕ್ಖಲಿ ಗೋಶಾಲ'ನೆಂದು ಓದಿಕೊಳ್ಳಬೇಕು.]

೨೦. "ಹೀಗೆನ್ನಲು ಭನ್ತೆ, ಮಕ್ಖಲಿ ಗೋಶಾಲನು ನನಗೆ ಹೀಗೆಂದನು—'ಮಹಾರಾಜ! ಸತ್ತ್ವಗಳ ಸಂಕ್ಲೇಶಕ್ಕೆ ಹೇತುವಿಲ್ಲ, ಪ್ರತ್ಯಯವಿಲ್ಲ. ಹೇತುವಿಲ್ಲದೆ, ಪ್ರತ್ಯಯವಿಲ್ಲದೆ ಸತ್ತ್ವಗಳು ಸಂಕ್ಲಿಷ್ಟವಾಗುವುವು. ಸತ್ತ್ವಗಳ ವಿಶುದ್ಧಿಗೆ ಹೇತುವಿಲ್ಲ, ಪ್ರತ್ಯಯವಿಲ್ಲ. ಹೇತುವಿಲ್ಲದೆ, ಪ್ರತ್ಯಯವಿಲ್ಲದೆ ಸತ್ತ್ವಗಳು ವಿಶುದ್ಧವಾಗುವುವು. ಆತ್ಮಕಾರವಿಲ್ಲ, ಪರಕಾರವಿಲ್ಲ, ಪುರುಷಕಾರವಿಲ್ಲ, ಬಲವೆಂಬುದಿಲ್ಲ, ವೀರ್ಯವೆಂಬುದಿಲ್ಲ, ಪುರುಷಸ್ಥಾಮ[3]ವೆಂಬುದಿಲ್ಲ, ಪುರುಷಪರಾಕ್ರಮವೆಂಬುದಿಲ್ಲ. [4]ಸರ್ವಸತ್ತ್ವಗಳು, ಸರ್ವಪ್ರಾಣಗಳು, ಸರ್ವಭೂತಗಳು, ಸರ್ವಜೀವಗಳು[4]—ಶಕ್ತಿಯಿಲ್ಲದುವು, ಬಲವಿಲ್ಲದುವು, ವೀರ್ಯವಿಲ್ಲದುವು, [5]ನಿಯತಿ—ಸಂಗತಿ—ಭಾವ—ಪರಿಣತಗಳು[5]; ಈ ಆರು ಜನ್ಮಗಳಿಗನುಸಾರವಾಗಿ ಸುಖದುಃಖಗಳನ್ನು ಅನುಭವಿಸುವುವು.

---

[1] 'ಅಕಿರಿಯಂ'=ಅಕ್ರಿಯ=ಅಕರಣ=ಕೆಲಸಮಾಡದೆ ಇರುವುದು. [2] Bread-fruit. [3] ಬಂದ ಎಡರುಗಳಿಗೆ ಎದುರಾಗಿ ಸ್ಥಿರವಾಗಿ ನಿಲ್ಲುವ ಶಕ್ತಿಯೇ ಸ್ಥಾಮ. [4] ಈ ಸತ್ತ್ವ, ಪ್ರಾಣ, ಭೂತ, ಜೀವಗಳಲ್ಲಿ ಮನುಷ್ಯರಿಂದ ಹಿಡಿದು ಕ್ರಿಮಿಕೀಟ ಗಿಡಮರಗಳಾದಿಯಾಗಿ ಈ ಲೋಕದಲ್ಲಿ ಹುಟ್ಟಿದುದೆಲ್ಲ ಸೇರುತ್ತದೆ. [5] ವಿಧಿನಿಯಮ, ಅಕಸ್ಮಾತ್ತಾಗಿ ಸಂಭವಿಸುವ ಸಂಘಟನೆ, ತಮ್ಮ ಸ್ವಭಾವಗಳಿಗೆ ಅನುಸಾರ ಬಗ್ಗಿ ನಡೆಯತಕ್ಕುವು.

ಅಲ್ಲದೆ ಯೋನಿಪ್ರಮುಖಗಳು[1] ಹದಿನಾಲ್ಕು ಶತಸಹಸ್ರವುಂಟು, ಆರುಸಾವಿರವುಂಟು, ಆರುನೂರುಂಟು. ಕರ್ಮಗಳು ಐದುನೂರುಂಟು, ಐದು ಕರ್ಮವುಂಟು, ಮೂರು ಕರ್ಮವುಂಟು, ಒಂದು ಕರ್ಮವುಂಟು, ಅರ್ಧ ಕರ್ಮವುಂಟು. ಅರುವತ್ತೆರಡು ಪ್ರತಿಪದಗಳು, ಅರುವತ್ತೆರಡು ಅಂತರಕಲ್ಪಗಳು, ಆರು ಅಭಿಜಾತಿಗಳು, ಎಂಟು ಪುರುಷ ಭೂಮಿಗಳು, ನಲವತ್ತೊಂಬತ್ತುನೂರು ಆಜೀವಗಳು, ನಲವತ್ತೊಂಬತ್ತು ನೂರು ಪರಿವ್ರಾಜಕರು, ನಲವತ್ತೊಂಬತ್ತುನೂರು ನಾಗಾವಾಸಗಳು, ಇಪ್ಪತ್ತು ನೂರು ಇಂದ್ರಿಯಗಳು, ಮುವ್ವತ್ತುನೂರು ನಿರಯಗಳು, ಮುವ್ವತ್ತಾರು ರಜೋ ಧಾತುಗಳು, ಸಪ್ತ ಸಂಜ್ಞೀಗರ್ಭಗಳು, ಸಪ್ತ ಅಸಂಜ್ಞೀಗರ್ಭಗಳು, ಏಳು ನಿರ್ಗ್ರಂಥಿ ಗರ್ಭಗಳು, ಏಳು ದೇವತೆಗಳು, ಏಳು ಮನುಷ್ಯರು, ಏಳು ಪಿಶಾಚಗಳು, ಏಳು ಸರಸ್ಸುಗಳು, ಏಳು 'ಪಚುಟ'(?)ಗಳು, ಏಳುನೂರು 'ಪಚುಟ'(?)ಗಳು, ಏಳು ಪಪಾತಗಳು, ಏಳುನೂರು ಪಪಾತಗಳು, ಏಳು ಸ್ವಪ್ನಗಳು, ಏಳುನೂರು ಸ್ವಪ್ನ ಗಳು—ಉಂಟು. ಬಾಲರೂ[2] ಪಂಡಿತರೂ ಸಂಸಾರದಲ್ಲಿ ಓಡಿಯಾಡಿ, ದುಃಖವನ್ನು ಕಡೆಗಾಣಿಸುವ ಎಂಬತ್ತುನಾಲ್ಕು ಶತಸಹಸ್ರ ಮಹಾಕಲ್ಪಗಳುಂಟು. "ಶೀಲದಿಂದ, ವ್ರತದಿಂದ, ತಪದಿಂದ, ಬ್ರಹ್ಮಚರ್ಯದಿಂದ ಅಪರಿಪಕ್ವವಾದ ಕರ್ಮವನ್ನು ಪಕ್ವ ಗೊಳಿಸುವೆನು; ಪರಿಪಕ್ವವಾದ ಕರ್ಮವನ್ನು ಕೊಂಚಕೊಂಚವಾಗಿ ಕರಗಿಸು ವೆನು" ಎಂಬುದಿಲ್ಲ. ಹಾಗೆಯೇ ಸಂಸಾರವು ಮುಗಿಯುವ ವರೆಗೆ ಸುಖದುಃಖ ದಲ್ಲಿ—ಅಳೆದಿಟ್ಟಂತೆ—ಬದಲಾವಣೆಯಿಲ್ಲ, ಏರುತಗ್ಗುಗಳಿಲ್ಲ, ಹೆಚ್ಚುಕಡಮೆಗಳಿಲ್ಲ. ದಾರದ ಉಂಡೆಯು ಎಸೆದರೆ ಬಿಚ್ಚಿಕೊಳ್ಳುವಷ್ಟೇ ದೂರ ಹೇಗೆ ಓಡುವುದೋ, ಹಾಗೆಯೇ ಬಾಲನಾಗಲಿ, ಪಂಡಿತನಾಗಲಿ ಸಂಸಾರದಲ್ಲಿ ಓಡಿಯಾಡಿ ದುಃಖವನ್ನು ಕಡೆಗಾಣಿಸುವನು.'

೨೧. [ಇಲ್ಲಿಯದು § ೧೮ರಂತೆ. ಆದರೆ 'ಪೂರ್ಣಕಶ್ಯಪ'ನಿಗೆ ಬದಲು 'ಮಕ್ಖಲಿ ಗೋಶಾಲ'ನೆಂದೂ 'ಅಕರಣ'ಕ್ಕೆ ಬದಲು 'ಸಂಸಾರ ಶುದ್ಧಿ' ಎಂದೂ ಓದಿಕೊಳ್ಳ ಬೇಕು.]

೨೨. [ಇಲ್ಲಿಯದು § ೧೬ರಂತೆ. ಆದರೆ 'ಪೂರ್ಣಕಶ್ಯಪ'ನಿಗೆ ಬದಲು 'ಅಜಿತಕೇಶಕಂಬಳಿ' ಎಂದು ಓದಿಕೊಳ್ಳಬೇಕು.]

೨೩. "ಹೀಗೆನ್ನಲು ಭನ್ತೆ, ಅಜಿತಕೇಶಕಂಬಳಿಯು ನನಗೆ ಹೀಗೆಂದನು— 'ಮಹಾರಾಜ! ದಾನವೆಂಬುದಿಲ್ಲ, ಇಷ್ಟ[3]ವೆಂಬುದಿಲ್ಲ, ಹೋಮವೆಂಬುದಿಲ್ಲ. ಸುಕೃತ ದುಷ್ಕೃತ ಕರ್ಮಗಳ ಫಲವಿಪಾಕಗಳಿಲ್ಲ. ಈ ಲೋಕವಿಲ್ಲ, ಪರಲೋಕವಿಲ್ಲ. ತಾಯಿ

---

[1] ಜನ್ಮವೆತ್ತುವ ಮುಖ್ಯರೀತಿಗಳು. [2] ಪಂಡಿತರಲ್ಲದವರು. [3] ಮಹಾಯಾಗ.

ಯೆಂಬುದಿಲ್ಲ, ತಂದೆಯೆಂಬುದಿಲ್ಲ, ಉಪಪತ್ತಿಯಿಲ್ಲದ ಸತ್ತ್ವಗಳಿಲ್ಲ. ಸಮ್ಯಗಗ್ರವನ್ನು ಸೇರಿ, ಸಮ್ಯಕ್ ಪ್ರತಿಪನ್ನರಾಗಿ, ಈ ಲೋಕ ಪರಲೋಕಗಳನ್ನು ಸ್ವಂತ ಅಭಿಜ್ಞೆ[1] ಯಿಂದ ಸಾಕ್ಷಾತ್ಕರಿಸಿಕೊಂಡು ತಿಳಿಯಪಡಿಸುವ ಶ್ರಮಣ ಬ್ರಾಹ್ಮಣರು ಲೋಕ ದಲ್ಲಿಲ್ಲ. ಪುರುಷನು ಚತುರ್ಮಹಾಭೂತಗಳಿಂದ ಆದವನು. ಕಾಲವಾದಾಗ ಪೃಥ್ವೀ ಕಾಯವು ಪೃಥ್ವಿಗೆ ಮರಳುವುದು, ಆಪಃಕಾಯವು ಅಪ್ಪಿಗೆ ಮರಳುವುದು, ತೇಜಃ ಕಾಯವು ತೇಜಸ್ಸಿಗೆ ಮರಳುವುದು, ವಾಯುಕಾಯವು ವಾಯುವಿಗೆ ಮರಳು ವುದು ; ಇಂದ್ರಿಯಗಳು ಆಕಾಶಕ್ಕೆ ಹೋಗುವುವು. ಆಸಂದಿ[2] ಐದನೆಯದಾಗಿ[3] ಪುರುಷರು ಮೃತನನ್ನು ಕೊಂಡುಹೋಗುವರು. ಸುಡುಗಾಡಿನ ವರೆಗೆ ಪದಗಳನ್ನು ಹಾಡುವರು. ಮೂಳೆಗಳು ಕಾಪೋತಕ[4]ಗಳಾಗುವುವು. ಅವನ ಆಹುತಿಗಳು ಬೂದಿ ಯಲ್ಲಿ ಕೊನೆಯಾಗುವುವು. ಈ ದಾನವೆಂಬುದು ಮೂಢರ ವಾದ. ಅದು ಆರ್ಥಿಕ ವಾದ[5]ವೆಂದು ಹೇಳುವುದು ತುಚ್ಛವಾದ ಸುಳ್ಳು, ವಿಲಾಪ. ಬಾಲರೂ ಪಂಡಿತರೂ ಕಾಯ ಮುರಿಯಲು ದೂರಾಗಿ ನಶಿಸುವರು. ಮರಣಾನಂತರ ಅವರು ಇಲ್ಲ.'

೨೪. [ಇಲ್ಲಿಯದು § ೧೮ರಂತೆ. ಆದರೆ 'ಪೂರ್ಣಕಶ್ಯಪನ'ಗೆ ಬದಲು 'ಅಜಿತ ಕೇಶಕಂಬಳಿ'ಯೆಂದೂ 'ಅಕರಣ'ಕ್ಕೆ ಬದಲು 'ಉಚ್ಛೇದ ವಾದ'ವೆಂದೂ ಓದಿ ಕೊಳ್ಳಬೇಕು.]

೨೫. [ಇಲ್ಲಿಯದು § ೧೭ರಂತೆ. ಆದರೆ 'ಪೂರ್ಣಕಶ್ಯಪ'ನಿಗೆ ಬದಲಾಗಿ 'ಪಕುಧ ಕಾತ್ಯಾಯನ' ಎಂದು ಓದಿಕೊಳ್ಳಬೇಕು.]

೨೬. "ಹೀಗೆನ್ನಲು ಭನ್ತೆ, ಪಕುಧ ಕಾತ್ಯಾಯನನು ನನಗೆ ಹೀಗೆಂದನು— 'ಮಹಾರಾಜ! ಈ ಏಳು ಕಾಯಗಳು ಮಾಡಲ್ಪಟ್ಟುವಲ್ಲ, ಹೇಳಿ ಮಾಡಿಸಿದುವಲ್ಲ, ನಿರ್ಮಿತವಾದುವಲ್ಲ, ನಿರ್ಮಾಣವಾದುವಲ್ಲ ; ಬಂಜೆಗಳು ; ಬಲವಾಗಿ ನಿಲ್ಲಿಸಿದ ಕಂಬದಂತೆ, ಪರ್ವತಕೂಟದಂತೆ ಸ್ಥಿರವಾದುವು ; ಅವು ಚಲಿಸವು, ಅವು ಪರಿಣಮಿ ಸವು, ಒಂದನ್ನೊಂದು ಬಾಧಿಸವು ; ಸುಖಕ್ಕಾಗಲಿ, ದುಃಖಕ್ಕಾಗಲಿ, ಸುಖದುಃಖ ಗಳಿಗಾಗಲಿ ಒಂದಕ್ಕೊಂದು ಆಗುವುದಿಲ್ಲ. ಏಳು ಯಾವುದು? ಪೃಥ್ವೀಕಾಯ, ಆಪಃಕಾಯ, ತೇಜಃಕಾಯ, ವಾಯುಕಾಯ, ಸುಖ, ದುಃಖ, ಏಳನೆಯದಾಗಿ ಜೀವ. ಈ ಏಳು ಕಾಯಗಳು ಮಾಡಲ್ಪಟ್ಟುವಲ್ಲ. . . . [ಮೇಲಿನಂತೆ]. . . . ಒಂದಕ್ಕೊಂದು ಆಗುವುದಿಲ್ಲ. ಆದರಿಂದ ಕೊಲ್ಲುವವನಿಲ್ಲ, ಕೊಲ್ಲಿಸುವವನಿಲ್ಲ, ಕೇಳಿ

---

[1] ಸಾಮಾನ್ಯರಿಗೆ ಮೀರಿದ ಜ್ಞಾನ. [2] ಅಳತೆ ಮೀರಿದ ಆಸನ (ಇಲ್ಲಿ ಚಟ್ಟ). [3] ನಾಲ್ವರು ವಾಹಕರು, ಆಸಂದಿ ಐದು. [4] ಪಾರಿವಾಳದಂತೆ ಬೂದುಬಣ್ಣ. [5] ಇದರಿಂದ ಪ್ರಯೋಜನವಿರು ವುದು ಎಂಬ ವಾದ.

ಯಿಂದ ಕೇಳುವವನಿಲ್ಲ, ಮಾತನಾಡಿಸುವವನಿಲ್ಲ, ತಿಳಿದವನಿಲ್ಲ, ತಿಳಿಸುವವನಿಲ್ಲ. ತೀಕ್ಷ್ಣವಾದ ಶಸ್ತ್ರದಿಂದ ತಲೆಯನ್ನು ಸೀಳಿದರೂ ಯಾರೂ ಯಾರ ಜೀವವನ್ನೂ ಹೋಗಲಾಡಿಸರು ; ಶಸ್ತ್ರವು ಏಳು ಕಾಯಗಳ ಅಂತರದಲ್ಲಿ ಬೀಳುತ್ತದೆ, ಅಷ್ಟೆ.''

೨೭. [ಇಲ್ಲಿಯದು § ೧೮ರಂತೆ. ಆದರೆ 'ಪೂರ್ಣಕಶ್ಯಪ'ನಿಗೆ ಬದಲು 'ಪಕುಧ ಕಾತ್ಯಾಯನ'ನೆಂದೂ 'ಅಕರಣ'ಕ್ಕೆ ಬದಲು 'ಬೇರೆ ಏನೇನೋ' ಎಂದೂ ಓದಿಕೊಳ್ಳಬೇಕು.]

೨೮. [ಇಲ್ಲಿಯದು § ೧೯ರಂತೆ. ಆದರೆ 'ಪೂರ್ಣಕಶ್ಯಪ'ನಿಗೆ ಬದಲು 'ನಿಗ್ರ್ರಂಥನಾತಪುತ್ರ' ಎಂದು ಓದಿಕೊಳ್ಳಬೇಕು.]

೨೯. ''ಹೀಗೆನ್ನಲು ಭಸ್ತೆ, ನಿಗ್ರ್ರಂಥನಾತಪುತ್ರನು ನನಗೆ ಹೀಗೆಂದನು— 'ಮಹಾರಾಜ! ಇಲ್ಲ ನಿಗ್ರ್ರಂಥನು [1]ಚಾತುರ್ಯಾಮ ಸಂವರ ಸಂವೃತನು.[1] ಮಹಾರಾಜ! ನಿಗ್ರ್ರಂಥನು ಚಾತುರ್ಯಾಮಸಂವರ ಸಂವೃತನು ಹೇಗೆ? ಇಲ್ಲಿ ಮಹಾರಾಜ,[2] ನಿಗ್ರ್ರಂಥನು ಸರ್ವವಾರೀ ವಾರಿತನು, ಸರ್ವವಾರೀ ಯುತನು, ಸರ್ವವಾರೀ ಧೌತನು, ಸರ್ವವಾರೀ ಸ್ಪೃಷ್ಟನು.[2] ಮಹಾರಾಜ! ನಿಗ್ರ್ರಂಥನು ಚಾತುರ್ಯಾಮಸಂವರ ಸಂವೃತನಾಗಿರುವುದು ಹೀಗೆ. ಮಹಾರಾಜ! ನಿಗ್ರ್ರಂಥನು ಹೀಗೆ ಚಾತುರ್ಯಾಮಸಂವರ ಸಂವೃತನಾಗಿರುವುದರಿಂದ, ಆ ನಿಗ್ರ್ರಂಥನನ್ನು ಗತಾತ್ಮ[3]ನೆಂದು, ಯತಾತ್ಮ[4]ನೆಂದು, ಸ್ಥಿತಾತ್ಮ[5]ನೆಂದು ಕರೆಯುವರು.'

೩೦. [ಇಲ್ಲಿಯದು § ೧೮ರಂತೆ. ಆದರೆ 'ಪೂರ್ಣಕಶ್ಯಪ'ನಿಗೆ ಬದಲು 'ನಿಗ್ರ್ರಂಥನಾತಪುತ್ರ'ನೆಂದೂ 'ಅಕರಣ'ಕ್ಕೆ ಬದಲು 'ಚಾತುರ್ಯಾಮ ಸಂವರ'ವೆಂದೂ ಓದಿಕೊಳ್ಳಬೇಕು.]

೩೧. [ಇಲ್ಲಿಯದು § ೧೯ರಂತೆ. ಆದರೆ 'ಪೂರ್ಣಕಶ್ಯಪ'ನಿಗೆ ಬದಲು 'ಸಂಜಯ ಬೆಲಟ್ಠಿಪುತ್ರ' ಎಂದು ಓದಿಕೊಳ್ಳಬೇಕು.]

೩೨. 'ಹೀಗೆನ್ನಲು ಭಸ್ತೆ, ಸಂಜಯ ಬೆಲಟ್ಠಿಪುತ್ರನು ನನಗೆ ಹೀಗೆಂದನು— 'ಪರಲೋಕವುಂಟೇ ಎಂದು ಕೇಳಿದರೆ, ಪರಲೋಕವಿದೆಯೆಂದು ನನಗೆನಿಸಿದರೆ,

---

[1] ಯಾಮ, ಸಂವರ=ಸಂಯಮ ನಾಲ್ಕು ತೆರದ ಸಂಯಮಗಳನ್ನು ನಡೆಸುವ ಆತ್ಮಸಂಯಮದಿಂದ ಕೂಡಿದವನು. [2] ಈ ತೆರದ ವಾಕ್ಸರಣಿಯು ನಿರ್ಗ್ರಂಥನ ವಾಕ್ಸರಣಿಯ ವಿಡಂಬನೆಯಿರಬಹುದೆನ್ನುವರು. ನಿರ್ಗ್ರಂಥನ ನಾಲ್ಕು ತೆರದ ಸಂಯಮಗಳು. ಎಲ್ಲ ನೀರನ್ನೂ ನಿವಾರಿಸುವನು, ನಿವಾರಿಸಬೇಕಾದ ಕೆಟ್ಟುದನ್ನೆಲ್ಲ ನಿವಾರಿಸಿ ಆ ಸಂಯಮದಿಂದ ಕೂಡಿರುವನು ; ನಿವಾರಿಸಬೇಕಾದುದನ್ನೆಲ್ಲ ತೊಳೆದುಹಾಕಿರುವನು, ನಿವಾರಿಸಬೇಕಾದುವನ್ನು ನಿವಾರಿಸಿದೆನೆಂಬ ಭಾವನೆಯಿಂದ ಸೋಂಕಿರುವನು. [3] ಗುರಿ ಮುಟ್ಟಿದ ಚಿತ್ತವುಳ್ಳವನು. [4] ಸಂಯಮಪಡೆದ ಚಿತ್ತವುಳ್ಳವನು. [5] ಸುಪ್ರತಿಷ್ಠಿತವಾದ ಚಿತ್ತವುಳ್ಳವನು.

ಪರಲೋಕವಿದೆಯೆಂದು ತಿಳಿಸುವೆನು. ಆದರೆ ನಾನು ಹಾಗೇ ಹೀಗೇ ಎಂದು ಹೇಳೆನು. ಬೇರೆ ತೆರವೆಂದೂ ಹೇಳೆನು. ಪರಲೋಕವಿಲ್ಲವೆನ್ನೆನು, ಇದೆಯೆನ್ನೆನು. ಪರಲೋಕವಿಲ್ಲವೆ? ಪರಲೋಕವಿದೆಯೆ ಇಲ್ಲವೆ? ಉಪಪತ್ತಿಯಿಂದಾದ ಸತ್ತ್ವಗಳುಂಟೇ ಇಲ್ಲವೆ? ಸುಕೃತ ದುಷ್ಕೃತ ಕರ್ಮಗಳ ಫಲವಿಪಾಕಗಳುಂಟೇ ಇಲ್ಲವೆ? ತಥಾಗತ[1]ನು ಮರಣಾನಂತರ ಉಂಟೇ ಇಲ್ಲವೆ? ಎಂದು ಕೇಳಿದರೆ—ಉಂಟು ಇಲ್ಲ ಎಂದು ನನಗೆನಿಸಿದರೆ, ಉಂಟು ಇಲ್ಲ ಎಂದು ಹೇಳುವೆನು. ಆದರೆ ನಾನು ಹಾಗೇ ಹೀಗೇ ಎಂದು ಹೇಳೆನು. ಬೇರೆ ತೆರವೆಂದೂ ಹೇಳೆನು. ಇಲ್ಲವೆನ್ನೆನು, ಇದೆಯೆನ್ನೆನು.'

೩೩. "ಹೀಗೆ ಭನ್ತೆ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲವನ್ನು ಕೇಳಿದರೆ, ಸಂಜಯು ಬೆಲಟ್ಠಿಪುತ್ರನು ವಿಕ್ಷೇಪ[2]ವನ್ನು ತಿಳಿಸಿದನು. ಭನ್ತೆ! ಆಮ್ರವನ್ನು ಕೇಳಿದರೆ ಲಬುಜವನ್ನು ತಿಳಿಸುವಂತೆ, ಲಬುಜವನ್ನು ಕೇಳಿದರೆ ಆಮ್ರವನ್ನು ತಿಳಿಸುವಂತೆ—ಅಂತೆಯೇ ಭನ್ತೆ, ಇಲ್ಲಿಯೇ ಕಾಡುಬರುವ ಶ್ರಾಮಣ್ಯಫಲವನ್ನು ಕೇಳಿದರೆ, ಸಂಜಯು ಬೆಲಟ್ಠಿಪುತ್ರನು ವಿಕ್ಷೇಪವನ್ನು ತಿಳಿಸಿದನು. ಆಗ ಭನ್ತೆ, ನನಗೆ ಹೀಗೆನಿಸಿತು—'ಈ ಎಲ್ಲ ಶ್ರಮಣ ಬ್ರಾಹ್ಮಣರು ಸರ್ವರೂ ಬಾಲರು, ಸರ್ವರೂ ಮೂಢರು. ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲವನ್ನು ಕೇಳಿದರೆ ವಿಕ್ಷೇಪವನ್ನು ಏಕೆ ತಿಳಿಸುವರು?' ಆಗ ಭನ್ತೆ, ನನಗೆ ಹೀಗೆನಿಸಿತು—'ನನ್ನ ರಾಜ್ಯದಲ್ಲಿ ವಾಸಿಸುವ ಶ್ರಮಣನಿಗಾಗಲಿ ಬ್ರಾಹ್ಮಣನಿಗಾಗಲಿ ನನ್ನಂತಹವನು ಪ್ರತಿಹೇಳುವುದನ್ನು ಯೋಚಿಸುವುದಾದರೂ ಹೇಗೆ?' ಅದರಿಂದ ಭನ್ತೆ, ಸಂಜಯು ಬೆಲಟ್ಠಿಪುತ್ರನು ಹೇಳಿದುದಕ್ಕೆ ನಾನು ಅಭಿನಂದಿಸಲಿಲ್ಲ, ದೂಷಿಸಲೂ ಇಲ್ಲ. ಅಭಿನಂದಿಸದೆ, ದೂಷಿಸದೆ, ಮನವೊಪ್ಪದಿದ್ದರೂ ಮನವೊಪ್ಪದುದನ್ನು ಪ್ರಕಟಪಡಿಸದೆ, ಅವನ ಮಾತನ್ನು ಸ್ವೀಕರಿಸದೆ, ತಿರಸ್ಕರಿಸದೆ, ಆಸನದಿಂದ ಎದ್ದು ಹೊರಟೆನು.

೩೪. "ಭನ್ತೆ! ಈಗ ಭಗವಂತನನ್ನೂ ಹೀಗೆ ಕೇಳುವೆನು—'ಭನ್ತೆ! ಬೇರೆ ಬೇರೆ ಶಿಲ್ಪಾಯತನಗಳುಂಟು: ಹಸ್ತ್ಯಾರೋಹಿಗಳು, ಅಶ್ವಾರೋಹಿಗಳು, ರಥಿಕರು, ಧನುರ್ಗ್ರಾಹಿಗಳು, ಚೇಲಕರು, ಚಲಕರು, ಪಿಂಡದಾಯಿಕರು, ಉಗ್ರ ರಾಜಪುತ್ರರು, ಪ್ರಸ್ಕಂದಿಗಳು, ಮಹಾನಾಗರು, ಶೂರರು, ಚರ್ಮಯೋಧರು, ದಾಸಕಪುತ್ರರು, ಅಡುಗೆಯವರು, ನಾಪಿತರು, ಸ್ನಾಪಕರು, ಮಿಠಾಯಿ ಮಾಡುವವರು, ಮಾಲಾಕಾರರು, ರಜಕರು, ನೆಯ್ಗೆಯವರು, ಬುಟ್ಟಿ ಹೆಣೆಯುವವರು, ಕುಂಬಾರರು, ಗಣಕರು, ಮುದ್ರಿಕರು ಇನ್ನೂ ಬೇರೆ ಬೇರೆ ಇಂತಹ ಶಿಲ್ಪಾಯತನಗಳುಂಟು. ಅವರು ತಮ್ಮ ಶಿಲ್ಪಫಲವನ್ನು ಆಗಲೇ ಕಂಡುಂಡು, ತಾವು ಸುಖಿಸಿ ಹಾಯಾಗಿರುವರು; ತಂದೆ

---

[1] ಬುದ್ಧನ ಪ್ರತಿನಾಮ. ಅರ್ಥ ನಿಷ್ಪಷ್ಟವಾಗಿಲ್ಲ. [2] ಅರ್ಥವಿಲ್ಲದ ಹರಟೆ.

ತಾಯಿಯನ್ನೂ ಹೆಂಡಿರು ಮಕ್ಕಳನ್ನೂ ಮಿತ್ರರನ್ನೂ ಸುಖಪಡಿಸಿ ಹಾಯಾಗಿರಿಸುವರು. ಮೇಲುಮಾಡುವ, ಸ್ವರ್ಗ ಮುಟ್ಟಿಸುವ, ಸುಖವಿಪಾಕವುಳ್ಳ, ಸ್ವರ್ಗದಲ್ಲಿ ಮರಳಿ ಜನಿಯಿಸುವಂತಹ ದಕ್ಷಿಣೆಯನ್ನು ಶ್ರಮಣ ಬ್ರಾಹ್ಮಣರಲ್ಲಿ ಪ್ರತಿಸ್ಥಾಪಿಸುವರು. ಭನ್ತೆ! ಹೀಗೆ ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲವನ್ನು ತಿಳಿಸಲು ಶಕ್ಯವೆ? ''

"ಶಕ್ಯ, ಮಹಾರಾಜ! ಅದಕ್ಕಾಗಿ ಮಹಾರಾಜ, ನಿನ್ನನ್ನೇ ಪ್ರತಿಪ್ರಶ್ನಿಸುವೆನು. ನಿನಗೆ ಹೇಗೆನಿಸುವುದು, ಹಾಗೆ ಉತ್ತರಕೊಡು.

೩೫. "ಏನೆಂಬೆ ಮಹಾರಾಜ! ಇಲ್ಲಿ, ನಿನಗಿಂತ ಮೊದಲು ಎದ್ದು, ಕಡೆಗೆ ಮಲಗಿ, ಹೇಳಿದಂತೆ ಕೇಳಿಕೊಂಡು, ಕೆಲಸದಲ್ಲಿ ಮನಸ್ಸಿಗೆ ಒಪ್ಪಿ, ಪ್ರಿಯವಾದಿಯಾಗಿ, ಇಂಗಿತಜ್ಞನಾದ ಕರ್ಮಕರ[1]ನು, ನಿನ್ನ ದಾಸನು, ಇದ್ದಾನೆ. ಅವನಿಗೆ ಹೀಗೆನಿಸುವುದು—'ಪುಣ್ಯಗಳ ಗತಿಯೂ ಪುಣ್ಯಗಳ ವಿಪಾಕವೂ ಆಶ್ಚರ್ಯವಲಾ! ಅದ್ಭುತವಲಾ! ಈ ಮಗಧದ ರಾಜ ಅಜಾತಶತ್ರು ವೈದೇಹಿಪುತ್ರನೂ ಮನುಷ್ಯನು, ನಾನೂ ಮನುಷ್ಯನು. ಈ ಅಜಾತಶತ್ರು ಪಂಚಕಾಮಗುಣ[2]ಗಳಿಂದ ಕೂಡಿ, ಅದರಲ್ಲಿ ಲೀನನಾಗಿ ದೇವರೋ ಎಂಬಂತೆ ವರ್ತಿಸುವನು. ನಾನೋ—ಮೊದಲು ಎದ್ದು, ಕಡೆಗೆ ಮಲಗಿ, ಹೇಳಿದಂತೆ ಕೇಳಿಕೊಂಡು, ಕೆಲಸದಲ್ಲಿ ಮನಸ್ಸಿಗೆ ಒಪ್ಪಿ, ಪ್ರಿಯವಾದಿಯಾಗಿ, ಇಂಗಿತಜ್ಞನಾದ ಕರ್ಮಕರನು, ದಾಸನು. ಪುಣ್ಯಗಳನ್ನು ಮಾಡಿ ನಾನೂ ಅವನಂತಾಗೆನೆ! ಕೇಶಶ್ಮಶ್ರುಗಳನ್ನು ತೆಗೆದು, ಕಾಷಾಯವಸ್ತ್ರಗಳನ್ನು ಹೊದೆದು, [3]ಗಾರ್ಹಸ್ಥ್ಯದಿಂದ ಸಂನ್ಯಾಸಕ್ಕೆ[3] ನಾನು ಪರಿವ್ರಜಿಸಬಾರದೇಕೆ?' ಆ ಮೇಲೆ ಅವನು ಕೇಶಶ್ಮಶ್ರುಗಳನ್ನು ತೆಗೆದು, ಕಾಷಾಯವಸ್ತ್ರಗಳನ್ನು ಹೊದೆದು, ಗಾರ್ಹಸ್ಥ್ಯದಿಂದ ಸಂನ್ಯಾಸಕ್ಕೆ ಪರಿವ್ರಜಿಸುವನು; ಪ್ರವ್ರಜಿತರ ಸಮನಾಗಿ, ಮೈ ಮಾತು ಮನಸ್ಸುಗಳಲ್ಲಿ ಸಂವೃತನಾಗಿ ವಿಹರಿಸುತ್ತ, ಊಟ ಬಟ್ಟೆ ಮಾತ್ರದಿಂದ ಸಂತುಷ್ಟನಾಗಿ, ಪ್ರವಿವೇಕ[4]ದಲ್ಲಿ ಅಭಿರಮಿಸುವನು. ಅದನ್ನು ನಿನ್ನ ಪುರುಷರು ಹೀಗೆ ತಿಳಿಸುವರು—'ದೇವ! ತಿಳಿಯದೆ? ಮೊದಲು ಎದ್ದು, ಕಡೆಗೆ ಮಲಗಿ, . . . [ಮೇಲಿನಂತೆ] . . . ನಿನ್ನ ದಾಸನು, ಅವನು ದೇವ! ಕೇಶಶ್ಮಶ್ರುವನ್ನು ತೆಗೆದು. . . [ಮೇಲಿನಂತೆ]. . . ಪರಿವ್ರಜಿಸಿದನು; ಪ್ರವ್ರಜಿತರ ಸಮನಾಗಿ . . . [ಮೇಲಿನಂತೆ]. . . ಅಭಿರಮಿಸುವನು.' ಆಗ ನೀನು 'ಆ ಪುರುಷನು ಇಲ್ಲಿ ಬರಲಿ. ಪುನಃ ಮೊದಲು ಎದ್ದು. . . [ಮೇಲಿನಂತೆ]. . . . ಇಂಗಿತಜ್ಞನಾದ ಕರ್ಮಕರನಾಗಲಿ, ದಾಸನಾಗಲಿ' ಎಂದು ಹೇಳುವೆಯೇನು?"

---

[1] ಕೂಲಿಯಾಳು. [2] ಪಂಚೇಂದ್ರಿಯಗಳಿಂದ ಅನುಭವಿಸುವ ಸುಖ [3] 'ಅಗಾರಸ್ಮಾ ಅನಗಾರಿಯಂ'=ಮನೆಯಿಂದ ಮನೆಯಿಲ್ಲದ ಸ್ಥಿತಿಗೆ. [4] ಏಕಾಂತವಾಸ.

೩೬. "ಆಗದಾಗದು, ಭನ್ತೆ! ಅದರ ಬದಲು ನಾನೇ ಅಭಿವಂದಿಸುವೆನು, ಆಸನದಿಂದ ಪ್ರತ್ಯುತ್ಥಾನಗೆಯ್ಯುವೆನು, ನಿಮಂತ್ರಿಸುವೆನು, [1]ಚೀವರ—ಪಿಂಡಪಾತ್ರ—ಶಯನಾಸನ—ಗ್ಲಾನ ಪ್ರತ್ಯಯ ಭೈಷಜ್ಯ ಪರಿಷ್ಕಾರ[1]ಗಳಿಂದ ಅಭಿನಿಮಂತ್ರಿಸುವೆನು. ಅವನ ಧರ್ಮಕ್ಕೆ ತಕ್ಕ ರಕ್ಷಾವರಣ ಗುಪ್ತಿಯನ್ನು ಏರ್ಪಡಿಸುವೆನು."

"ಏನೆಂಬೆ ಮಹಾರಾಜ! ಈಗ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲವು ಉಂಟೇ ಇಲ್ಲವೆ?"

"ನಿಜ, ಭನ್ತೆ! ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲ ಉಂಟು."

"ಮಹಾರಾಜ! ನಾನು ತಿಳಿಸಿದ, ಇಲ್ಲಿಯೇ ಕಂಡುಬರುವ ಮೊದಲನೆಯ ಶ್ರಾಮಣ್ಯಫಲವು ಇದೇ!"

೩೭. "ಮತ್ತೆ ಭನ್ತೆ! ಹೀಗೆಯೇ ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲ ಬೇರೆಯುದನ್ನು ತಿಳಿಸಲು ಶಕ್ಯವೆ?"

"ಶಕ್ಯ, ಮಹಾರಾಜ! ಅದಕ್ಕಾಗಿ ಮಹಾರಾಜ, ನಿನ್ನನ್ನೇ ಪ್ರತಿಪ್ರಶ್ನಿಸುವೆನು. ನಿನಗೆ ಹೇಗೆನಿಸುವುದು ಹಾಗೆ ಉತ್ತರಕೊಡು." [ಇಲ್ಲಿಯ ಪ್ರಶ್ನೆಯು § ೩೫ರಲ್ಲಿರುವಂತೆ. ಆದರೆ ಅಲ್ಲಿಯ 'ದಾಸ'ನಿಗೆ ಬದಲು, ಇಲ್ಲಿ "ಕೃಷಿಕನಾಗಿ, ಗೃಹಪತಿಯಾಗಿ, ಕಾರಕಾರಕ[2]ನಾಗಿ ರಾಶಿವರ್ಧಕ[3]ನಾದ ನಿನ್ನ ಪುರುಷನು"ಎಂದೂ, ಪರಿವ್ರಜಿಸುವಾಗ "ಅಲ್ಪವಾದ ಭೋಗಸ್ಕಂಧ[4]ವನ್ನೂ ಮಹತ್ತಾದ ಭೋಗಸ್ಕಂಧವನ್ನೂ ಬಿಟ್ಟು, ಅಲ್ಪವಾದ ಜ್ಞಾತಿಪರಿವೃತ್ತ[5]ವನ್ನೂ ಮಹತ್ತಾದ ಜ್ಞಾತಿಪರಿವೃತ್ತವನ್ನೂ ಬಿಟ್ಟು, ಕೇಶಶ್ಮಶ್ರುಗಳನ್ನು ತೆಗೆದು. . . ." ಇತ್ಯಾದಿಯಾಗಿ ಓದಿಕೊಳ್ಳಬೇಕು.]

೩೮. "ಆಗದಾಗದು ಭನ್ತೆ! . . . [§ ೩೬ರಂತೆ]. . . . ಏರ್ಪಡಿಸುವೆನು.'

"ಏನೆಂಬೆ ಮಹಾರಾಜ! . . . [§ ೩೬ರಂತೆ]. . . . ಉಂಟೇ ಇಲ್ಲವೆ?"

"ನಿಜ, ಭನ್ತೆ! . . . [§ ೩೬ರಂತೆ]. . . . ಉಂಟು."

"ಮಹಾರಾಜ! ನಾನು ತಿಳಿಸಿದ, ಇಲ್ಲಿಯೇ ಕಂಡುಬರುವ ಎರಡನೆಯ ಶ್ರಾಮಣ್ಯಫಲವು ಇದೇ."

೩೯. "ಮತ್ತೆ ಭನ್ತೆ! ಇಲ್ಲಿಯೇ ಕಂಡುಬರುವ ಈ ಶ್ರಾಮಣ್ಯಫಲಗಳಿಗಿಂತ

---

[1] ಬಟ್ಟೆ, ಭಿಕ್ಷಾಪಾತ್ರೆ, ಮಲಗಿ ಕೂರುವ ಸ್ಥಳ, ಕಾಯಿಲೆಯಾದಾಗ ಔಷಧಿ—ಇವು ನಾಲ್ಕೂ ಭಿಕ್ಷುವಿಗೆ ಕಡ್ಡಾಯವಾಗಿ ಇದ್ದೇ ತೀರಬೇಕು ಇವೇ ನಾಲ್ಕು ಪರಿಷ್ಕಾರ. [2] ಧಾರ್ಮಿಕ ಕಾರ್ಯಗಳನ್ನು ಮಾಡುವವನು. [3] ದೊರೆಯ ಭಂಡಾರವನ್ನು ಬೆಳಸುವವನು. [4] ಭೋಗಗಳ ರಾಶಿ. [5] ಬಂಧುಗಳ ಗುಂಪು

ಮೇಲಾದ, ಸಿಹಿಯಾದ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲ ಬೇರೆಯದನ್ನು ತಿಳಿಸಲು ಶಕ್ಯವೆ?''

"ಶಕ್ಯ, ಮಹಾರಾಜ! ಅದರಿಂದ ಮಹಾರಾಜ, ಕಿವಿಗೊಟ್ಟು ಕೇಳು. ಸಾಧುವಾದುದನ್ನು ಮನಸ್ಸಿನಲ್ಲಿಡು, ಹೇಳುವೆನು.''

"ಹಾಗೆಯೇ ಆಗಲಿ, ಭನ್ತೆ!'' ಎಂದು ಮಗಧದ ರಾಜ ಅಜಾತಶತ್ರು ವೈದೇಹಿಪುತ್ರನು ಭಗವಂತನ ಮಾತಿಗೆ ಒಪ್ಪಿದನು. ಭಗವಾನನು ಹೀಗೆಂದನು:

೪೦. "ಮಹಾರಾಜ! [1]ಅರ್ಹನೂ ಸಮ್ಯಕ್ಸಂಬುದ್ಧನೂ ವಿದ್ಯಾಚರಣಸಂಪನ್ನನೂ ಸುಗತನೂ ಲೋಕವಿದನೂ ಅನುತ್ತರನಾದ ಪುರುಷದಮ್ಯಸಾರಥಿಯೂ ದೇವಮನುಷ್ಯರಿಗೆ ಶಾಸ್ತೃವೂ ಬುದ್ಧನೂ ಭಗವಾನನೂ[1] ಆದ ತಥಾಗತನು ಲೋಕದಲ್ಲಿ ಹುಟ್ಟುತ್ತಾನೆ. ಅವನು ಈ ಲೋಕವನ್ನು—ದೇವ ಮಾರ[2] ಬ್ರಹ್ಮ ಶ್ರಮಣ ಬ್ರಾಹ್ಮಣ ಸಹಿತವಾಗಿ, ದೇವ ಮನುಷ್ಯ ಸಹಿತವಾಗಿ—ಸ್ವಂತ ಅಭಿಜ್ಞೆಯಿಂದ ಕಂಡುಕೊಂಡು ತಿಳಿಯಪಡಿಸುತ್ತಾನೆ. [3]ಆದಿ ಮಧ್ಯಾಂತ ಕಲ್ಯಾಣವಾದ ಧರ್ಮ[3]ವನ್ನು [4]ಸಾರ್ಥವಾಗಿ, ಸವ್ಯಂಜನವಾಗಿ[4] ಸಾರುವನು. ಕೇವಲ ಪರಿಪೂರ್ಣವೂ ಪರಿಶುದ್ಧವೂ ಆದ ಬ್ರಹ್ಮಚರ್ಯವನ್ನು ಪ್ರಕಾಶಗೊಳಿಸುವನು.

೪೧. "ಗೃಹಪತಿಯೋ ಗೃಹಪತಿಪುತ್ರನೋ ಹೀನಕುಲದಲ್ಲಿ ಹುಟ್ಟಿದ ಬೇರೆ ಯಾವನೋ ಆ ಧರ್ಮವನ್ನು ಕೇಳುವನು. ಆ ಧರ್ಮವನ್ನು ಕೇಳಿ ಅವನಿಗೆ ತಥಾಗತನಲ್ಲಿ ಶ್ರದ್ಧೆ ಪ್ರತಿಲಭಿಸುವುದು. ಆ ಶ್ರದ್ಧೆಯ ಪ್ರತಿಲಾಭದಿಂದ ಕೂಡಿ ಅವನು 'ಗೃಹವಾಸವು ಬಾಧಾಕರವು, ಧೂಳಿಗೆ[5] ದಾರಿ. ಪ್ರವ್ರಜ್ಯವು ಅಭ್ಯವಕಾಶವು.[6] ಕೇವಲ ಪರಿಪೂರ್ಣವೂ ಕೇವಲ ಪರಿಶುದ್ಧವೂ ಶಂಖಲಿಖಿತ[7]ವೂ ಆದ ಬ್ರಹ್ಮಚರ್ಯವನ್ನು ಚರಿಸಲು ಮನೆಯಲ್ಲಿ ವಾಸಿಸುವವನಿಗೆ ಸುಲಭವಲ್ಲ. ಅದರಿಂದ ಕೇಶಶ್ಮಶ್ರುಗಳನ್ನು ತೆಗೆದು, ಕಾಷಾಯವಸ್ತ್ರಗಳನ್ನು ಹೊದೆದು, ಗಾರ್ಹಸ್ಥ್ಯದಿಂದ ಸಂನ್ಯಾಸಕ್ಕೆ ಪರಿವ್ರಜಿಸುವೆನು.' ಎಂದು ಚಿಂತಿಸುವನು. ಕೊಂಚ ಕಾಲವಾದ ಮೇಲೆ ಅವನು ಅಲ್ಪ ಭೋಗಸ್ಕಂಧವನ್ನೂ ಮಹಾಭೋಗಸ್ಕಂಧವನ್ನೂ ಬಿಟ್ಟು, ಅಲ್ಪಜ್ಞಾತಿ ಪರಿವೃತ್ತವನ್ನೂ ಮಹಾಜ್ಞಾತಿ ಪರಿವೃತ್ತವನ್ನೂ ಬಿಟ್ಟು, ಕೇಶಶ್ಮಶ್ರುಗಳನ್ನು ತೆಗೆದು, ಕಾಷಾಯವಸ್ತ್ರಗಳನ್ನು ಹೊದೆದು, ಗಾರ್ಹಸ್ಥ್ಯದಿಂದ ಸಂನ್ಯಾಸಕ್ಕೆ ಪರಿವ್ರಜಿಸುವನು.

---

1 § ೮ ನೋಡಿ. 2 ರಾಗಾದಿ ಭಾವಗಳ ಅಧಿದೇವತೆ. 3 ಬೋಧೆಯ ಪ್ರಾರಂಭದಲ್ಲೂ, ಬೋಧೆಯಾಗುತ್ತಿರುವಾಗಲೂ, ಬೋಧೆಯ ಕೊನೆಯಲ್ಲೂ ಸುಂದರವಾಗಿರುವ ಧರ್ಮ. 4 ಅರ್ಥದೊಡನೆ, ಅಕ್ಷರಗಳೊಡನೆ. 5 ರಾಗ, ದೋಷ, ಮೋಹ ಎಂಬ ಧೂಳು. 6 ಬಯಲಿನಂತೆ ತಡೆಯಿಲ್ಲದುದು. 7 ಕತ್ತರಿಸಿ ತೊಳೆದ ಶಂಖದಂತೆ ಪ್ರಕಾಶಮಾನವಾದುದು.

೪೨. "ಹೀಗೆ ಪ್ರವ್ರಜಿತನಾಗಿ, ಪ್ರಾತಿಮೋಕ್ಷ್ಯ[1] ಸಂವರ ಸಂವೃತನಾಗಿ ವಿಹರಿಸುವನು. [2]ಆಚಾರಗೋಚರ ಸಂಪನ್ನನಾಗಿ,[2] ಬಿಡಬೇಕಾದ ಅಣುಮಾತ್ರಗಳಲ್ಲಿಯೂ ಭಯದರ್ಶಿಯಾಗಿ, ಶಿಕ್ಷಾಪದ[3]ಗಳನ್ನು ಕೊಂಡು ಶಿಕ್ಷೆ ಪಡೆಯುವನು. ಕಾಯಕರ್ಮ ವಾಕ್ಕರ್ಮಗಳಿಂದ ಕೂಡಿ, [4]ಕುಶಲದಿಂದ ಪರಿಶುದ್ಧಾಜೀವನಾಗಿ,[4] ಶೀಲಸಂಪನ್ನನಾಗಿ,[5] ಇಂದ್ರಿಯಗಳಲ್ಲಿ ಗುಪ್ತದ್ವಾರನಾಗಿ,[5] ಸ್ಮೃತಿ ಸಂಪ್ರಜಾನ್ಯ[6]ಗಳಿಂದ ಕೂಡಿ ಸಂತುಷ್ಟನಾಗಿರುವನು.

೪೩. "ಮಹಾರಾಜ! ಭಿಕ್ಷುವು ಶೀಲಸಂಪನ್ನನಾಗುವುದು ಹೇಗೆ? ಇಲ್ಲಿ ಮಹಾರಾಜ, ಭಿಕ್ಷುವು ಪ್ರಾಣಿವಧೆಯನ್ನು ಬಿಟ್ಟು, ಪ್ರಾಣಿವಧೆಯಲ್ಲಿ ವಿಮುಖನಾಗುವನು; ದಂಡವನ್ನೂ ಶಸ್ತ್ರವನ್ನೂ ತೊರೆದು, ಲಜ್ಜಾವಂತನಾಗಿ, ದಯಾಪನ್ನನಾಗಿ, ಸರ್ವಪ್ರಾಣಭೂತಹಿತಾನುಕಂಪಿಯಾಗಿ ವಿಹರಿಸುವನು. ಇದು ಕೂಡ ಅವನ ಶೀಲವಾಗುವುದು.

"ಕೊಡದುದನ್ನು ತೆಗೆದುಕೊಳ್ಳುವುದು ಬಿಟ್ಟು, ಕೊಡದುದನ್ನು ತೆಗೆದುಕೊಳ್ಳುವುದರಲ್ಲಿ ವಿಮುಖನಾಗುವನು; ಕೊಟ್ಟುದನ್ನು ತೆಗೆದುಕೊಂಡು, ದಾನ ಪ್ರತಿಕಾಂಕ್ಷೆಯಿಂದ ಕದಿಯದೆ, ಶುಚಿಭೂತವಾದ ಆತ್ಮದಿಂದ ವಿಹರಿಸುವನು. ಇದು ಕೂಡ ಅವನ ಶೀಲವಾಗುವುದು.

"ಅಬ್ರಹ್ಮಚರ್ಯವನ್ನು ಬಿಟ್ಟು, ಬ್ರಹ್ಮಚಾರಿಯಾಗಿ, ಸ್ತ್ರೀಕೂಟ ಗ್ರಾಮಧರ್ಮ[7]ಗಳಲ್ಲಿ ವಿರತನಾಗಿ ದೂರವಾಗಿ ಚರಿಸುವನು. ಇದು ಕೂಡ ಅವನ ಶೀಲವಾಗುವುದು.

೪೪. "ಸುಳ್ಳಾಡುವುದು ಬಿಟ್ಟು, ಸುಳ್ಳಾಡುವುದರಲ್ಲಿ ವಿಮುಖನಾಗಿ, ಭಿಕ್ಷುವು ಸತ್ಯವಾದಿಯಾಗಿ, ಸತ್ಯಸಂಧನಾಗಿ, ಸ್ಥಿರನಾಗಿ, ನಂಬುಗೆಗರ್ಹನಾಗಿ, ಲೋಕಕ್ಕೆ ಕೊಟ್ಟ ಮಾತು ಮುರಿಯನು. ಇದು ಕೂಡ ಅವನ ಶೀಲವಾಗುವುದು.

"ನಿಂದೆಯನ್ನು ಬಿಟ್ಟು, ನಿಂದೆಯಲ್ಲಿ ವಿಮುಖನಾಗುವನು; ಇಲ್ಲಿ ಭೇದ ತರಲು ಇಲ್ಲಿ ಕೇಳಿದುದನ್ನು ಅಲ್ಲಿ ಹೇಳನು, ಅಲ್ಲಿ ಭೇದ ತರಲು ಅಲ್ಲಿ ಕೇಳಿದುದನ್ನು ಇಲ್ಲಿ

---

[1] ಭಿಕ್ಷುಗಳ ಸಂವರಕ್ಕಾಗಿ ಎತ್ತಿದ ನಿಯಮಗಳು. [2] ಆಚಾರದಲ್ಲಿ ಗೋವು ಚರಿಸಿದಂತೆ ಚರಿಸಿ=ಒಳ್ಳೆಯ ನಡತೆಯಿಂದ ಕೂಡಿ. [3] ಬೌದ್ಧನಾಗುವವನು ಆಚರಿಸಬೇಕಾದ ಶೀಲಗಳು. [4] ಒಳ್ಳೆಯ ಆಚರಣೆಯಿಂದ ಬದುಕನ್ನು ಚೊಕ್ಕಟಗೊಳಿಸಿ. [5] ಆರು ಇಂದ್ರಿಯಗಳ ಬಾಗಿಲನ್ನೂ ಪ್ರಮಾದವಾಗದಂತೆ ರಕ್ಷಿಸಿ. [6] ಸ್ಮೃತಿ ಸಂಪ್ರಜಾನ್ಯಗಳು ಸುಮಾರು ಸಮಶಬ್ದಗಳು, ಜಾಗರೂಕತೆ. ಮೈ ಮಾತು ಮನಸ್ಸುಗಳ ಆಚರಣೆಯಲ್ಲಿ ಎಚ್ಚರ ತಪ್ಪದೆ, ಅಪ್ರಮತ್ತನಾಗಿ, ಮಾಡುವುದನ್ನು ಗಮನಿಸಿ ಮಾಡುವವನು ಸ್ಮೃತಿ ಸಂಪ್ರಜಾನ್ಯಗಳಿಂದ ಕೂಡಿದವನು. [7] ಹೆಂಗಸರೊಡನೆ ಕೂಟ.

ಹೇಳನು. ಹೀಗೆ ಒಡೆದವರನ್ನು ಕೂಡಿಸಿ, ಕೂಡಿದವರನ್ನು ಬೆಳಸಿ, ಒಗ್ಗಟ್ಟಿನಲ್ಲಿ ರಮಿಸಿ, ಒಗ್ಗಟ್ಟಿನಲ್ಲಿ ರತನಾಗಿ, ಒಗ್ಗಟ್ಟಿನಲ್ಲಿ ಆನಂದಿಸಿ, ಒಗ್ಗಟ್ಟನ್ನು ಆಗಿಸುವ ಮಾತನಾಡುವನು. ಇದು ಕೂಡ ಅವನ ಶೀಲವಾಗುವುದು.

"ಒರಟುಮಾತು ಬಿಟ್ಟು, ಒರಟುಮಾತಿನಲ್ಲಿ ವಿಮುಖನಾಗುವನು; ಯಾವ ಮಾತು ವಿಮಲವು, ಕರ್ಣಸುಖವು, ಪ್ರೇಮಣೀಯವು,[1] ಹೃದಯಂಗಮವು, ಪೌರ[2]ವು, ಬಹು ಜನ ಕಾಂತವು, ಬಹು ಜನರಿಗೆ ಪ್ರಿಯವು—ಅಂತಹ ಮಾತನ್ನು ಹೇಳುವನು. ಇದು ಕೂಡ ಅವನ ಶೀಲವಾಗುವುದು.

"ಕೆಲಸಕ್ಕೆ ಬಾರದ ಮಾತುಬಿಟ್ಟು, ಕೆಲಸಕ್ಕೆ ಬಾರದ ಮಾತಿನಲ್ಲಿ ವಿಮುಖನಾಗುವನು; [3]ಕಾಲವಾದಿಯಾಗಿ, ಭೂತವಾದಿಯಾಗಿ, ಅರ್ಥವಾದಿಯಾಗಿ, ಧರ್ಮವಾದಿಯಾಗಿ, ವಿನಯವಾದಿಯಾಗಿ,[3] ಕಾಲದಲ್ಲಿ, ಕಾರಣಗಳೊಡನೆ, ಪರ್ಯಂತವತ್ತಾಗಿ[4] ಅರ್ಥಸಂಹಿತವಾಗಿ[5] ಕೂಡಿಡಲು ತಕ್ಕ ಮಾತನಾಡುವನು. ಇದು ಕೂಡ ಅವನ ಶೀಲವಾಗುವುದು.

೪೫. "ಬೀಜಗ್ರಾಮ[6] ಭೂತಗ್ರಾಮ[6]ಗಳ ಸಂಹಾರದಲ್ಲಿ ವಿಮುಖನಾಗುವನು. ಏಕಭುಕ್ತನಾಗಿ, ರಾತ್ರಿಯಲ್ಲಿ ಉಪರತನಾಗಿ[7] ವಿಕಾಲಭೋಜನದಲ್ಲಿ ವಿಮುಖನಾಗುವನು. ನೃತ್ಯ ಗೀತ ವಾದಿತ ವಿಸೂಕ[8] ದರ್ಶನಗಳಲ್ಲಿ, ಮಾಲಾ ಗಂಧ ವಿಲೇಪನ ಧಾರಣ ಮಂಡನ ವಿಭೂಷಣ ಸ್ಥಾನಗಳಲ್ಲಿ, ಉಚ್ಚಶಯನ ಮಹಾಶಯನಗಳಲ್ಲಿ ವಿಮುಖನಾಗುವನು. ಚಿನ್ನ ಬೆಳ್ಳಿಗಳ ಪ್ರತಿಗ್ರಹಣದಲ್ಲಿ; ಬೇಯಿಸದ ಧಾನ್ಯ, ಬೇಯಿಸದ ಮಾಂಸಗಳ ಪ್ರತಿಗ್ರಹಣದಲ್ಲಿ; ಸ್ತ್ರೀಕುಮಾರಿಕೆಯರ, ದಾಸೀ ದಾಸರುಗಳ ಪ್ರತಿಗ್ರಹಣದಲ್ಲಿ; ಆಡು, ಕುರಿ, ಕೋಳಿ, ಹಂದಿ, ಆನೆ, ಹಸು, ಕುದುರೆ, ಹೆಣ್ಣು ಕುದುರೆಗಳ ಪ್ರತಿಗ್ರಹಣದಲ್ಲಿ ವಿಮುಖನಾಗುವನು. ಕ್ಷೇತ್ರವಸ್ತು[9]ಗಳ ಪ್ರತಿಗ್ರಹಣದಲ್ಲಿ, ದೌತ್ಯದಲ್ಲಿ, ಮಧ್ಯಸ್ಥಿಕೆಯಲ್ಲಿ ವಿಮುಖನಾಗುವನು. ಲಂಚತೆಗೆದು ವಂಚಿಸಿ ಮೋಸಮಾಡುವುದರಲ್ಲಿ ವಿಮುಖನಾಗುವನು. ಛೇದನ ವಧ ಬಂಧನಗಳು, ದಾರಿ ಕಾಯುವುದು, ಸೂರೆಮಾಡುವುದು, ಬಲಾತ್ಕಾರಪಡಿಸುವುದು—ಇವುಗಳಲ್ಲಿ ವಿಮುಖನಾಗುವನು. ಇದು ಕೂಡ ಅವನ ಶೀಲವಾಗುವುದು.

---

[1] ಸೊಗಸಾದುದು [2] ಪುರಜನರ, ಸಂಸ್ಕೃತರ ಮಾತು. [3] ಸರಿಯಾದ ಸಮಯದಲ್ಲಿ, ಇದ್ದುದನ್ನು ಇದ್ದಂತೆ, ಅರ್ಥವಿಟ್ಟು, ಧರ್ಮ ವಿನಯಗಳನ್ನು ಕುರಿತು ಹೇಳುವವನಾಗಿ [4] ಮಾತನಾಡುವುದರ ಅಳತೆ ತಿಳಿದು, ಸ್ಪಷ್ಟವಾಗಿ ಬಿಡಿಸಿ ಬಿಡಿಸಿ [5] ಕೇಳಿದವರಿಗೆ ಆ ಮಾತಿನಿಂದ ಒಂದು ಪ್ರಯೋಜನವಾಗುವಂತೆ. [6] ಎಲ್ಲ ತೆರದ ಬೀಜಗಳು, ಗಿಡ, ಮರ, ಹುಲ್ಲು ಮುಂತಾದುವು. [7] ಊಟದಲ್ಲಿ ಉಪರತನಾಗಿ. [8] ನೋಟ (?). [9] ಮೊದಲ ಬೆಳೆ ಬೆಳೆಯುವೆಡೆಯೇ ಕ್ಷೇತ್ರ, ಎರಡನೆಯ ಬೆಳೆ ಬೆಳೆಯುವೆಡೆಯೇ ವಸ್ತು.

೪೬. "ಕೆಲವರು ಪೂಜ್ಯರಾದ ಶ್ರಮಣ ಬ್ರಾಹ್ಮಣರು, ಶ್ರದ್ಧೆಯಿಂದ ಕೊಟ್ಟ[1] ಭೋಜನವನ್ನು ಭುಂಜಿಸಿ, ಮೂಲಬೀಜ[2], ಸ್ಕಂಧಬೀಜ[3], ಫಲುಬೀಜ[4], ಅಗ್ರಬೀಜ[5], ಬೀಜಬೀಜ[6]—ಎಂಬ ಐದು ಬೀಜಗ್ರಾಮ ಭೂತಗ್ರಾಮಗಳ ಸಂಹಾರದಲ್ಲಿಯೇ ಅನುಯುಕ್ತರಾಗಿ ವಿಹರಿಸಿದರೆ; ಭಿಕ್ಷುವು ಈ ತೆರದ ಬೀಜಗ್ರಾಮ ಭೂತಗ್ರಾಮಗಳ ಸಂಹಾರದಲ್ಲಿ ವಿಮುಖನಾಗುವನು. ಇದು ಕೂಡ ಅವನ ಶೀಲವಾಗುವುದು.

೪೭. "ಕೆಲವರು ಪೂಜ್ಯರಾದ ಶ್ರಮಣ ಬ್ರಾಹ್ಮಣರು, ಶ್ರದ್ಧೆಯಿಂದ ಕೊಟ್ಟ ಭೋಜನವನ್ನು ಭುಂಜಿಸಿ, ಅನ್ನಸನ್ನಿಧಿ, ಪಾನಸನ್ನಿಧಿ, ವಸ್ತ್ರಸನ್ನಿಧಿ, ಯಾನಸನ್ನಿಧಿ, ಶಯನಸನ್ನಿಧಿ, ಗಂಧಸನ್ನಿಧಿ, ಆಮಿಷ[7]ಸನ್ನಿಧಿ—ಎಂಬ ಈ ತೆರದ ಕೂಡಿಟ್ಟುದನ್ನು ಪರಿಭೋಗಿಸುವುದರಲ್ಲಿ ಅನುಯುಕ್ತರಾಗಿ ವಿಹರಿಸಿದರೆ; ಈ ತೆರದ ಕೂಡಿಟ್ಟುದರ ಪರಿಭೋಗದಲ್ಲಿ ವಿಮುಖನಾಗುವನು. ಇದು ಕೂಡ ಅವನ ಶೀಲವಾಗುವುದು.

೪೮. "ಕೆಲವರು ಪೂಜ್ಯರಾದ ಶ್ರಮಣ ಬ್ರಾಹ್ಮಣರು, ಶ್ರದ್ಧೆಯಿಂದ ಕೊಟ್ಟ ಭೋಜನವನ್ನು ಭುಂಜಿಸಿ, ನೃತ್ಯ, ಗೀತ, ವಾದಿತ, ಪ್ರೇಕ್ಷ್ಯ, ಆಖ್ಯಾನ,[8] ಪಾಣಿಸ್ವರ,[9] ವೇತಾಳ,[10] ಕುಂಭಸ್ಥೂಣ,[11] ಶೋಭನಗರಕ,[12] ಚಂಡಾಲ ವಂಶ ಧೋಪನ,[13] ಹಸ್ತಿಯುದ್ಧ, ಅಶ್ವಯುದ್ಧ, ಮಹಿಷಯುದ್ಧ, ವೃಷಭಯುದ್ಧ, ಅಜಯುದ್ಧ, ಮೇಷಯುದ್ಧ, ಕುಕ್ಕುಟಯುದ್ಧ, ವರ್ತಕ[14]ಯುದ್ಧ, ದಂಡಯುದ್ಧ, ಮುಷ್ಟಿಯುದ್ಧ, ಬಾಹುಯುದ್ಧ, ಉದ್ಯೋಧಿಕ,[15] ಬಲಗ್ರ,[15] ಸೇನಾವ್ಯೂಹ,[15] ಅನೀಕದರ್ಶನ[15]—ಎಂಬ ಈ ತೆರದ ವಿಸೂಕ ದರ್ಶನಗಳಲ್ಲಿ ಅನುಯುಕ್ತರಾಗಿ ವಿಹರಿಸಿದರೆ; ಈ ತೆರದ ವಿಸೂಕದರ್ಶನಗಳಲ್ಲಿ ವಿಮುಖನಾಗುವನು. ಇದು ಕೂಡ ಅವನ ಶೀಲವಾಗುವುದು.

೪೯. "ಕೆಲವರು ಪೂಜ್ಯರಾದ ಶ್ರಮಣ ಬ್ರಾಹ್ಮಣರು, ಶ್ರದ್ಧೆಯಿಂದ ಕೊಟ್ಟ ಭೋಜನವನ್ನು ಭುಂಜಿಸಿ, ಅಷ್ಟಪದ,[16] ದಶಪದ,[16] ಆಕಾಶ,[17] ಪರಿಹಾರಪಥ,[18]

---

[1] ಇತರರು ಕೊಟ್ಟ. [2] ಬೇರಿನಿಂದ ಹುಟ್ಟಿದ ಬೀಜ. [3] ಗಿಡದ ಮೈಯಿಂದ ಬಂದ ಬೀಜ. [4] ಜೊಂಡು ಮುಂತಾದವುಗಳ ಗಂಟಿನಿಂದ ಬಂದ ಬೀಜ. [5] ಕಸಿಮಾಡಿ ಹುಟ್ಟಿದ ಬೀಜ (?). [6] ಬೀಜದಿಂದ ಹುಟ್ಟಿದ ಬೀಜ. [7] ರುಚಿಕರವಾದ ತಿನಿಸು. [8] ಭಾರತ ರಾಮಾಯಣಾದಿ ಕಥೆಗಳ ಗಾಯನ. [9] ಕೈಯಿಂದ ಸ್ವರಹೊರಡಿಸುವ ಒಂದು ತೆರದ ವಾದ್ಯ. [10] ಘನತಾಳ ಅಥವಾ ಮಂತ್ರದಿಂದ ಮೃತಶರೀರವನ್ನು ಎಬ್ಬಿಸುವುದು. [11] ಅರ್ಥ ಸ್ಪಷ್ಟವಿಲ್ಲ. ಒಂದು ತೆರದ ತಮಟೆ. [12] ಶೋಭಾ ಎಂಬ ಗಂಧರ್ವ ನಗರಿಯಂತಹ ಸುಂದರ ದೃಶ್ಯಗಳು. [13] ಚಂಡಾಲರು—ಬೊಂಬು—ತೊಳೆಯುವುದು=ಚಂಡಾಲರು ಗಣೆ ಹತ್ತುವುದು (?). [14] ವರ್ತಕಪಕ್ಷಿ. [15] ಸೈನ್ಯಕ್ಕೆ ಸಂಬಂಧಿಸಿದ ಈ ಪದಗಳಿಗೆ ಇಂಗ್ಲಿಷು ಸಮಪದಗಳನ್ನು ಕೊಡುವುದು ಮೇಲು: Sham-fights, Roll-calls, Manœuvres, Reviews. [16] ಎಂಟು-ಹತ್ತು ಮನೆಗಳ ಚದುರಂಗ. [17] ಅಷ್ಟಪದ ದಶಪದಗಳಂತೆ ಆಕಾಶದಲ್ಲಿ ಮನೆಗಳಿವೆಯೆಂದು ಭಾವಿಸಿ ಆಡುವ ಆಟ. [18] ನೆಲದ ಮೇಲೆ ಅನೇಕ ಪ್ರಕಾರವಾದ ಮಂಡಲಗಳನ್ನು ಬರೆದು, ಕಾಲಿಡಬೇಕಾದ ಕಡೆಯೇ ಕಾಲಿಟ್ಟು ಆಡುವ ಆಟ.

ಸಂತಿಕ,[1] ಖಲಿಕ,[2] ಘಟಿಕ,[3] ಶಲಾಕಹಸ್ತ,[4] ಅಕ್ಷ,[5] ಪಂಗಚೀರ,[6] ವಂಕಕ,[7] ಮೋಕ್ಖಚಿಕ,[8] ಚಿಂಗುಲಿಕ,[9] ಪತ್ರಾಡಕ,[10] ರಥಕ,[11] ಧನುಕ,[12] ಅಕ್ಷರಿಕ,[13] ಮನೇಸಿಕ,[14] ಯಥಾವಾದ್ಯ[15]—ಎಂಬ ಈ ತೆರದ ದ್ಯೂತಪ್ರಮಾದಸ್ಥಾನಾನುಯೋಗದಲ್ಲಿ ಅನುಯುಕ್ತರಾಗಿ ವಿಹರಿಸಿದರೆ; ಈ ತೆರದ ದ್ಯೂತಪ್ರಮಾದಸ್ಥಾನಾನುಯೋಗದಲ್ಲಿ ವಿಮುಖನಾಗುವನು. ಇದು ಕೂಡ ಅವನ ಶೀಲವಾಗುವುದು.

೫೦. "ಕೆಲವರು ಪೂಜ್ಯರಾದ ಶ್ರಮಣ ಬ್ರಾಹ್ಮಣರು, ಶ್ರದ್ಧೆಯಿಂದ ಕೊಟ್ಟ ಭೋಜನವನ್ನು ಭುಂಜಿಸಿ, ಆಸಂದಿ,[16] ಪರ್ಯಂಕ,[17] ಗೋಣಿಕ,[18] ಚಿತ್ರಕ,[19] ಪಟಿಕ,[20] ಪಟಲಿಕ,[21] ತೂಲಿಕ,[22] ವಿಕೃತಿಕ,[23] ಊರ್ಧ್ವರೋಮಿ,[24] ಏಕಾಂತರೋಮಿ,[25] 'ಕಟ್ಟಿಸ್ಸ',[26] ಕೌಶೇಯ[27] ಕೃತ್ರಕ,[28] ಹಸ್ತ್ಯಾಸ್ತರ,[29] ಅಶ್ವಾಸ್ತರ,[30] ರಥಸ್ತರ,[31] ಅಜಿನ ಪ್ರವೇಣಿ,[32] ಕದಳಿ ಮೃಗ ಪ್ರವರ ಪ್ರತ್ಯಾಸ್ತರಣ,[33] 'ಸ ಉತ್ತರಚ್ಛದ,'[34] ಉಭತೋಲೋಹಿತಕೋಪಧಾನ[35]—ಎಂಬ ಈ ತೆರದ ಉಚ್ಚಶಯನ ಮಹಾಶಯನಗಳಲ್ಲಿ ಅನುಯುಕ್ತರಾಗಿ ವಿಹರಿಸಿದರೆ; ಈ ತೆರದ ಉಚ್ಚಶಯನ ಮಹಾಶಯನಗಳಲ್ಲಿ ವಿಮುಖನಾಗುವನು. ಇದು ಕೂಡ ಅವನ ಶೀಲವಾಗುವುದು.

---

[1] ಚದುರಂಗದ ಕಾಯಿಗಳನ್ನು ರಾಶಿಹಾಕುವುದು ರಾಶಿಯನ್ನು ಅಲುಗಿಸದಂತೆ ಗುಡ್ಡೆಯಿಂದ ಕಾಯಿಗಳನ್ನು ತೆಗೆಯುವುದು, ಸೇರಿಸುವುದು. ಗುಡ್ಡೆ ಅಲುಗಿಸಿದವನು ಸೋತಂತೆ. [2] ದಾಳ ಎಸೆಯುವುದು. [3] ಸಣ್ಣ ಕೋಲನ್ನು ದೊಡ್ಡ ಕೋಲಿನಿಂದ ಹೊಡೆಯುವ ಆಟ (ಚಿಣ್ಣಿಕೋಲು ಇರಬಹುದು). [4] ಕೈಯನ್ನು ಅರಗಿನಲ್ಲೋ ಬಣ್ಣದಲ್ಲೋ ಅದ್ದಿ, ಆ ಕೈಯನ್ನು ಗೋಡೆಯ ಮೇಲೆ ಬಡಿದು ಆನೆ, ಕುದುರೆ ಮುಂತಾದ ಬೇಕಾದ ರೂಪಗಳನ್ನು ಬರಿಸುವುದು. [5] ಚಂಡಾಟ. [6] ಎಲೆಗಳಿಂದ ಪೀಪಿಮಾಡಿ ಊದುವುದು. [7] ಆಟದ ನೇಗಿಲು. [8] ಲಾಗ ಹಾಕುವುದು. [9] ತಾಳೆಪರ್ಣಗಳಿಂದ ಮಾಡಿ, ಗಾಳಿಗೆ ತಿರುಗುವ ಚಕ್ರ (ಗಾಳಿ ಗಿರಿಗಿಟಿ). [10] ತಾಳಪರ್ಣಗಳಿಂದ ಮಾಡಿದ ಅಳತೆಯ ಪಾತ್ರೆ. [11] ಸಣ್ಣ ರಥದ ಆಟ. [12] ಸಣ್ಣ ಧನುಸ್ಸಿನ ಆಟ [13] ಆಕಾಶದಲ್ಲಾಗಲಿ, ಜೊತೆಗಾರನ ಬೆನ್ನ ಮೇಲಾಗಲಿ ಬೆರಳಿಂದ ಬರೆದ ಅಕ್ಷರಗಳನ್ನು ಊಹಿಸುವುದು. [14] ಇನ್ನೊಬ್ಬನ ಮನಸ್ಸಿನಲ್ಲಿರುವುದನ್ನು ಊಹಿಸುವುದು [15] ಮೃಗ ಪಕ್ಷಿ ಮೊದಲಾದವುಗಳ ಕೂಗನ್ನು ಅನುಕರಿಸುವುದು. [16] ಎತ್ತರವಾದ ಉದ್ದವಾದ ಆಸನ. [17] ಮಂಚ. [18] ತುಬಟ ಉದ್ದವಾದ ಆಡಿನ ಕೂದಲಿನ ಹೊದಿಕೆ. [19] ಅನೇಕ ಬಣ್ಣದ ಮುಗ್ಗಲು ಹಾಸಿಗೆ. [20] ಬಿಳಿಯ ಉಣ್ಣೆಯ ಹೊದಿಕೆ [21] ಹೂವುಗಳಿರುವ ಉಣ್ಣೆಯ ಹೊದಿಕೆ. [22] ಹುಲ್ಲನ್ನೋ ಉಣ್ಣೆಯನ್ನೋ ತುಂಬಿದ ಹಾಸಿಗೆ. [23] ಹುಲಿ, ಸಿಂಹ ಮುಂತಾದ ವಿಕೃತಗಳಿರುವ ಉಣ್ಣೆಯ ಹೊದಿಕೆ. [24] ಎರಡೂ ಕಡೆ ರೋಮವಿರುವ ಹೊದಿಕೆ. [25] ಒಂದೇ ಕಡೆ ರೋಮವಿರುವ ಹೊದಿಕೆ. [26] ಮಣಿರತ್ನಗಳಿಂದ ಅಲಂಕರಿಸಿದ ರೇಶ್ಮೆಯ ಹೊದಿಕೆ. [27] ರೇಶ್ಮೆಯ ಹೊದಿಕೆ. [28] ಹದಿನಾರು ನರ್ತಕರಿಗೆ ಸಾಕಾಗುವ ಜಮಖಾನೆ. [29], [30], [31] ಆನೆ ಕುದುರೆ ರಥಗಳಿಗೆ ಹಾಕುವ ಹಾಸು. [32] ಮಂಚದ ಅಳತೆಗೆ ತಕ್ಕಂತೆ ಜಿಂಕೆಯ ಚರ್ಮಗಳಿಂದ ಹೊಲಿದ ಹೊದಿಕೆ. [33] ಕದಳಿ ಮೃಗವೆಂಬ ಜಿಂಕೆಯ ಚರ್ಮದಿಂದಾದ ಹೊದಿಕೆ. [34] ಮೇಲುಗಡೆ ಆಚ್ಛಾದನವಿರುವ ಜಮಖಾನೆ. [35] ಕಾಲು ತಲೆ ಎರಡು ಕಡೆಗೂ ಕೆಂಪು ದಿಂಬುಗಳಿರುವ ಸೋಫ

೫೧. "ಕೆಲವರು ಪೂಜ್ಯರಾದ ಶ್ರಮಣ ಬ್ರಾಹ್ಮಣರು, ಶ್ರದ್ಧೆಯಿಂದ ಕೊಟ್ಟ ಭೋಜನವನ್ನು ಭುಂಜಿಸಿ, ಉತ್ಸಾದನ,[1] ಪರಿಮರ್ದನ,[2] ಸ್ನಪನ, ಸಂಬಾಹನ,[3] ಆದರ್ಶ, ಅಂಜನ, ಮಾಲಾ, ವಿಲೇಪನ, ಮುಖಚೂರ್ಣಕ, ಮುಖಾಲೇಪನ, ಹಸ್ತಬಂಧ, ಶಿಖಾಬಂಧ, ದಂಡಕ,[4] ನಾಳಿಕ,[5] ಖಡ್ಗ, ಛತ್ರ, ಚಿತ್ರೋಪಾನಹ,[6] ಉಷ್ಣೀಷ, ಮಣಿ, ವಾಲಾವೀಜನ,[7] ದೀರ್ಘದಶೆಯ ಅವದಾತ ವಸ್ತ್ರಗಳು—ಎಂಬ ಈ ತೆರದ ಮಂಡನ ವಿಭೂಷಣ ಸ್ಥಾನಾನುಯೋಗದಲ್ಲಿ ಅನುಯುಕ್ತರಾಗಿ ವಿಹರಿಸಿದರೆ; ಈ ತೆರದ ಮಂಡನ ವಿಭೂಷಣ ಸ್ಥಾನಾನುಯೋಗದಲ್ಲಿ ವಿಮುಖನಾಗುವನು. ಇದು ಕೂಡ ಅವನ ಶೀಲವಾಗುವುದು.

೫೨. "ಕೆಲವರು ಪೂಜ್ಯರಾದ ಶ್ರಮಣ ಬ್ರಾಹ್ಮಣರು, ಶ್ರದ್ಧೆಯಿಂದ ಕೊಟ್ಟ ಭೋಜನವನ್ನು ಭುಂಜಿಸಿ, ರಾಜಕಥೆ, ಚೋರಕಥೆ, ಮಹಾಮಾತ್ಯಕಥೆ, ಸೇನಾಕಥೆ, ಭಯಕಥೆ, ಯುದ್ಧಕಥೆ, ಅನ್ನಕಥೆ, ಪಾನಕಥೆ, ವಸ್ತ್ರಕಥೆ, ಶಯನಕಥೆ, ಮಾಲಾಕಥೆ, ಗಂಧಕಥೆ, ಜ್ಞಾತಿಕಥೆ, ಯಾನಕಥೆ, ಗ್ರಾಮಕಥೆ, ನಿಗಮಕಥೆ, ನಗರಕಥೆ, ಜನಪದಕಥೆ, ಸ್ತ್ರೀಕಥೆ, ಶೂರಕಥೆ, ವಿಶಿಖಾಕಥೆ,[8] ಕುಂಭಸ್ಥಾನಕಥೆ,[9] ಪೂರ್ವಪ್ರೇತಕಥೆ,[10] ನಾನತ್ವಕಥೆ,[11] ಲೋಕಾಖ್ಯಾಯಿಕವೂ ಸಮುದ್ರಾಖ್ಯಾಯಿಕವೂ ಆದ ಇತಿಭವಾಭವದ ಕಥೆ[12]—ಎಂಬ ಈ ತೆರದ ತಿರಶ್ಚೀನ ಕಥೆ[13]ಗಳಲ್ಲಿ ಅನುಯುಕ್ತರಾಗಿ ವಿಹರಿಸಿದರೆ; ಈ ತೆರದ ತಿರಶ್ಚೀನ ಕಥೆಗಳಲ್ಲಿ ವಿಮುಖನಾಗುವನು. ಇದು ಕೂಡ ಅವನ ಶೀಲವಾಗುವುದು.

೫೩. "ಕೆಲವರು ಪೂಜ್ಯರಾದ ಶ್ರಮಣ ಬ್ರಾಹ್ಮಣರು, ಶ್ರದ್ಧೆಯಿಂದ ಕೊಟ್ಟ ಭೋಜನವನ್ನು ಭುಂಜಿಸಿ, 'ಈ ಧರ್ಮವಿನಯಗಳನ್ನು ನೀನು ಅರಿಯೆ', 'ಈ ಧರ್ಮವಿನಯಗಳನ್ನು ನಾನು ತಿಳಿದಿರುವೆನು', 'ಈ ಧರ್ಮವಿನಯಗಳನ್ನು ನೀನು ಹೇಗೆ ತಿಳಿದೀಯೆ?', 'ನೀನು ಮಿಥ್ಯಾ ಪ್ರತಿಪನ್ನನು[14]', 'ನಾನು ಸಮ್ಯಕ್ ಪ್ರತಿಪನ್ನನು[15]', 'ನನ್ನದು ಸಹಿತ[16]', 'ನಿನ್ನದು ಅಸಹಿತ', 'ಮೊದಲು ಹೇಳತಕ್ಕುದನ್ನು

---

1, 2 ಸುಗಂಧದ್ರವ್ಯಗಳಿಂದ ದೇಹವನ್ನು ತಿಕ್ಕಿ ತೀಡುವುದು. 3 ಜಟ್ಟಿಗಳಿಗೆ ಮಾಡುವಂತೆ ಮೈ ನೀವುವುದು 4 ಬೆತ್ತ 5 ಔಷಧಿಗಳನ್ನು ಇಡುವ ಕೊಳವೆ 6 ಚಿತ್ರಕೆಲಸ ಮಾಡಿದ ಕಾಲು ಮೆಟ್ಟು 7 ಚಮರಿಬಾಲದ ಬೀಸಣಿಗೆ. 8 ಬೀದಿಯ ಮೂಲೆಗಳಲ್ಲಿ ನಿಂತು ಆಡುವ ಮಾತು 9 ಬಾವಿಯ ಬಳಿಯ ಮಾತು. 10 ಸತ್ತು ಪ್ರೇತವಾಗಿರುವವರ ಸಮಾಚಾರ. 11 ಎಲ್ಲ ತರದ ಮಾತು 12 ಲೋಕದ ಹಾಗೂ ಸಮುದ್ರದ ಉತ್ಪತ್ತಿ ಮೊದಲಾದುವನ್ನು ಕುರಿತು "ಹೀಗೆ ಹುಟ್ಟಿತು, ಹೀಗೆ ಹುಟ್ಟಲಿಲ್ಲ" ಎಂಬ ಮಾತು. 13 ಸ್ವರ್ಗ-ಮೋಕ್ಷ-ಮಾರ್ಗಕ್ಕೆ ನಡೆಸದೆ, ಕೆಳಕ್ಕೊಯ್ಯುವ ಮಾತು 14 ತಪ್ಪು ಹಾದಿ ಹಿಡಿದವನು 15 ಸರಿಯಾದ ಹಾದಿ ಹಿಡಿದವನು 16 ಮಾತನಾಡಿದುದು ಸಮಂಜಸವಾಗಿ, ಒಂದು ಮಾತನ್ನು ಇನ್ನೊಂದು ಮಾತು ವಿರೋಧಿಸದಿರುವುದು

ಆ ಮೇಲೆ ಹೇಳಿದೆ ’, ‘ ಆ ಮೇಲೆ ಹೇಳತಕ್ಕುದನ್ನು ಮೊದಲು ಹೇಳಿದೆ ’, ‘ ನೀನು ಅಷ್ಟು ಬಳಸಿ ಹೇಳಿದುದು ಉರುಳಿತು ’, ‘ ನಿನ್ನ ವಾದವನ್ನು ಎತ್ತಿಕೊಂಡೆನು ’, ‘ ನಿಗೃಹೀತನಾದೆ ’, ‘ ವಾದ ಪ್ರಮೋಕ್ಷಕ್ಕೆ ಹೊರಡು ’, ‘ ಕೈಲಾದರೆ ಬಿಡಿಸಿಕೊ ’— ಎಂಬ ಈ ತೆರದ ವಿಗ್ರಾಹಿಕ ಕಥೆ[1]ಯಲ್ಲಿ ಅನುಯುಕ್ತರಾಗಿ ವಿಹರಿಸಿದರೆ; ಈ ತೆರದ ವಿಗ್ರಾಹಿಕ ಕಥೆಯಲ್ಲಿ ವಿಮುಖನಾಗುವನು. ಇದು ಕೂಡ ಅವನ ಶೀಲವಾಗುವುದು.

೫೪. “ ಕೆಲವರು ಪೂಜ್ಯರಾದ ಶ್ರಮಣ ಬ್ರಾಹ್ಮಣರು, ಶ್ರದ್ಧೆಯಿಂದ ಕೊಟ್ಟ ಭೋಜನವನ್ನು ಭುಂಜಿಸಿ, ರಾಜರು, ರಾಜಮಹಾಮಾತ್ಯರು, ಕ್ಷತ್ರಿಯರು, ಬ್ರಾಹ್ಮಣರು, ಗೃಹಪತಿಗಳು, ಕುಮಾರರು—ಮುಂತಾದ ಈ ತೆರದವರಿಗೆ ದೌತ್ಯದಲ್ಲಿಯೂ ಮಧ್ಯಸ್ಥಿಕೆಯಲ್ಲಿಯೂ ಅನುಯುಕ್ತರಾಗಿ ವಿಹರಿಸಿದರೆ; ಈ ತೆರದ ದೌತ್ಯ ಮಧ್ಯಸ್ಥಿಕೆಗಳಿಂದ ವಿಮುಖನಾಗುವನು. ಇದು ಕೂಡ ಅವನ ಶೀಲವಾಗುವುದು.

೫೫. “ ಕೆಲವರು ಪೂಜ್ಯರಾದ ಶ್ರಮಣ ಬ್ರಾಹ್ಮಣರು, ಶ್ರದ್ಧೆಯಿಂದ ಕೊಟ್ಟ ಭೋಜನವನ್ನು ಭುಂಜಿಸಿ, ಕುಹಕರಾಗಿ,[2] ಲಪಕರಾಗಿ,[3] ನೈಮಿತ್ತಿಕರಾಗಿ,[4] ನಿಷ್ಪೇಷಿಕರಾಗಿ,[5] ಲಾಭಕ್ಕೆ ಲಾಭ ಸೇರಿಸಲು ಆಶಿಸಿದರೆ; ಈ ತೆರದ ಕುಹನ ಲಪನಗಳಿಂದ ವಿಮುಖನಾಗುವನು. ಇದು ಕೂಡ ಅವನ ಶೀಲವಾಗುವುದು.

೫೬. “ ಕೆಲವರು ಪೂಜ್ಯರಾದ ಶ್ರಮಣ ಬ್ರಾಹ್ಮಣರು, ಶ್ರದ್ಧೆಯಿಂದ ಕೊಟ್ಟ ಭೋಜನವನ್ನು ಭುಂಜಿಸಿ, ಅಂಗ,[6] ನಿಮಿತ್ತ,[7] ಉತ್ಪಾತ,[7] ಸ್ವಪ್ನ,[8] ಲಕ್ಷಣ,[8] ಮೂಷಿಕಾಚ್ಛಿನ್ನ,[9] ಅಗ್ನಿಹೋಮ, ದರ್ವೀಹೋಮ, ತುಷಹೋಮ, ಕಣಹೋಮ, ತಂಡುಲಹೋಮ, ಸರ್ಪಿಹೋಮ, ತೈಲಹೋಮ, ಮುಖಹೋಮ,[10] ಲೋಹಿತಹೋಮ,[11] ಅಂಗವಿದ್ಯೆ,[12] ವಸ್ತುವಿದ್ಯೆ,[13] ಕ್ಷತ್ರವಿದ್ಯೆ,[14] ಶಿವವಿದ್ಯೆ,[15] ಭೂತವಿದ್ಯೆ,[16]

---

1 ಜಗಳ ತರುವಮಾತು. 2 ಮೋಸಮಾಡುತ್ತ. 3 ಮಂತ್ರ ಒದರುತ್ತ 4 ನಿಮಿತ್ತಗಳಿಗೆ ಅರ್ಥಹೇಳುವವರಾಗಿ 5 ಭೂತಗಳನ್ನೋ ದುರ್ನಿಮಿತ್ತಗಳನ್ನೋ ಹೋಗಲಾಡಿಸುವವರಾಗಿ (?). 6 ದೇಹದ ಭಾಗಗಳನ್ನು ನೋಡಿ ಭವಿಷ್ಯ ಹೇಳುವುದು 7 ಗುಡುಗು ಸಿಡಿಲು ಇತ್ಯಾದಿ ನಿಮಿತ್ತಗಳಿಂದ ಭವಿಷ್ಯ ಹೇಳುವುದು. 8 ಸ್ವಪ್ನ, ದೇಹಲಕ್ಷಣಗಳಿಂದ ಭವಿಷ್ಯ ಹೇಳುವುದು 9 ಇಲಿ ಕಡಿದ ಬಟ್ಟೆಯಿಂದ ಭವಿಷ್ಯ ಹೇಳುವುದು. 10 ಬಾಯಿಯಲ್ಲಿ ಕಾಳು ತುಂಬಿ, ಬೆಂಕಿಗೆ ಊದಿ ಹೋಮಮಾಡುವುದು. 11 ಬಲಗಡೆಯ ಮಂಡಿಯಿಂದ ರಕ್ತ ತೆಗೆದು ಮಾಡುವ ಹೋಮ 12 ಅಂಗಗಳನ್ನು ನೋಡಿ ಅದೃಷ್ಟ ಹೇಳುವುದು 13 ಮನೆ ಕಟ್ಟಬೇಕಾದ ನಿವೇಶನವು ಶುಭವೆ ಅಶುಭವೆ ಎಂದು ಹೇಳುವುದು 14 ಕ್ಷತ್ರಿಯರಿಗೆ ಬುದ್ಧಿವಾದ ಹೇಳುವುದು 15 ಮಂಗಳಕರನಾದ ಮಂತ್ರಗಳನ್ನು ತಿಳಿದಿರುವುದು. ನರಿಗಳ ಕೂಗಿನಿಂದ ಮುಂದಾಗುವುದನ್ನು ತಿಳಿಯುವ ವಿದ್ಯೆಯೆಂದೂ ಹೇಳುತ್ತಾರೆ. 16 ಭೂತಗಳನ್ನು ಓಡಿಸುವ ವಿದ್ಯೆ.

ಭೂರಿವಿದ್ಯೆ,[1] ಅಹಿವಿದ್ಯೆ,[2] ವಿಷವಿದ್ಯೆ,[3] ವೃಶ್ಚಿಕವಿದ್ಯೆ,[4] ಮೂಷಿಕವಿದ್ಯೆ,[4] ಶಕುನ ವಿದ್ಯೆ,[5] ವಾಯಸವಿದ್ಯೆ,[6] ಪಕ್ವಧ್ಯಾನ,[7] ಶರಪರಿತ್ರ,[8] ಮೃಗಚಕ್ರ[9]—ಮೊದಲಾದ ಈ ತೆರದ ತಿರಶ್ಚೀನ ವಿದ್ಯೆಗಳ ಮಿಥ್ಯಾಜೀವನದಿಂದ ಜೀವಿಸಿದರೆ ; ಈ ತೆರದ ತಿರಶ್ಚೀನ ವಿದ್ಯೆಗಳ ಮಿಥ್ಯಾಜೀವನದಿಂದ ಪ್ರತಿವಿರತನಾಗುವನು. ಇದು ಕೂಡ ಅವನ ಶೀಲ ವಾಗುವುದು.

೫೭. *" ಕೆಲವರು ಪೂಜ್ಯರಾದ ಶ್ರಮಣ ಬ್ರಾಹ್ಮಣರು, ಶ್ರದ್ಧೆಯಿಂದ ಕೊಟ್ಟ ಭೋಜನವನ್ನು ಭುಂಜಿಸಿ, ಮಣಿಲಕ್ಷಣ, ದಂಡಲಕ್ಷಣ, ವಸ್ತ್ರಲಕ್ಷಣ, ಅಸಿಲಕ್ಷಣ, ಇಷುಲಕ್ಷಣ, ಧನುರ್ಲಕ್ಷಣ, ಆಯುಧಲಕ್ಷಣ, ಸ್ತ್ರೀಲಕ್ಷಣ, ಪುರುಷಲಕ್ಷಣ, ಕುಮಾರಲಕ್ಷಣ, ಕುಮಾರೀಲಕ್ಷಣ, ದಾಸಲಕ್ಷಣ, ದಾಸೀಲಕ್ಷಣ, ಹಸ್ತಿಲಕ್ಷಣ, ಅಶ್ವಲಕ್ಷಣ, ಮಹಿಷಲಕ್ಷಣ, ವೃಷಭಲಕ್ಷಣ, ಗೋಲಕ್ಷಣ, ಅಜಲಕ್ಷಣ, ಮೇಷ ಲಕ್ಷಣ, ಕುಕ್ಕುಟಲಕ್ಷಣ, ವರ್ತಕಲಕ್ಷಣ, ಗೋಧಾಲಕ್ಷಣ, ಕರ್ಣಿಕಾ[10]ಲಕ್ಷಣ, ಕಚ್ಛಪಲಕ್ಷಣ, ಮೃಗಲಕ್ಷಣ—ಮೊದಲಾದ ಈ ತೆರದ ತಿರಶ್ಚೀನ ವಿದ್ಯೆಗಳ ಮಿಥ್ಯಾ ಜೀವನದಿಂದ ಜೀವಿಸಿದರೆ ; ಈ ತೆರದ ತಿರಶ್ಚೀನ ವಿದ್ಯೆಗಳ ಮಿಥ್ಯಾಜೀವನದಿಂದ ವಿಮುಖನಾಗುವನು. ಇದು ಕೂಡ ಅವನ ಶೀಲವಾಗುವುದು.

೫೮. " ಕೆಲವರು ಪೂಜ್ಯರಾದ ಶ್ರಮಣ ಬ್ರಾಹ್ಮಣರು, ಶ್ರದ್ಧೆಯಿಂದ ಕೊಟ್ಟ ಭೋಜನವನ್ನು ಭುಂಜಿಸಿ, 'ರಾಜರಿಗೆ ಪ್ರಯಾಣವಾಗುವುದು—ರಾಜರು ಹಿಂದಿರುಗಿ ಬರುವರು', 'ಒಳರಾಜರು ಎದುರಿಸುವರು—ಹೊರರಾಜರು ಬೆನ್ನು ತೋರುವರು', 'ಹೊರರಾಜರು ಎದುರಿಸುವರು—ಒಳರಾಜರು ಬೆನ್ನು ತೋರುವರು', 'ಒಳರಾಜರಿಗೆ ಜಯ—ಹೊರರಾಜರಿಗೆ ಪರಾಜಯ', 'ಹೊರರಾಜರಿಗೆ ಜಯ—ಒಳರಾಜರಿಗೆ ಪರಾಜಯ', 'ಇವರಿಗೆ ಜಯ—ಇವರಿಗೆ ಪರಾಜಯ'—ಎಂಬ ಈ ತೆರದ ತಿರಶ್ಚೀನ ವಿದ್ಯೆಗಳ ಮಿಥ್ಯಾಜೀವನದಿಂದ ಜೀವಿಸಿದರೆ ; ಈ ತೆರದ ತಿರಶ್ಚೀನ ವಿದ್ಯೆಗಳ ಮಿಥ್ಯಾ ಜೀವನದಿಂದ ವಿಮುಖನಾಗುವನು. ಇದು ಕೂಡ ಅವನ ಶೀಲವಾಗುವುದು.

೫೯. " ಕೆಲವರು ಪೂಜ್ಯರಾದ ಶ್ರಮಣ ಬ್ರಾಹ್ಮಣರು, ಶ್ರದ್ಧೆಯಿಂದ ಕೊಟ್ಟ

---

1 ನಿಕ್ಷೇಪವನ್ನು ಕಂಡುಹಿಡಿಯುವ ವಿದ್ಯೆ. 2 ಹಾವುಗಳನ್ನು ಕರೆಯುವುದು, ಅವು ಕಡಿದರೆ ಆ ವಿಷ ತೆಗೆಯುವುದು. 3 ವಿಷ ಕೊಡುವುದು, ವಿಷ ಹೋಗಲಾಡಿಸುವುದು. 4 ಚೇಳು, ಇಲಿ ಕಡಿದರೆ ಔಷಧಿ ಕೊಡುವುದು. 5 ಪಕ್ಷಿಗಳ ಭಾಷೆ ತಿಳಿಯುವುದು. 6 ಕಾಗೆಯ ರೂಪ ಕೂಗುಗಳಿಂದ ಭವಿಷ್ಯ ತಿಳಿಯುವುದು. 7 ಮನುಷ್ಯನ ಜೀವನದ ಪರಿಮಿತಿಯನ್ನು ತಿಳಿಸುವುದು 8 ಬಾಣಗಳಿಂದ ಕಾಪಾಡಿಕೊಳ್ಳುವುದಕ್ಕೆ ಮಂತ್ರ. 9 ಎಲ್ಲ ಮೃಗಗಳ ಭಾಷೆಯನ್ನು ತಿಳಿಯುವುದು. * ಇಲ್ಲಿ ಹೇಳಿರುವ ವಸ್ತುಗಳೂ ಪ್ರಾಣಿಗಳೂ ಯಾವ ಬಳಿಯಲ್ಲಿವೆಯೋ ಅವರ ಭವಿಷ್ಯವನ್ನು ಆ ವಸ್ತು ಪ್ರಾಣಿಗಳ ಲಕ್ಷಣದಿಂದ ತಿಳಿಸುವುದು 10 ಕರ್ಣಾಭರಣ.

ಭೋಜನವನ್ನು ಭುಂಜಿಸಿ, ‘ಚಂದ್ರಗ್ರಾಹವಾಗುವುದು, ಸೂರ್ಯಗ್ರಾಹವಾಗುವುದು, ನಕ್ಷತ್ರಗ್ರಾಹವಾಗುವುದು, ಚಂದ್ರಸೂರ್ಯರ ಪಥಗಮನವಾಗುವುದು, ಚಂದ್ರಸೂರ್ಯರ ಉತ್ಪಥಗಮನವಾಗುವುದು, ನಕ್ಷತ್ರಗಳ ಪಥಗಮನವಾಗುವುದು, ನಕ್ಷತ್ರಗಳ ಉತ್ಪಥಗಮನವಾಗುವುದು, ಉಲ್ಕಾಪಾತವಾಗುವುದು, ದಿಶಾದಾಹವಾಗುವುದು, ಭೂಮಿಚಲನವಾಗುವುದು, ದೇವದುಂದುಭಿಯಾಗುವುದು, ಚಂದ್ರ ಸೂರ್ಯ ನಕ್ಷತ್ರಗಳಿಗೆ ಉದ್ಗಮನವಾಗಿ, ಅವಗಮನವಾಗಿ, ಸಂಕ್ಲೇಶವಾಗಿ ವ್ಯವದಾನವಾಗುವುದು. ಚಂದ್ರಗ್ರಹಣದಿಂದ ಈ ಫಲವಾಗುವುದು. [ಸೂರ್ಯಗ್ರಹಣ ಮುಂತಾದ ಮೇಲಿನ ಪ್ರತಿಯೊಂದರಿಂದಾಗುವ ಫಲಗಳನ್ನೂ ಹೇಳಿ] ಈ ಫಲವಾಗುವುದು’—ಎಂಬ ಈ ತೆರದ ತಿರಶ್ಚೀನ ವಿದ್ಯೆಗಳ ಮಿಥ್ಯಾಜೀವನದಿಂದ ಜೀವಿಸಿದರೆ; ಈ ತೆರದ ತಿರಶ್ಚೀನ ವಿದ್ಯೆಗಳ ಮಿಥ್ಯಾಜೀವನದಿಂದ ವಿಮುಖನಾಗುವನು. ಇದು ಕೂಡ ಅವನ ಶೀಲವಾಗುವುದು.

೬೦. “ಕೆಲವರು ಪೂಜ್ಯರಾದ ಶ್ರಮಣ ಬ್ರಾಹ್ಮಣರು, ಶ್ರದ್ಧೆಯಿಂದ ಕೊಟ್ಟ ಭೋಜನವನ್ನು ಭುಂಜಿಸಿ, ‘ಸುವೃಷ್ಟಿಯಾಗುವುದು, ದುರ್ವೃಷ್ಟಿಯಾಗುವುದು, ಸುಭಿಕ್ಷವಾಗುವುದು, ದುರ್ಭಿಕ್ಷವಾಗುವುದು, ಕ್ಷೇಮವಾಗುವುದು, ಭಯವಾಗುವುದು, ರೋಗವಾಗುವುದು, ಆರೋಗ್ಯವಾಗುವುದು’—ಎಂದು ಮುದ್ರಾ,[1] ಗಣನ,[2] ಸಂಖ್ಯಾನ,[3] ಕಾವ್ಯಕರಣ,[4] ಲೋಕಾಯತ[5] ಮುಂತಾದ ಈ ತೆರದ ತಿರಶ್ಚೀನ ವಿದ್ಯೆಗಳ ಮಿಥ್ಯಾಜೀವನದಿಂದ ಜೀವಿಸಿದರೆ; ಈ ತೆರದ ತಿರಶ್ಚೀನ ವಿದ್ಯೆಗಳ ಮಿಥ್ಯಾಜೀವನದಿಂದ ವಿಮುಖನಾಗುವನು. ಇದು ಕೂಡ ಅವನ ಶೀಲವಾಗುವುದು.

೬೧. *“ಕೆಲವರು ಪೂಜ್ಯರಾದ ಶ್ರಮಣ ಬ್ರಾಹ್ಮಣರು, ಶ್ರದ್ಧೆಯಿಂದ ಕೊಟ್ಟ ಭೋಜನವನ್ನು ಭುಂಜಿಸಿ, ಆವಾಹನ,[6] ವಿವಾಹನ,[7] ಸಂವದನ,[8] ವಿವದನ,[9] ಸಂಕೀರ್ಣ,[10] ವಿಕೀರ್ಣ,[11] ಶುಭಗಕರಣ,[12] ದುರ್ಭಗಕರಣ,[13] ವಿರುದ್ಧಗರ್ಭಕರಣ,[14] ಜಿಹ್ವಾನಿಸ್ತಂಭನ,[15] ಹನುಸಂಹನನ,[16] ಹಸ್ತಾಭಿಜಲ್ಪನ,[17] ಕರ್ಣಜಲ್ಪನ,[18] ಆದರ್ಶ

---

1 ಬೆರಳುಗಳಿಂದ ಎಣಿಸುವುದು. 2 ಬೆರಳುಗಳಿಲ್ಲದೆ ಎಣಿಸುವುದು. 3 ಎಣಿಸಿದುದನ್ನು ಕೂಡುವುದು. 4 ಆಶುಕವಿತೆ ಕಟ್ಟುವುದು. 5 ಲೋಕಕ್ಕೆ ಸಂಬಂಧಿಸಿದ ಜ್ಞಾನ. *ಇವು ಎಲ್ಲ ಆ ಆ ಸಂದರ್ಭದಲ್ಲಿ ಉಪಯೋಗಿಸುವ ಮಂತ್ರಮಾಟಗಳು. 6 ಹೆಣ್ಣು ತರುವುದು. 7 ಹೆಣ್ಣು ಕೊಡುವುದು. 8 ಒಗ್ಗಟ್ಟು ಉಂಟುಮಾಡುವುದು. 9 ಭೇದ ತರುವುದು. 10 ಕೊಟ್ಟ ಸಾಲಗಳನ್ನು ವಸೂಲು ಮಾಡಲು ತಕ್ಕ ಕಾಲ. 11 ಹಣ ವ್ಯಯಮಾಡಲು ತಕ್ಕ ಕಾಲ. 12 ಸೌಭಾಗ್ಯವನ್ನು ಉಂಟುಮಾಡುವುದು. 13 ದೌರ್ಭಾಗ್ಯ ಉಂಟುಮಾಡುವುದು. 14 ಗರ್ಭಸ್ರಾವ. 15 ಮೂಗನಾಗುವುದು. 16 ದವಡೆ ಕಟ್ಟಿಹೋಗುವುದು. 17 ಕೈಗಳನ್ನು ಮೇಲೆತ್ತುವಂತೆ ಮಾಡಲು ಹೇಳುವ ಮಂತ್ರ. 18 ಕಿವುಡಾಗಲು ಹೇಳುವ ಮಂತ್ರ

ಪ್ರಶ್ನೆ,[1] ಕುಮಾರೀಪ್ರಶ್ನೆ,[2] ದೇವಪ್ರಶ್ನೆ,[3] ಆದಿತ್ಯೋಪಸ್ಥಾನ,[4] ಮಹದುಪಸ್ಥಾನ,[5] ಅಭ್ಯುಜ್ವಲನ,[6] ಶ್ರೀಯ ಆಹ್ವಯನ[7]—ಇದೇ ಮೊದಲಾದ ಈ ತೆರದ ತಿರಶ್ಚೀನ ವಿದ್ಯೆಗಳ ಮಿಥ್ಯಾಜೀವನದಿಂದ ಜೀವಿಸಿದರೆ ; ಈ ತೆರದ ತಿರಶ್ಚೀನ ವಿದ್ಯೆಗಳ ಮಿಥ್ಯಾಜೀವನದಿಂದ ವಿಮುಖನಾಗುವನು. ಇದು ಕೂಡ ಅವನ ಶೀಲವಾಗುವುದು.

೬೨. "ಕೆಲವರು ಪೂಜ್ಯರಾದ ಶ್ರಮಣ ಬ್ರಾಹ್ಮಣರು, ಶ್ರದ್ಧೆಯಿಂದ ಕೊಟ್ಟ ಭೋಜನವನ್ನು ಭುಂಜಿಸಿ, ಶಾಂತಿಕರ್ಮ,[8] ಪ್ರಣಿಧಿಕರ್ಮ,[9] ಭೂರಿಕರ್ಮ,[10] 'ವಸ್ಸ' ಕರ್ಮ,[11] 'ವೋಸ್ಸ'ಕರ್ಮ,[12] ವಾಸ್ತುಕರ್ಮ,[13] ವಾಸ್ತುಪರಿಕಿರಣ,[14] ಆಚಮನ,[15] ಸ್ನಪನ,[15] ಹವನ,[15] ವಮನ,[15] ವಿರೇಚನ,[15] ಊರ್ಧ್ವವಿರೇಚನ,[15] ಅಧೋವಿರೇಚನ,[15] ಶೀರ್ಷವಿರೇಚನ,[16] ಕರ್ಣತೈಲ,[17] ನೇತ್ರತರ್ಪಣ,[17] ನಸ್ತಕರ್ಮ,[17] ಅಂಜನ,[18] ಪ್ರತ್ಯಂಜನ,[18] ಶಾಲಾಕ್ಯ,[19] ಶಲ್ಯಕರ್ತೃಕ,[20] ದಾರಕಚಿಕಿತ್ಸೆ,[21] ಮೂಲಭೈಷಜ್ಯ,[22] ಪ್ರತಿಮೋಕ್ಷಕ್ಕೆ[23] ಔಷಧಕೊಡುವುದು—ಇದೇ ಮೊದಲಾದ ತಿರಶ್ಚೀನ ವಿದ್ಯೆಗಳ ಮಿಥ್ಯಾಜೀವನದಿಂದ ಜೀವಿಸಿದರೆ ; ಭಿಕ್ಷುವು ಈ ತೆರದ ತಿರಶ್ಚೀನ ವಿದ್ಯೆಗಳ ಮಿಥ್ಯಾಜೀವನದಿಂದ ವಿಮುಖನಾಗುವನು. ಇದು ಕೂಡ ಅವನ ಶೀಲವಾಗುವುದು.

೬೩. "ಆಗ ಮಹಾರಾಜ! ಆ ಭಿಕ್ಷುವು ಹೀಗೆ ಶೀಲಸಂಪನ್ನನಾಗಿ, ತನ್ನ ಶೀಲ ಸಂವರದ ಮಟ್ಟಿಗೆ ಯಾವ ಕಡೆಯಿಂದಲೂ ಭಯ ಕಾಣನು. ಮಹಾರಾಜ! ಮೂರ್ಧಾಭಿಷಿಕ್ತನಾಗಿ, ಶತ್ರುಗಳನ್ನು ಅಡಗಿಸಿದ ಕ್ಷತ್ರಿಯನು ತನ್ನ ಶತ್ರುಗಳಿಂದ ಮಟ್ಟಿಗೆ ಯಾವ ಕಡೆಯಿಂದಲೂ ಭಯ ಕಾಣನು ಹೇಗೋ, ಹಾಗೆಯೇ ಮಹಾರಾಜ, ಆ ಭಿಕ್ಷುವು ಹೀಗೆ ಶೀಲಸಂಪನ್ನನಾಗಿ, ತನ್ನ ಶೀಲ ಸಂವರದ ಮಟ್ಟಿಗೆ

---

1, 2, 3 ಕನ್ನಡಿ, ಕುಮಾರಿ, ದೇವತೆಗಳ ಮೂಲಕ ಪ್ರಶ್ನೆಗಳಿಗೆ ಉತ್ತರ ಹೇಳುವುದು. 4 ಸೂರ್ಯಪೂಜೆ 5 ಪೃಥ್ವೀಪೂಜೆ (?) 6 ಬಾಯಿಯಿಂದ ಜ್ವಾಲೆ ತರಿಸುವುದು 7 ಶ್ರೀಯನ್ನು ಆಹ್ವಾನಿಸುವುದು. 8 (ದೇವತೆಗಳನ್ನು) ಶಾಂತಗೊಳಿಸುವ ಕರ್ಮ 9 ಮಾಡಿಕೊಂಡ ಹರಕೆಯನ್ನು ತೀರಿಸುವುದು. 10 ಚಿನ್ನ ಮಾಡುವುದು (?). 11 ಷಂಡನನ್ನು ಪುರುಷನನ್ನಾಗಿಸುವುದು. 12 ಪುರುಷನನ್ನು ಷಂಡನಾಗಿಸುವುದು. 13 ಮನೆ ಕಟ್ಟುವ ನಿವೇಶನವನ್ನು ಆರಿಸುವುದು 14 ಮನೆ ಕಟ್ಟುವ ಕಡೆಮಾಡುವ ಬಲಿಕರ್ಮ. 15 ಇವು ಮಿಕ್ಕವರಿಗೆ ಮಾಡಿಸುವ ಕರ್ಮಗಳು 16 ತಲೆಭಾರ ಇಳಿಸಲು ಕೊಡುವ ವಿರೇಚನ 17 ಇವು ಕಿವಿ ಕಣ್ಣು ಮೂಗುಗಳಿಗೆ ಕೊಡುವ ಔಷಧ. 18 ಕಣ್ಣನ್ನು ತಣ್ಣಗಿರಿಸುವುದಕ್ಕೆ ಕೊಡುವುದು. 19 Ophthalmology. 20 Surgery. 21 ಮಕ್ಕಳ ವೈದ್ಯ. 22 ಬೇರು ಮುಂತಾದುವನ್ನು ಔಷಧಿ ಕೊಡುವುದು 23 ಒಂದು ಔಷಧಿ ಕೊಟ್ಟು ಅದರ ಪರಿಣಾಮವನ್ನು ಬದಲಾಯಿಸಲು ಬೇರೆ ಔಷಧಿ ಕೊಡುವುದು. ಈ ಮೇಲೆ ಹೇಳಿದ ಕರ್ಮಗಳನ್ನು ಶ್ರಮಣನು ಮಾಡಕೂಡದೆಂದಲ್ಲ, ಅದನ್ನೇ ಕಾಯಿಕವಾಗಿ ಮಾಡಬಾರದು, ಅಷ್ಟೆ.

ಯಾವ ಕಡೆಯಿಂದಲೂ ಭಯ ಕಾಣನು. ಅವನು ಈ ಆರ್ಯಶೀಲಸ್ಕಂಧ[1]ದಿಂದ ಕೂಡಿ, ಅನವದ್ಯ[2] ಸುಖವನ್ನು ಅಧ್ಯಾತ್ಮದಲ್ಲಿ ಅನುಭವಿಸುವನು. ಭಿಕ್ಷುವು ಹೀಗೆ ಶೀಲಸಂಪನ್ನನಾಗುವನು, ಮಹಾರಾಜ!

೬೪. "ಮಹಾರಾಜ! ಭಿಕ್ಷುವು ಇಂದ್ರಿಯಗಳಲ್ಲಿ[3] ಗುಪ್ತದ್ವಾರನಾಗುವುದು ಹೇಗೆ? ಇಲ್ಲಿ ಮಹಾರಾಜ, ಭಿಕ್ಷುವು ಕಣ್ಣಿನಿಂದ ರೂಪವನ್ನು ನೋಡಿದರೆ, ಅದರ ನಿಮಿತ್ತ[4]ವನ್ನಾಗಲಿ, ಅನುವ್ಯಂಜನ[5]ವನ್ನಾಗಲಿ ಹಿಡಿಯುವುದಿಲ್ಲ. ಈ ಚಕ್ಷುರಿಂದ್ರಿಯವು ಅಸಂವೃತವಾಗಿ ವಿಹರಿಸುವನಿಗೆ, ಯಾವುದರಿಂದ ಪಾಪವೂ ಅಕುಶಲವೂ ಆದ ಧರ್ಮಗಳು, ಅಭಿಧ್ಯಾ[6] ದೌರ್ಮನಸ್ಯ[7]ಗಳು ಹರಿದು ಬರುವುವೋ—ಅದರ ಸಂವರಕ್ಕಾಗಿ ದುಡಿಯುವನು. ಚಕ್ಷುರಿಂದ್ರಿಯವನ್ನು ರಕ್ಷಿಸುವನು. ಚಕ್ಷುರಿಂದ್ರಿಯದ ಸಂವರವನ್ನು ಸಾಧಿಸುವನು. ಕಿವಿಯಿಂದ ಶಬ್ದವನ್ನು ಕೇಳಿದರೆ . . . ಮೂಗಿನಿಂದ ಗಂಧವನ್ನು ಆಘ್ರಾಣಿಸಿದರೆ . . . ನಾಲಗೆಯಿಂದ ರಸವನ್ನು ಸವಿದರೆ . . . ದೇಹದಿಂದ ಸ್ಪರ್ಶವನ್ನು ತಿಳಿದರೆ . . . ಮನಸ್ಸಿನಿಂದ ಧರ್ಮದ ವಿಜ್ಞಾನಪಡೆದರೆ . . . [ಇಲ್ಲಿ ಪ್ರತಿ ಇಂದ್ರಿಯಕ್ಕೂ ಆ ಆ ಇಂದ್ರಿಯಗಳನ್ನು ಶ್ರೋತ್ರ, ಘ್ರಾಣ, ಜಿಹ್ವಾ, ಕಾಯ, ಮನಸ್ಸು ಎಂದು ಬದಲಿಸಿ ಮೇಲಿನಂತೆ ಓದಿಕೊಳ್ಳಬೇಕು.] . . . ಇಂದ್ರಿಯದ ಸಂವರವನ್ನು ಸಾಧಿಸುವನು. ಅವನು ಈ ತೆರದ ಆರ್ಯ ಇಂದ್ರಿಯ ಸಂವರದಿಂದ ಕೂಡಿ, ಅವ್ಯಾಸೇಕ[8] ಸುಖವನ್ನು ಅಧ್ಯಾತ್ಮದಲ್ಲಿ ಅನುಭವಿಸುವನು. ಭಿಕ್ಷುವು ಹೀಗೆ ಇಂದ್ರಿಯಗಳಲ್ಲಿ ಗುಪ್ತದ್ವಾರನಾಗುವನು, ಮಹಾರಾಜ!

೬೫. "ಮಹಾರಾಜ! ಭಿಕ್ಷುವು ಸ್ಮೃತಿ ಸಂಪ್ರಜಾನ್ಯಗಳಿಂದ ಕೂಡಿರುವುದು ಹೇಗೆ? ಇಲ್ಲಿ ಮಹಾರಾಜ, ಭಿಕ್ಷುವು ಮುಂದೆ ಹೋಗಲಿ ಹಿಂದೆ ಬರಲಿ, ಸಂಪ್ರಜಾನಕಾರಿಯಾಗಿರುವನು. ಆಲೋಕಿಸುವಾಗ, ವಿಲೋಕಿಸುವಾಗ, ಮಡಿಸುವಾಗ,[9] ಪಸರಿಸುವಾಗ,[9] ಸಂಘಾತಿ[10] ಪಾತ್ರ[11] ಚೀವರ[10] ಧಾರಣೆಯಾಗುವಾಗ, ತಿನ್ನುವಾಗ, ಕುಡಿಯುವಾಗ, ಅಗಿಯುವಾಗ, ರುಚಿನೋಡುವಾಗ, ಮಲಮೂತ್ರ ಬಿಡುವಾಗ, ನಡೆವಾಗ, ನಿಂತಾಗ, ಕುಳಿತಾಗ, ಮಲಗಿದಾಗ, ಜಾಗ್ರತನಾದಾಗ, ಮಾತನಾಡಿದಾಗ, ಮೌನದಿಂದಿರುವಾಗ ಸಂಪ್ರಜಾನಕಾರಿಯಾಗಿರುವನು. ಭಿಕ್ಷುವು ಹೀಗೆ ಸ್ಮೃತಿ ಸಂಪ್ರಜಾನ್ಯಗಳಿಂದ ಕೂಡಿರುವನು, ಮಹಾರಾಜ!

---

[1] ಅರ್ಹವಾದ ಶೀಲಗಳ ಗುಂಪು. [2] ಅನಿಂದಿತ [3] ಇಂದ್ರಿಯಗಳು ಆರು, ಪಂಚೇಂದ್ರಿಯಗಳ ಜೊತೆಗೆ ಮನಸ್ಸು. [4] ಆ ರೂಪವು ಹೆಣ್ಣೋ ಗಂಡೋ ಎಂಬ ಸ್ಥೂಲಾಂಶ [5] ಅದು ನಗುತ್ತಿದೆಯೋ ಅಳುತ್ತಿದೆಯೋ ಎಂಬ ಸೂಕ್ಷ್ಮಾಂಶ. [6] ಲೋಭ. [7] ಅತೃಪ್ತಿ. [8] ಕ್ಲೇಶದ ಸಂಪರ್ಕವಿಲ್ಲದುದು. [9] ಅಂಗಗಳನ್ನು. [10] ಭಿಕ್ಷುವಿನ ಬಟ್ಟೆಗಳು. [11] ಭಿಕ್ಷಾಪಾತ್ರೆ.

೭೬. "ಭಿಕ್ಷುವು ಸಂತುಷ್ಟನಾಗಿರುವುದು ಹೇಗೆ? ಇಲ್ಲಿ ಭಿಕ್ಷುವು ಮೈಗೆ ಸಾಕಷ್ಟು ಬಟ್ಟೆಯಿಂದ, ಹೊಟ್ಟೆಗೆ ಸಾಕಷ್ಟು ಪಿಂಡಪಾತ[1]ದಿಂದ ಸಂತುಷ್ಟನಾಗಿರುವನು. ಅವನು ಎಲ್ಲೆಲ್ಲಿ ಹೋದರೂ ಇದನ್ನು[2] ತೆಗೆದುಕೊಂಡೇ ಹೋಗುವನು. ಮಹಾರಾಜ! ರೆಕ್ಕೆಯಿರುವ ಹಕ್ಕಿಯು ಎಲ್ಲೆಲ್ಲಿ ಹಾರಿದರೂ ತನ್ನ ರೆಕ್ಕೆಗಳನ್ನು ಹೊತ್ತೇ ಹಾರುವಂತೆ—ಹಾಗೆಯೇ ಮಹಾರಾಜ, ಭಿಕ್ಷುವು ಮೈಗೆ ಸಾಕಷ್ಟು ಬಟ್ಟೆಯಿಂದ. . . [ಮೇಲಿನಂತೆ]. . . ತೆಗೆದುಕೊಂಡೇ ಹೋಗುವನು. ಭಿಕ್ಷುವು ಹೀಗೆ ಸಂತುಷ್ಟನಾಗಿರುವನು, ಮಹಾರಾಜ!

೭೭. "ಅವನು ಈ ಆರ್ಯಶೀಲಸ್ಕಂಧಗಳಿಂದ, ಈ ಆರ್ಯ ಇಂದ್ರಿಯ ಸಂವರದಿಂದ, ಈ ಆರ್ಯಸ್ಮೃತಿ ಸಂಪ್ರಜಾನ್ಯಗಳಿಂದ, ಈ ಆರ್ಯ ಸಂತುಷ್ಟಿಯಿಂದ ಕೂಡಿ ಅರಣ್ಯ, ವೃಕ್ಷಮೂಲ, ಪರ್ವತ, ಕಂದರ, ಗಿರಿಗುಹೆ, ಶ್ಮಶಾನ, ವನಪ್ರಸ್ಥ, ಬಯಲಿನ ಹುಲ್ಲುಗುಡ್ಡೆ—ಮೊದಲಾದ ವಿವಿಕ್ತ ಶಯನಾಸನಗಳನ್ನು ಸೇವಿಸುವನು. ಅವನು ಊಟವಾದ ಮೇಲೆ ಪಿಂಡಪಾತ್ರೆಯೊಡನೆ ಹಿಂದಿರುಗಿ, ಚಕ್ಕಳ ಬಕ್ಕಳ ಹಾಕಿ, ದೇಹವನ್ನು ಋಜುವಾಗಿರಿಸಿ, ಸ್ಮೃತಿಯನ್ನು ಪರಿಮುಖವಾಗಿ ಎತ್ತಿ ನಿಲಿಸಿ ಕುಳಿತುಕೊಳ್ಳುವನು.

೭೮. "ಅವನು ಲೋಕದ ಮೇಲಿನ ಅಭಿಧ್ಯೆಯನ್ನು ಬಿಟ್ಟು, ಅಭಿಧ್ಯೆ ಹೋದ ಚೇತಸ್ಸಿನಿಂದ ವಿಹರಿಸುವನು. ಅಭಿಧ್ಯೆ ಹೋಗಿ ಚಿತ್ತವು ಪರಿಶುದ್ಧವಾಗುವುದು. [3]ವ್ಯಾಪಾದಪ್ರದೋಷ[3]ವನ್ನು ಬಿಟ್ಟು, ಅವ್ಯಾಪನ್ನ ಚಿತ್ತನಾಗಿ ವಿಹರಿಸುವನು. ಸರ್ವಪ್ರಾಣಭೂತ ಹಿತಾನುಕಂಪಿಯಾಗಿ, [4]ವ್ಯಾಪಾದ ಪ್ರದೋಷದಿಂದ ಚಿತ್ತವನ್ನು ಪರಿಶೋಧಿಸುವನು.[4] ಸ್ತ್ಯಾನಮಿದ್ಧ[5]ಗಳನ್ನು ಬಿಟ್ಟು, ವಿಗತಸ್ತ್ಯಾನಮಿದ್ಧನಾಗಿ ವಿಹರಿಸುವನು. ಆಲೋಕಸಂಜ್ಞಿ[6]ಯಾಗಿ, ಸ್ಮೃತನಾಗಿ, ಸಂಪ್ರಜಾನನಾಗಿ, ಸ್ತ್ಯಾನಮಿದ್ಧಗಳಿಂದ ಚಿತ್ತವನ್ನು ಪರಿಶೋಧಿಸುವನು. [7]ಔದ್ಧೃತ್ಯ ಕೌಕೃತ್ಯ[7]ಗಳನ್ನು ಬಿಟ್ಟು, ಅನುದ್ಧೃತನಾಗಿ ವಿಹರಿಸುವನು. ಅಧ್ಯಾತ್ಮದಲ್ಲಿ ಉಪಶಾಂತಚಿತ್ತನಾಗಿ, ಔದ್ಧೃತ್ಯ ಕೌಕೃತ್ಯಗಳಿಂದ ಚಿತ್ತವನ್ನು ಪರಿಶೋಧಿಸುವನು. ವಿಚಿಕಿತ್ಸೆ[8]ಯನ್ನು ಬಿಟ್ಟು ತೀರ್ಣ

---

[1] ಭಿಕ್ಷಾಪಾತ್ರೆಗೆ ಬಿದ್ದ, ತನ್ನೊಬ್ಬನಿಗೆ ಸಾಕಾಗುವ, ಆಹಾರ. [2] ಈ ಸಂತುಷ್ಟಿಯನ್ನು. [3] ಕೊಲ್ಲಬೇಕೆಂಬ ಆಸೆಯ ದೋಷ [4] ಎಂದರೆ, ವ್ಯಾಪಾದ ಪ್ರದೋಷ ಹೋಗಿ ಚಿತ್ತವು ಪರಿಶುದ್ಧವಾಗುವುದು. [5] ಸ್ತ್ಯಾನ = ಚಿತ್ತದ ಅಕರ್ಮಣ್ಯತೆ, ಸ್ತ್ಯಾನಮಿದ್ಧಗಳು ಸುಮಾರು ಸಮಶಬ್ದಗಳು. ಮಿದ್ಧ = ದೇಹದ ಜಡತ್ವ. [6] ಕಂಡುದನ್ನು ಕಂಡೆನೆಂದು ತಿಳಿದವನು [7] 'ಉದ್ಧಚ್ಚ-ಕುಕ್ಕುಚ್ಚಂ'. 'ಉದ್ಧಚ್ಚಮಿತಿ ಉದ್ಧತಭಾವೋ', ಉದ್ಧೃತಭಾವ ಎಂದರೆ ತಳಮಳ, ಅಸ್ತಿಮಿತತೆ. 'ಕುಚ್ಛಿತಂ ಕತಂ ಕುಕತಂ, ತಸ್ಸ ಭಾವೋ ಕುಕ್ಕುಚ್ಚಂ'; ಎಂದರೆ ಕೆಟ್ಟ ನಡತೆ. [8] ಸಂದೇಹ, ಸಂಶಯ.

ವಿಚಿಕಿತ್ಸನಾಗಿ ವಿಹರಿಸುವನು. ಕುಶಲವಾದ ಧರ್ಮದಲ್ಲಿ ಅಕಥಂಕಥಿ[1]ಯಾಗಿ, ವಿಚಿಕಿತ್ಸೆಯಿಂದ ಚಿತ್ತವನ್ನು ಪರಿಶೋಧಿಸುವನು.

೬೯. *"ಮಹಾರಾಜ! ಪುರುಷನೊಬ್ಬನು ಋಣ ತೆಗೆದುಕೊಂಡು ಕೆಲಸಕ್ಕೆ ತೊಡಗುವನು. ಆಗ ಅವನ ಕೆಲಸ ಸಮೃದ್ಧಿಯಾಗುವುದು. ಅವನು ಹಳೆಯ ಋಣ ಮೂಲವಷ್ಟನ್ನೂ ಕೊಟ್ಟುಬಿಡುವುದಲ್ಲದೆ, ಹೆಂಡತಿಯನ್ನು ಸಾಕಲೂ ಮೇಲೆ ಉಳಿಯುವುದು. ಅವನಿಗೆ ಹೀಗೆನಿಸುವುದು—'ನಾನು ಹಿಂದೆ ಋಣ ತೆಗೆದುಕೊಂಡು ಕೆಲಸಕ್ಕೆ ತೊಡಗಿದೆನು. ಆಗ ನನ್ನ ಕೆಲಸ ಸಮೃದ್ಧಿಯಾಯಿತು. ನಾನು ಹಳೆಯ ಋಣಮೂಲವಷ್ಟನ್ನೂ ಕೊಟ್ಟುಬಿಟ್ಟದಲ್ಲದೆ, ಹೆಂಡತಿಯನ್ನು ಸಾಕಲೂ ಮೇಲೆ ಉಳಿದಿದೆ.' ಆ ಕಾರಣದಿಂದ ಅವನು ಪ್ರಮೋದಗೊಂಡು ಸೌಮನಸ್ಯ[2]ವನ್ನು ಪಡೆಯುವನು. ಇದು ಹೇಗೋ—

೭೦. "ಮಹಾರಾಜ! ಪುರುಷನೊಬ್ಬನು ಕಾಯಿಲೆಗೆ ಸಿಕ್ಕಿ, ದುಃಖಿತನಾಗಿ, ಬಲವಾದ ರೋಗವಿದ್ದು, ಅನ್ನ ಅರಗದೆ, ದೇಹಬಲ ಕೊಂಚವೂ ಇಲ್ಲದಿರುವನು. ಕೊಂಚ ಕಾಲದ ಮೇಲೆ ಅವನ ಕಾಯಿಲೆ ಬಿಡುವುದು, ಅನ್ನ ಅರಗುವುದು, ದೇಹದಲ್ಲಿ ಬಲ ಬರುವುದು. ಆಗ, ತನ್ನ ಆಗಿನ ಈಗಿನ ಸ್ಥಿತಿಗಳನ್ನು ಕಂಡು, ಆ ಕಾರಣದಿಂದ ಅವನು ಪ್ರಮೋದಗೊಂಡು ಸೌಮನಸ್ಯವನ್ನು ಪಡೆಯುವನು. ಇದು ಹೇಗೋ—

೭೧. "ಮಹಾರಾಜ! ಪುರುಷನೊಬ್ಬನು ಬಂಧನಾಗಾರದಲ್ಲಿ ಬದ್ಧನಾಗಿದ್ದಾನೆ. ಕೊಂಚ ಕಾಲವಾದ ಮೇಲೆ ಕ್ಷೇಮವಾಗಿ, ಅವ್ಯಯವಾಗಿ, ಅವನ ಭೋಗಗಳಿಗೇನೂ ಕೊರೆಯಿಲ್ಲದೆ, ಅವನ ಬಂಧನ ಬಿಡುವುದು. ಆಗ, ತನ್ನ ಆಗಿನ ಈಗಿನ ಸ್ಥಿತಿಗಳನ್ನು ಕಂಡು, ಆ ಕಾರಣದಿಂದ ಅವನು ಪ್ರಮೋದಗೊಂಡು ಸೌಮನಸ್ಯವನ್ನು ಪಡೆಯುವನು. ಇದು ಹೇಗೋ—

೭೨. "ಮಹಾರಾಜ! ಪುರುಷನೊಬ್ಬನು ಅನಾತ್ಮಾಧೀನನಾಗಿ, ಪರಾಧೀನನಾಗಿ, ಬೇಕೆಂದ ಕಡೆ ಹೋಗಲಾರದೆ ದಾಸನಾಗಿದ್ದಾನೆ. ಕೆಲಕಾಲದ ಮೇಲೆ ಅವನ ದಾಸತ್ವ ಹೋಗಿ, ಅವನು ಆತ್ಮಾಧೀನನಾಗಿ, ಅಪರಾಧೀನನಾಗಿ, ಭುಜಿಷ್ಯ[3]ನಾಗಿ ಬೇಕಾದ ಕಡೆ ಹೋಗಬಲ್ಲನು. ಆಗ, ತನ್ನ ಆಗಿನ ಈಗಿನ ಸ್ಥಿತಿಗಳನ್ನು ಕಂಡು, ಆ ಕಾರಣದಿಂದ ಅವನು ಪ್ರಮೋದಗೊಂಡು ಸೌಮನಸ್ಯವನ್ನು ಪಡೆಯುವನು. ಇದು ಹೇಗೋ—

---

[1] ಅದು ಹೇಗೆ, ಇದು ಹೇಗೆ ಎಂದು ಕೇಳದವನು, ಸಂದೇಹ ಹೋದವನು

* ಈ § ೬೯ರಿಂದ § ೭೪ ಪೂರ್ತಿಯಾಗಿ ಒಂದೇ ಒಂದು ವಾಕ್ಯ

[2] ಸಂತೃಪ್ತಿ, ಮನಸ್ಸಿನ ನಿರಾಳ.

[3] ದಾಸತ್ವ ಹೋದವನು.

೭೩. "ಮಹಾರಾಜ! ಧನಭೋಗಗಳುಳ್ಳ ಪುರುಷನೊಬ್ಬನು ಕಾಂತಾರ[1]ದ ಹೆದ್ದಾರಿಯಲ್ಲಿ ನಡೆಯುತ್ತಿದ್ದಾನೆ; ಅಲ್ಲಿ ದುರ್ಭಿಕ್ಷ, ಬಹು ಭಯ. ಕೊಂಚಕಾಲದ ಮೇಲೆ ಆ ಕಾಂತಾರವನ್ನು ದಾಟಿ ಸ್ವಸ್ಥನಾಗಿ ಗ್ರಾಮಾಂತವನ್ನು ಸಮೀಪಿಸುವನು; ಅಲ್ಲಿ ಕ್ಷೇಮ, ಭಯವಿಲ್ಲ. ಆಗ, ತನ್ನ ಆಗಿನ ಈಗಿನ ಸ್ಥಿತಿಗಳನ್ನು ಕಂಡು, ಆ ಕಾರಣದಿಂದ ಅವನು ಪ್ರಮೋದಗೊಂಡು ಸೌಮನಸ್ಯವನ್ನು ಪಡೆಯುವನು. ಇದು ಹೇಗೋ—

೭೪. "ಹಾಗೆಯೇ ಮಹಾರಾಜ! ಈ ಪಂಚನೀವರಣಗಳು[2] ಆತ್ಮದಿಂದ ಹೋಗದಿರುವ ವರೆಗೆ, ಭಿಕ್ಷುವು ತಾನು ಋಣ ರೋಗ ಬಂಧನಾಗಾರ ದಾಸತ್ವ ಕಾಂತಾರದ ಹೆದ್ದಾರಿಗಳಲ್ಲಿದ್ದಂತೆ ಕಾಣುವನು. ಅದರಂತೆಯೇ ಮಹಾರಾಜ, ಈ ಪಂಚನೀವರಣಗಳು ಆತ್ಮದಿಂದ ಹೋಗಲು, ಭಿಕ್ಷುವು ತಾನು ಆನೃಣ್ಯ ಆರೋಗ್ಯ ಬಂಧನಮೋಕ್ಷ ಭುಜಿಷ್ಯ ಕ್ಷೇಮಾಂತಭೂಮಿ[3]ಗಳಲ್ಲಿದ್ದಂತೆ ಕಾಣುವನು.

೭೫. "ಈ ಪಂಚನೀವರಣಗಳು ಆತ್ಮದಿಂದ ಹೋದುದನ್ನು ಕಂಡು, ಅವನಿಗೆ ಪ್ರಮೋದ ಹುಟ್ಟುವುದು. ಪ್ರಮುದಿತನಿಗೆ ಪ್ರೀತಿ ಹುಟ್ಟುವುದು. ಪ್ರೀತಿಯಿಂದ ಕಾಯವು ಪ್ರಶ್ರಂಭಿಸುವುದು. ಅವನು ಪ್ರಶ್ರಬ್ಧ[4]ಕಾಯನಾಗಿ ಸುಖವನ್ನು ಅನುಭವಿಸುವನು. ಆ ಸುಖದಲ್ಲಿ ಚಿತ್ತವನ್ನು ನಿಲ್ಲಿಸುವನು. ಅವನು ಕಾಮಗಳಿಂದ ಬೇರಾಗಿ, ಅಕುಶಲಧರ್ಮಗಳಿಂದ ದೂರನಾಗಿ, ವಿವೇಕ[5]ದಿಂದ ಜನಿಸಿದ ಪ್ರೀತಿ ಸುಖಗಳ ಪ್ರಥಮಧ್ಯಾನವನ್ನು ಉಪಸಂಪಾದಿಸಿ ವಿಹರಿಸುವನು. ಅದು ವಿತರ್ಕವಿಚಾರ[6]ಗಳಿಂದ ಕೂಡಿದುದು. ತನ್ನ ಇಡೀ ಕಾಯದಲ್ಲಿ ವಿವೇಕಜವಾದ ಪ್ರೀತಿಸುಖಗಳಿಂದ ಅಸ್ಪೃಷ್ಟ

---

[1] 'ಕಂತಾರಮಿತಿ ನಿರುದಕ ಈರಿಣ'—ನೀರಿಲ್ಲದ ಬಂಜರುನೆಲ. ಕಾಂತಾರಗಳಲ್ಲಿ ಐದು ತೆರನುಂಟು: ಕಳ್ಳಕಾಕರಿರುವುದು, ದುಷ್ಟಮೃಗಗಳಿರುವುದು, ನೀರಿಲ್ಲದುದು, ಮನುಷ್ಯರಿಲ್ಲದುದು, ತಿನ್ನುವುದಕ್ಕೆ ಏನೂ ಸಿಗದುದು. [2] ಅಭಿದ್ಯೆ, ವ್ಯಾಪಾದ ಪ್ರದೋಷ, ಸ್ತ್ಯಾನಮಿದ್ಧಗಳು, ಔದ್ಧತ್ಯ ಕೌಕೃತ್ಯ, ವಿಚಿಕಿತ್ಸೆ. ಈ ಐದೂ ನೀವರಣಗಳು, ಎಂದರೆ ನಿರ್ವಾಣ ಸಾಧನೆಗೆ ನಡುವೆ ಬರುವ ತಡೆಗಳು. [3] ಕ್ಷೇಮವೇ ಮೇರೆಯಾಗಿರುವ ಪ್ರದೇಶ, ಕಾಂತಾರಕ್ಕೆ ವಿಪರೀತವಾದುದು. [4] ಪ್ರಶ್ರಬ್ಧಿ ಎಂದರೆ ಶಾಂತಿ. ಇದು ಬೋಧ್ಯಂಗಗಳಲ್ಲಿ ಐದನೆಯದು. [5] ಒಂಟಿಯಾಗಿ ಬೇರಾಗುವಿಕೆ. ಈ ವಿವೇಕ ಮೂರು ತೆರ: ಒಂಟಿಯಾಗಿ ವಾಸಿಸುವುದು ಕಾಯವಿವೇಕ, ಬೇಕಾದುದನ್ನು ಆಯ್ದುಕೊಂಡು ಬೇಡದುದನ್ನು ಬಿಡುವುದು ಚೇತೋವಿವೇಕ, ಪಂಚನೀವರಣಗಳನ್ನು ತಡೆದಿಡುವುದು ವಿಕ್ಷಂಭನ ವಿವೇಕ. [6] ಈ ವಿತರ್ಕ ವಿಚಾರಗಳು ಸುಮಾರು ಸಮಶಬ್ದಗಳು. 'ವಿಸುದ್ಧಿಮಗ್ಗ' ಎಂಬ ಗ್ರಂಥದಲ್ಲಿ 'ಕುಂಬಾರನ ದಂಡ ಪ್ರಹಾರದಿಂದ ಚಕ್ರ ತಿರುಗುತ್ತಿರುವಾಗ, ಪಾತ್ರೆ ಮಾಡುವುದಕ್ಕೆ ಚಕ್ರವನ್ನು ನಿಲಿಸುವ ಕೈಯಂತೆ ವಿತರ್ಕ, ಆಡಿಸುವ ಕೈಯಂತೆ ವಿಚಾರ' ಎಂದಿದೆ. ಎಂದರೆ ವಿತರ್ಕವು ಸ್ಥಾಯಿಯಾದುದು, ವಿಚಾರಕ್ಕೆ ಹೆಚ್ಚು ಚಲನವುಂಟು.

ವಾದುದು ಕೊಂಚವೂ ಇಲ್ಲದಂತೆ, ತನ್ನ ಅದೇ ಕಾಯವನ್ನು ವಿವೇಕಜವಾದ ಪ್ರೀತಿ ಸುಖಗಳಿಂದ [1]ಅಭಿಸ್ಯಂದಿಸುವನು, ಪರಿಸ್ಯಂದಿಸುವನು, ಪರಿಪೂರಿಸುವನು, ಪರಿಸ್ಫುರಿಸುವನು.[1]

೭೬. "ಮಹಾರಾಜ! ದಕ್ಷನಾದ ಸ್ನಾಪಕನಾಗಲಿ, ಅವನ ಶಿಷ್ಯನಾಗಲಿ ಕಂಚಿನ ಪಾತ್ರೆಯಲ್ಲಿ ಸ್ನಾನೀಯಚೂರ್ಣವನ್ನು ಚಿಮುಕಿಸಿ, ಉದಕವನ್ನು ಪರಿಪ್ರೋಕ್ಷಿಸಿ ಕಲಸಿದರೆ, ಆ ಸ್ನಾನೀಯ ಚೂರ್ಣದ ಉಂಡೆಯು ನೀರು ಜಿನುಗದಂತೆ, ನೀರಿನಿಂದ ನೆನೆದು, ನೀರಿನಿಂದ ಪರೀತವಾಗಿ, ಒಳಗು ಹೊರಗುಗಳಲ್ಲ ನೀರಿನಿಂದ ಹೇಗೆ ಸ್ಫುಟವಾಗುವುದೋ—ಹಾಗೆಯೇ ಮಹಾರಾಜ, ಭಿಕ್ಷುವು ತನ್ನ ಇದೇ ಕಾಯದಲ್ಲಿ . . . [§ ೭೫ ನೋಡಿ]. . . ಪರಿಸ್ಫುರಿಸುವನು.

"ಮಹಾರಾಜ! ಹಿಂದೆ ಹೇಳಿದ ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲಕ್ಕಿಂತ ಮೇಲಾದ, ಸಿಹಿಯಾದ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲವಿದು.

೭೭. "ಪುನಃ ಮುಂದೆ, ಮಹಾರಾಜ, ಭಿಕ್ಷುವು ವಿತರ್ಕ ವಿಚಾರಗಳನ್ನು ಉಪಶಮಗೊಳಿಸಿ, ಸಮಾಧಿ[2]ಯಿಂದ ಜನಿಸಿದ ಪ್ರೀತಿ ಸುಖಗಳ ಎರಡನೆಯ ಧ್ಯಾನವನ್ನು ಉಪಸಂಪಾದಿಸಿ ವಿಹರಿಸುವನು. ಅಲ್ಲಿ ವಿತರ್ಕ ವಿಚಾರಗಳಿಲ್ಲ. ಅಲ್ಲಿ ಅಧ್ಯಾತ್ಮವಾದ ಚೇತಸ್ಸು ಸಂಪ್ರಸನ್ನವಾಗುವುದು, ಏಕೋದಿಭಾವ[3] ಬರುವುದು. ತನ್ನ ಇದೇ ಕಾಯದಲ್ಲಿ ಸಮಾಧಿಜವಾದ ಪ್ರೀತಿ ಸುಖಗಳಿಂದ ಅಸ್ಪೃಷ್ಟವಾದುದು ಕೊಂಚವೂ ಇಲ್ಲದಂತೆ, ತನ್ನ ಅದೇ ಕಾಯವನ್ನು ಸಮಾಧಿಜವಾದ ಪ್ರೀತಿ ಸುಖಗಳಿಂದ ಅಭಿಸ್ಯಂದಿಸುವನು, ಪರಿಸ್ಯಂದಿಸುವನು, ಪರಿಪೂರಿಸುವನು, ಪರಿಸ್ಫುರಿಸುವನು.

೭೮. "ಮಹಾರಾಜ! ನೀರಿನ ಕೊಳವಿದೆ. ನೀರು ಕೆಳಗಿಂದ ಚಿಮ್ಮುತ್ತಿದೆ. ಅದಕ್ಕೆ ಪೂರ್ವದಲ್ಲಾಗಲಿ, ಪಶ್ಚಿಮದಲ್ಲಾಗಲಿ, ಉತ್ತರದಲ್ಲಾಗಲಿ, ದಕ್ಷಿಣದಲ್ಲಾಗಲಿ ನೀರು ಬರುವ ದಾರಿಯಿಲ್ಲ. ದೇವತೆ ಕೂಡ ಕಾಲ ಕಾಲಕ್ಕೆ ಅದರ ಮೇಲೆ ಮಳೆ ಸುರಿಯುವುದಿಲ್ಲ. ಆದರೂ ಶೀತವಾರಿಧಾರೆಯು ಆ ಕೊಳದಿಂದ ಮೇಲೆದ್ದು, ಅದೇ ಕೊಳವನ್ನು ಶೀತವಾರಿಯಿಂದ ಅಭಿಸ್ಯಂದಿಸಿ, ಪರಿಸ್ಯಂದಿಸಿ, ಪರಿಪೂರಿಸಿ, ಪರಿಸ್ಫುರಿಸುವುದು ಹೇಗೋ—ಹಾಗೆಯೇ ಮಹಾರಾಜ, ಭಿಕ್ಷುವು ತನ್ನ ಇದೇ ಕಾಯದಲ್ಲಿ. . . . [§ ೭೭ ನೋಡಿ]. . . . ಪರಿಸ್ಫುರಿಸುವನು.

"ಮಹಾರಾಜ! ಹಿಂದೆ ಹೇಳಿದ ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲಕ್ಕಿಂತ ಮೇಲಾದ, ಸಿಹಿಯಾದ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲವಿದು.

---

[1] ದೇಹದಲ್ಲೆಲ್ಲ ಹರಿಯಿಸುವನು. ದೇಹವ ಸುತ್ತ ಹರಿಯಿಸುವನು. ದೇಹದ ತುಂಬ ತುಂಬಿಸುವನು. ದೇಹದ ತುಂಬ ಹರಡಿಕೊಳ್ಳುವಂತೆ ಮಾಡುವನು. [2] ಚಿತ್ತದ ಏಕಾಗ್ರತೆ [3] ಮನಸ್ಸನ್ನು ಯಾವುದಾದರೂ ಒಂದರಲ್ಲಿಯೇ ನಿಲಿಸುವ ಸ್ಥಿತಿ.

೭೯. " ಪುನಃ ಮುಂದೆ, ಮಹಾರಾಜ, ಭಿಕ್ಷುವು ಪ್ರೀತಿಯಲ್ಲಿ ವಿರತನಾಗಿ, ಉಪೇಕ್ಷೆ[1]ಯಿಂದ ವಿಹರಿಸುವನು. ಸ್ಮೃತನಾಗಿ, ಸಂಪ್ರಜಾನನಾಗಿ ' ಉಪೇಕ್ಷೆ ಸ್ಮೃತಿಗಳಿರುವವನು ಸುಖವಿಹಾರಿ ' ಎಂದು ಆರ್ಯರು ವಿವರಿಸುವಂತಹ ಸುಖವನ್ನು ಕಾಯದಲ್ಲಿ ಅನುಭವಿಸುತ್ತ ತೃತೀಯ ಧ್ಯಾನವನ್ನು ಉಪಸಂಪಾದಿಸಿ ವಿಹರಿಸುವನು. ತನ್ನ ಇಡೀ ಕಾಯದಲ್ಲಿ ನಿಷ್ಪ್ರೀತಿಕವಾದ ಸುಖದಿಂದ ಅಸ್ಪೃಷ್ಟವಾದುದು ಕೊಂಚವೂ ಇಲ್ಲದಂತೆ, ತನ್ನ ಅದೇ ಕಾಯವನ್ನು ನಿಷ್ಪ್ರೀತಿಕವಾದ ಸುಖದಿಂದ ಅಭಿಸ್ಯಂದಿಸುವನು, ಪರಿಸ್ಯಂದಿಸುವನು, ಪರಿಪೂರಿಸುವನು, ಪರಿಸ್ಫುರಿಸುವನು.

೮೦. " ಮಹಾರಾಜ! ಉತ್ಪಲ ಪದ್ಮ ಪುಂಡರೀಕಗಳಿರುವ ಸರಸ್ಸಿದೆ. ಆ ಉತ್ಪಲ ಪದ್ಮ ಪುಂಡರೀಕಗಳು ನೀರಿನಲ್ಲಿ ಹುಟ್ಟಿ, ನೀರಿನಲ್ಲಿ ಬೆಳೆದು, ನೀರಿನ ಮೇಲೆ ಬರದೆ, ಒಳಗಿನ ಆಳದಿಂದ ಪೋಷಣೆ ಪಡೆಯುತ್ತವೆ. ಆ ಎಲ್ಲ ಉತ್ಪಲ ಪದ್ಮ ಪುಂಡರೀಕಗಳಲ್ಲಿ ಶೀತವಾರಿಯಿಂದ ಅಸ್ಪೃಷ್ಟವಾದುದು ಕೊಂಚವೂ ಇಲ್ಲದಂತೆ, ಅದರ ಮೇಲು ತುದಿಯಿಂದ ಕೆಳ ತುದಿಯ ವರೆಗೆ ಶೀತವಾರಿಯಿಂದ ಅಭಿಸ್ಯನ್ನವಾಗಿ, ಪರಿಸ್ಯನ್ನವಾಗಿ, ಪರಿಪೂರವಾಗಿ, ಪರಿಸ್ಪೃಷ್ಟವಾಗುವುದು. ಹಾಗೆಯೇ ಮಹಾರಾಜ, ಭಿಕ್ಷುವು ತನ್ನ ಇಡೀ ಕಾಯದಲ್ಲಿ. . . . [§ ೭೯ ಕೊನೆ]. . . ಪರಿಸ್ಫುರಿಸುವನು.

" ಮಹಾರಾಜ! ಹಿಂದೆ ಹೇಳಿದ ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲಕ್ಕಿಂತ ಮೇಲಾದ, ಸಿಹಿಯಾದ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲವಿದು.

೮೧. " ಪುನಃ ಮುಂದೆ, ಮಹಾರಾಜ! ಭಿಕ್ಷುವು ಸುಖವನ್ನು ಬಿಟ್ಟು, ದುಃಖವನ್ನು ಬಿಟ್ಟು, ಹಿಂದೆಯಿದ್ದ ಸೌಮನಸ್ಯ ದೌರ್ಮನಸ್ಯಗಳನ್ನು ತೊರೆದು, ಚತುರ್ಥ ಧ್ಯಾನವನ್ನು ಉಪಸಂಪಾದಿಸಿ ವಿಹರಿಸುವನು. ಅಲ್ಲಿ ದುಃಖವಿಲ್ಲ, ಅಲ್ಲಿ ಸುಖವಿಲ್ಲ. ಅಲ್ಲಿ ಪರಿಶುದ್ಧವಾದ ಉಪೇಕ್ಷೆ ಸ್ಮೃತಿಗಳುಂಟು. ತನ್ನ ಇಡೀ ಕಾಯದಲ್ಲಿ ಚೇತಸ್ಸಿನ ಪರಿಶುದ್ಧಿಯಿಂದ, ಪರಿಶುಭ್ರತೆಯಿಂದ ಅಸ್ಪೃಷ್ಟವಾದುದು ಕೊಂಚವೂ ಇಲ್ಲದಂತೆ, ತನ್ನ ಅದೇ ಕಾಯವನ್ನು ಚೇತಸ್ಸಿನ ಪರಿಶುದ್ಧಿಯಿಂದ, ಪರಿಶುಭ್ರತೆಯಿಂದ ಸ್ಫುರಿಸಿ ಕುಳಿತಿರುವನು.

೮೨. " ಮಹಾರಾಜ! ತನ್ನ ಇಡೀ ಕಾಯದಲ್ಲಿ ಶುಭ್ರ ವಸ್ತ್ರದಿಂದ ಅಸ್ಪೃಷ್ಟವಾದುದು ಕೊಂಚವೂ ಇಲ್ಲದಂತೆ, ಪುರುಷನೊಬ್ಬನು ಶುಭ್ರ ವಸ್ತ್ರಗಳಿಂದ ಸಶೀರ್ಷನಾಗಿ ಮುಚ್ಚಿ ಕುಳಿತಿದ್ದಾನೆ. ಅದರಂತೆಯೇ ಮಹಾರಾಜ, ಭಿಕ್ಷುವು ತನ್ನ ಇಡೀ ಕಾಯದಲ್ಲಿ. . . . [§ ೮೧ ಕೊನೆ]. . . ಸ್ಫುರಿಸಿ ಕುಳಿತಿರುವನು.

---

[1] ಸುಖದುಃಖಗಳನ್ನು ಒಂದೇ ತೆರನಾಗಿ ಕಾಣುವುದು.

"ಮಹಾರಾಜ! ಹಿಂದೆ ಹೇಳಿದ ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲಕ್ಕಿಂತ ಮೇಲಾದ, ಸಿಹಿಯಾದ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲವಿದು.

೮೩. "ಹೀಗೆ ಚಿತ್ತವು ಸಮಾಹಿತವಾಗಿ,[1] ಪರಿಶುದ್ಧವಾಗಿ, ಪರಿಶುಭ್ರವಾಗಿ, ಅನಂಗಣವಾಗಿ,[2] ವಿಗತೋಪಕ್ಲೇಶವಾಗಿ,[3] ಮೃದುಭೂತವಾಗಿ,[4] ಕರ್ಮಣೀಯವಾಗಿ,[5] ಸ್ಥಿತವಾಗಿ, ಅನೇಜ ಪ್ರಾಪ್ತವಾಗಲು[6] ಅವನು ಜ್ಞಾನದರ್ಶನಕ್ಕಾಗಿ ಚಿತ್ತವನ್ನು ಒಯ್ಯುವನು, ಬಗ್ಗಿಸುವನು. 'ಈ ನನ್ನ ಕಾಯವು ರೂಪವುಳ್ಳುದು, ಚತುರ್ಮಹಾಭೂತಗಳಿಂದಾದುದು, ಮಾತಾಪಿತೃಗಳಿಂದ ಸಂಭವಿಸಿದುದು, ಅನ್ನಗಂಜಿಗಳಿಂದ ಬೆಳೆದುದು, [7]ಅನಿತ್ಯ—ಉತ್ಸಾದನ—ಪರಿಮರ್ದನ—ಛೇದನ—ವಿಧ್ವಂಸನ ಧರ್ಮವಾದುದು[7]; ಇದರಲ್ಲಿ ನನ್ನ ವಿಜ್ಞಾನ[8] ಸಿಕ್ಕಿಕೊಂಡಿದೆ, ಪ್ರತಿಬದ್ಧವಾಗಿದೆ'—ಎಂದು ಅವನು ಚೆನ್ನಾಗಿ ತಿಳಿಯುವನು.

೮೪. "ಮಹಾರಾಜ! ವೈಡೂರ್ಯ ಮಣಿಯಿದೆ; ಹೊಳೆಯುತ್ತಿದೆ, ನೀರೋಟ ಚೆನ್ನಾಗಿದೆ; ಅದಕ್ಕೆ ಎಂಟು ಅಂಶ[9]ಗಳು; ಅದನ್ನು ಕಡೆದು ಮೆರುಗುಕೊಟ್ಟಿದೆ; ಅದು ಸ್ವಚ್ಛವು, ದೋಷರಹಿತವು, ಶುಭ್ರವು, ಸರ್ವಾಕಾರ ಸಂಪನ್ನವು. ಅದರಲ್ಲಿ ನೀಲಿ, ಕಿತ್ತಿಳೆ, ಕಂಪು, ಬಿಳುಪು, ಹಳದಿ ಬಣ್ಣಗಳ ದಾರವನ್ನು ಪೋಣಿಸಿದರೆ, ಕಣ್ಣಿರುವ ಪುರುಷನು ಅದನ್ನು ಕೈಗೆ ತೆಗೆದುಕೊಂಡು, 'ಈ ವೈಡೂರ್ಯಮಣಿ ಇಂತಹುದು. ಇದರಲ್ಲಿ ಪೋಣಿಸಿರುವ ದಾರ ಇಂತಹುದು'—ಎಂದು ಕಾಣುವನು. ಅದರಂತೆಯೇ ಮಹಾರಾಜ, ಭಿಕ್ಷುವು ಹೀಗೆ ಚಿತ್ತವು ಸಮಾಹಿತವಾಗಿ, . . . [§ ೮೩]. . . ಎಂದು ಅವನು ಚೆನ್ನಾಗಿ ತಿಳಿಯುವನು.

---

[1] ಚೆಲ್ಲಿಹೋಗದ ಹಾಗೆ ಒಂದೇ ಕಡೆ ನಿಂತು [2] ಕೊಳೆಯಿಲ್ಲದೆ [3] ಲೋಭ, ದೋಷ, ಮೋಹ, ಮಾನ ಮೊದಲಾದ ಹತ್ತು ಕೆಟ್ಟ ಗುಣಗಳು ಹೋಗಿ. [4] ಹೇಗೆಂದರೆ ಹಾಗೆ ತಿರುಗಿಸುವುದಕ್ಕೆ ಅನುಕೂಲವಾಗುವಂತಾಗಿ. [5] ಕಾರ್ಯಕ್ಕೆ ತೊಡಗಲು ಸಿದ್ಧವಾಗಿ. [6] ತೃಷ್ಣೆಯ ಅಭಾವದಿಂದ ಚಲನೆಯಿಲ್ಲದೆ, ಸ್ಥಿರವಾಗಲು. [7] ಈ ದೇಹವು ನಿತ್ಯವಾದುದಲ್ಲ, ಇದು ಸವೆಯುವುದು, ಇದು ನಶಿಸುವುದು, ಇದು ಒಡೆಯುವುದು, ಇದು ಹಾಳಾಗುವುದು, ಇದು ಇದರ ಸ್ವಭಾವ. [8] ಚಕ್ಷು, ಶ್ರೋತ್ರ, ಘ್ರಾಣ, ಜಿಹ್ವಾ, ಕಾಯ, ಮನಸ್ಸು ಎಂಬ ಆರು ಇಂದ್ರಿಯಗಳ ಅನುಭವಗಳು; ಚೇತಸಿಕ ಮಾನಸಿಕವಾದ ಧರ್ಮಗಳು—ಅದು ವಿಜ್ಞಾನ. ರೂಪ, ವೇದನಾ, ಸಂಜ್ಞಾ, ಸಂಸ್ಕಾರ ಎಂಬ ನಾಲ್ಕು ಸ್ಕಂಧಗಳಿಂದ ಜಡದೇಹವಾಗುವುದು, ವಿಜ್ಞಾನವೆಂಬ ಐದನೆಯ ಸ್ಕಂಧ ಕೂಡಿದಾಗ ಆ ದೇಹ ಚೈತನ್ಯಪೂರ್ಣವಾಗುವುದು. ಈ ವಿಜ್ಞಾನವು ದೇಹವನ್ನು ಮನೆಯಂತೆ ಮಾಡಿಕೊಂಡು, ಒಂದು ದೇಹ ಮುರಿಯಲು ಮತ್ತೊಂದನ್ನು ಆಶ್ರಯಿಸುವುದು. ಈ ವಿಜ್ಞಾನದ ಸುತ್ತಲೇ ಹೊಸ ದೇಹ ಮೂಡುವುದು. [9] ಮಣಿಯು ಹೊಳೆಯುವುದಕ್ಕಾಗಿ ಅದರ ಮೈಯಲ್ಲಿ ಕಡೆಯುವ ಸಣ್ಣ ಮುಖಗಳು, facets.

‘‘ಮಹಾರಾಜ! ಹಿಂದೆ ಹೇಳಿದ ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲಕ್ಕಿಂತ ಮೇಲಾದ, ಸಿಹಿಯಾದ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲವಿದು.

೮೫. ‘‘ಹೀಗೆ ಚಿತ್ತವು ಸಮಾಹಿತವಾಗಿ, . . . [§ ೮೪] . . . ಅನೇಜ ಪ್ರಾಪ್ತವಾಗಲು, ಮನೋಮಯ ಕಾಯವನ್ನು ಅಭಿನಿರ್ಮಿಸಲು ಚಿತ್ತವನ್ನು ಒಯ್ಯುವನು, ಬಗ್ಗಿಸುವನು. ಅವನು ರೂಪವಿರುವ, ಮನೋಮಯವಾದ, ಸರ್ವಾಂಗ ಪ್ರತ್ಯಂಗಗಳಿರುವ, ಹೀನೇಂದ್ರಿಯವಲ್ಲದ[1] ಬೇರೆಯ ಕಾಯವನ್ನು ಈ ಕಾಯದಿಂದ ಅಭಿನಿರ್ಮಿಸುವನು.

೮೬. ‘‘ಮಹಾರಾಜ! ಪುರುಷನೊಬ್ಬನು ಮುಂಜ[2]ದಿಂದ ಇಷೀಕ[3]ವನ್ನು ಹೊರಗೆಳೆಯುತ್ತಾನೆ. ಆಗ ಅವನಿಗೆ ‘ಇದು ಮುಂಜ, ಇದು ಇಷೀಕ. ಮುಂಜ ಬೇರೆ, ಇಷೀಕ ಬೇರೆ. ಮುಂಜದಿಂದಲೇ ಇಷೀಕವನ್ನು ಹೊರಗೆಳೆದುದು’—ಎಂದು ಎನಿಸುವುದು. ಪುನಃ ಮಹಾರಾಜ, ಪುರುಷನೊಬ್ಬನು ಒರೆಯಿಂದ ಕತ್ತಿಯನ್ನು ಹೊರಗೆಳೆದರೆ, ಅವನಿಗೆ ‘ಇದು ಒರೆ, ಇದು ಕತ್ತಿ. ಒರೆ ಬೇರೆ, ಕತ್ತಿ ಬೇರೆ. ಒರೆಯಿಂದಲೇ ಕತ್ತಿಯನ್ನು ಹೊರಗೆಳೆದುದು’—ಎಂದೆನಿಸುವುದು. ಪುನಃ ಮಹಾರಾಜ, ಪುರುಷನು ಪರೆಯಿಂದ ಹಾವನ್ನು ಎತ್ತಿದರೆ, ಅವನಿಗೆ ‘ಇದು ಪರೆ, ಇದು ಹಾವು. ಪರೆ ಬೇರೆ, ಹಾವು ಬೇರೆ. ಪರೆಯಿಂದಲೇ ಹಾವನ್ನು ಎತ್ತಿದುದು’—ಎಂದೆನಿಸುವುದು. ಅದರಂತೆಯೇ ಮಹಾರಾಜ, ಭಿಕ್ಷುವು ಹೀಗೆ ಚಿತ್ತವು ಸಮಾಹಿತವಾಗಿ, . . . [§ ೮೫] . . . ಈ ಕಾಯದಿಂದ ಅಭಿನಿರ್ಮಿಸುವನು.

‘‘ಮಹಾರಾಜ! ಹಿಂದೆ ಹೇಳಿದ ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲಕ್ಕಿಂತ ಮೇಲಾದ, ಸಿಹಿಯಾದ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲವಿದು.

೮೭. ‘‘ಹೀಗೆ ಚಿತ್ತವು ಸಮಾಹಿತವಾಗಿ, . . . [§ ೮೪] . . . ಅನೇಜ ಪ್ರಾಪ್ತವಾಗಲು, ಋದ್ಧಿವಿಧ[4]ಗಳಿಗಾಗಿ ಚಿತ್ತವನ್ನು ಒಯ್ಯುವನು, ಬಗ್ಗಿಸುವನು. ಅವನು ಅನೇಕವಿಹಿತವಾದ ಋದ್ಧಿವಿಧಗಳನ್ನು ಪ್ರತ್ಯನುಭವಿಸುವನು. ಒಂದಾಗಿದ್ದು ಬಹುವಾಗುವನು, ಬಹುವಾಗಿದ್ದು ಒಂದಾಗುವನು. ದೃಶ್ಯನಾಗುವನು, ಅದೃಶ್ಯನಾಗುವನು. ಗೋಡೆಯ ಹಿಂದಕ್ಕೆ, ಪ್ರಾಕಾರದ ಹಿಂದಕ್ಕೆ, ಪರ್ವತದ ಹಿಂದಕ್ಕೆ—ಆಕಾಶದಲ್ಲಿ ಹೇಗೋ ಹಾಗೆ—ಅಂಟಿಕೊಳ್ಳದಂತೆ ಹೋಗುವನು. ನೀರಿನಲ್ಲಿ ಹೇಗೋ ಹಾಗೆ ಪೃಥ್ವಿಯಲ್ಲಿ ಮುಳುಗಿ ಮೇಲೇಳುವನು. ಪೃಥ್ವಿಯಲ್ಲಿ ಹೇಗೋ ಹಾಗೆ ನೀರಿನಲ್ಲಿ ಮುರಿಯದಂತೆ[5] ಹೋಗುವನು. ರೆಕ್ಕೆಯಿರುವ ಪಕ್ಕಿ ಹೇಗೋ ಹಾಗೆ

---

[1] ಭಿಕ್ಷುವಿನ ಕಿವಿ ಕೊರೆದಿದ್ದರೆ, ಮನೋಮಯ ಕಾಯದ ಕಿವಿಯೂ ಕೊರೆದಿರುವುದು
[2] ಒಂದು ತೆರದ ಹುಲ್ಲು [3] ಮುಂಜದ ಒಳಗಿನ ಜೊಂಡು ಇಷೀಕ. [4] ತೆರತೆರದ ಅದ್ಭುತಶಕ್ತಿ.
[5] ನೀರಿನ ವಿಸ್ತಾರವನ್ನು ಮುರಿಯದಂತೆ.

ಆಕಾಶದಲ್ಲಿ ಚಕ್ಕಳ ಬಕ್ಕಳ ಹಾಕಿ ಹೋಗುವನು. ಮಹಾ ಋದ್ಧಿಯುಳ್ಳ ಮಹಾನು ಭಾವವುಳ್ಳ ಚಂದ್ರಸೂರ್ಯರನ್ನೂ ಕೈಗಳಿಂದ ಮುಟ್ಟಿ ಸವರುವನು. ಕಾಯದಿಂದ ಬ್ರಹ್ಮಲೋಕ[1]ವಿರುವ ವರೆಗೂ ತಿರುಗುವನು.

೮೮. "ಮಹಾರಾಜ! ದಕ್ಷನಾದ ಕುಂಬಾರನೋ ಅವನ ಶಿಷ್ಯನೋ ಹದ ಗೊಳಿಸಿದ ಮೃತ್ತಿಕೆಯಿಂದ ಯಾವ ಯಾವ ಆಕಾರದ ಪಾತ್ರೆ ಬಯಸಿದರೂ ಆ ಆ ಅದನ್ನೇ ಮಾಡಿ ಎತ್ತಿಕೊಡಬಲ್ಲನು. ಪುನಃ ಮಹಾರಾಜ, ದಕ್ಷನಾದ ದಂತ ಕಾರನೋ ಸುವರ್ಣಕಾರನೋ ಇಲ್ಲ ಅವನ ಶಿಷ್ಯನೋ ಹದಗೊಳಿಸಿದ ದಂತ ದಿಂದಲೋ ಸುವರ್ಣದಿಂದಲೋ ಯಾವ ಯಾವ ದಂತದ ಪಾತ್ರೆ ಸುವರ್ಣಪಾತ್ರೆ ಗಳನ್ನು ಬಯಸಿದರೂ ಆ ಆ ಅದನ್ನೇ ಮಾಡಿ ಎತ್ತಿಕೊಡಬಲ್ಲನು. ಅದರಂತೆಯೇ ಮಹಾರಾಜ, ಭಿಕ್ಷುವು ಹೀಗೆ ಚಿತ್ತವು ಸಮಾಹಿತವಾಗಿ, . . . [§ ೮೭] . . . ಬ್ರಹ್ಮಲೋಕವಿರುವ ವರೆಗೂ ತಿರುಗುವನು.

"ಮಹಾರಾಜ! ಹಿಂದೆ ಹೇಳಿದ ಇಲ್ಲಿಯೇ ಹಿಂದಿನ ಕಂಡುಬರುವ ಶ್ರಾಮಣ್ಯ ಫಲಕ್ಕಿಂತ ಮೇಲಾದ, ಸಿಹಿಯಾದ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲವಿದು.

೮೯. "ಹೀಗೆ ಚಿತ್ತವು ಸಮಾಹಿತವಾಗಿ, . . . [§ ೮೩] . . . ಅನೇಜ ಪ್ರಾಪ್ತವಾಗಲು, ದಿವ್ಯಶ್ರೋತ್ರಧಾತುಗಳಿಗಾಗಿ ಚಿತ್ತವನ್ನು ಒಯ್ಯುವನು, ಬಗ್ಗಿಸು ವನು. ಆ ವಿಶುದ್ಧವಾದ, ಅತಿಕ್ರಾಂತ ಮಾನುಷವಾದ ದಿವ್ಯಶ್ರೋತ್ರಧಾತುವಿನಿಂದ ಅವನು—ದಿವ್ಯವಾದುದನ್ನೂ ಮಾನುಷವಾದುದನ್ನೂ ದೂರದುದನ್ನೂ ಹತ್ತಿರ ದುದನ್ನೂ—ಎರಡೂ ಶಬ್ದಗಳನ್ನು ಕೇಳುವನು.

೯೦. "ಮಹಾರಾಜ! ಹೆದ್ದಾರಿಯಲ್ಲಿ ಹೋಗುವ ಪುರುಷನು ಭೇರೀ ಶಬ್ದ, ಮೃದಂಗ ಶಬ್ದ, ಶಂಖ—ಪ್ರಣವ[2]—ಡಿಂಡಿಮ ಶಬ್ದಗಳನ್ನು ಕೇಳಿದರೆ 'ಇದು ಭೇರೀ ಶಬ್ದ, ಇದು ಮೃದಂಗ ಶಬ್ದ, ಇದು ಶಂಖ—ಪ್ರಣವ—ಡಿಂಡಿಮ ಶಬ್ದ'— ಎಂದು ಅವನಿಗೆನಿಸುವುದು. ಅದರಂತೆಯೇ ಮಹಾರಾಜ, ಭಿಕ್ಷುವು, ಹೀಗೆ ಚಿತ್ತವು ಸಮಾಹಿತವಾಗಿ, . . . [§ ೮೯] . . . ಎರಡೂ ಶಬ್ದಗಳನ್ನು ಕೇಳುವನು.

"ಮಹಾರಾಜ! ಹಿಂದೆ ಹೇಳಿದ ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲ ಕ್ಕಿಂದ ಮೇಲಾದ, ಸಿಹಿಯಾದ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲವಿದು.

೯೧. "ಹೀಗೆ ಚಿತ್ತವು ಸಮಾಹಿತವಾಗಿ, . . . [§ ೮೩] . . . ಅನೇಜ ಪ್ರಾಪ್ತ ವಾಗಲು, ಚೇತೋಪರಿಯಜ್ಞಾನಕ್ಕೆ ಚಿತ್ತವನ್ನು ಒಯ್ಯುವನು, ಬಗ್ಗಿಸುವನು.

---

[1] ಲೋಕಗಳಲ್ಲೆಲ್ಲ ಈ ಲೋಕವೇ ಅತಿ ಮೇಲಿರುವುದು. [2] ಸಣ್ಣ ತಮಟೆ, ಅಥವಾ ತಾಳ.

ಅವನು ಪರಸತ್ತ್ವ[1]ಗಳ, ಪರಪುದ್ಗಲ[1]ಗಳ ಚೇತಸ್ಸುಗಳನ್ನು ತನ್ನ ಚೇತಸ್ಸಿನಿಂದ ಹೊಕ್ಕು ತಿಳಿಯುವನು; ಸರಾಗವಾದ ಚಿತ್ತವನ್ನು ಸರಾಗವಾದ ಚಿತ್ತವೆಂದು, ವೀತರಾಗವಾದುದನ್ನು ವೀತರಾಗವಾದುದೆಂದು, ಸದೋಷವಾದುದನ್ನು ಸದೋಷವಾದುದೆಂದು, ವೀತದೋಷವಾದುದನ್ನು ವೀತದೋಷವಾದುದೆಂದು, ಸಮೋಹವಾದುದನ್ನು ಸಮೋಹವಾದುದೆಂದು, ವೀತಮೋಹವಾದುದನ್ನು ವೀತಮೋಹವಾದುದೆಂದು, ಸಂಕ್ಷಿಪ್ತ[2]ವಾದುದನ್ನು ಸಂಕ್ಷಿಪ್ತವಾದುದೆಂದು, ವಿಕ್ಷಿಪ್ತ[3]ವಾದುದನ್ನು ವಿಕ್ಷಿಪ್ತವಾದುದೆಂದು, ವಿಶಾಲವಾದ ಚಿತ್ತವನ್ನು ವಿಶಾಲವಾದುದೆಂದು, ಸಂಕುಚಿತವಾದ ಚಿತ್ತವನ್ನು ಸಂಕುಚಿತವಾದುದೆಂದು, ಸ-ಉತ್ತರ[4]ವಾದುದನ್ನು ಸ-ಉತ್ತರವಾದುದೆಂದು, ಅನುತ್ತರ[5]ವಾದುದನ್ನು ಅನುತ್ತರವಾದುದೆಂದು, ಸಮಾಹಿತವಾದುದನ್ನು ಸಮಾಹಿತವಾದುದೆಂದು, ಅಸಮಾಹಿತವಾದುದನ್ನು ಅಸಮಾಹಿತವಾದುದೆಂದು, ವಿಮುಕ್ತವಾದ ಚಿತ್ತವನ್ನು ವಿಮುಕ್ತವಾದ ಚಿತ್ತವೆಂದು, ಅವಿಮುಕ್ತವಾದ ಚಿತ್ತವನ್ನು ಅವಿಮುಕ್ತವಾದುದೆಂದು ಚೆನ್ನಾಗಿ ತಿಳಿಯುವನು.

೯೨. "ಮಹಾರಾಜ! ಸ್ತ್ರೀಯಾಗಲಿ ಪುರುಷನಾಗಲಿ, ಹರೆಯದವನಾಗಲಿ ಯುವಕನಾಗಲಿ, ಹೊಳೆಯುವ ಕನ್ನಡಿಯಲ್ಲೋ ಪರಿಶುದ್ಧವೂ ಪರಿಶುಭ್ರವೂ ಸ್ಫುಟವೂ ಆದ ನೀರಿನ ಪಾತ್ರೆಯಲ್ಲೋ ತನ್ನ ಮುಖವನ್ನು ಕುರಿತು ನೋಡಿದರೆ, ಮಚ್ಚೆಯಿದ್ದರೆ ಮಚ್ಚೆಯಿದೆಯೆಂದು ತಿಳಿಯುತ್ತಾನೆ, ಮಚ್ಚೆಯಿಲ್ಲದಿದ್ದರೆ ಮಚ್ಚೆಯಿಲ್ಲವೆಂದು ತಿಳಿಯುತ್ತಾನೆ. ಅದರಂತೆಯೇ ಮಹಾರಾಜ, ಭಿಕ್ಷುವು, ಹೀಗೆ ಚಿತ್ತವು ಸಮಾಹಿತವಾಗಿ, . . . [§ ೯೧]. . . ಅವಿಮುಕ್ತವಾದ ಚಿತ್ತವನ್ನು ಅವಿಮುಕ್ತವಾದುದೆಂದು ಚೆನ್ನಾಗಿ ತಿಳಿಯುವನು.

"ಮಹಾರಾಜ! ಹಿಂದೆ ಹೇಳಿದ ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲಕ್ಕಿಂತ ಮೇಲಾದ, ಸಿಹಿಯಾದ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲವಿದು.

೯೩. "ಹೀಗೆ ಚಿತ್ತವು ಸಮಾಹಿತವಾಗಿ, . . . [§ ೮೩]. . . ಅನೇಜಪ್ರಾಪ್ತವಾಗಲು, ಪೂರ್ವನಿವಾಸಾನುಸ್ಮೃತಿ ಜ್ಞಾನಕ್ಕೆ ಚಿತ್ತವನ್ನು ಒಯ್ಯುವನು, ಬಗ್ಗಿಸುವನು. ಅವನು ಅನೇಕ ಸಂವರ್ತ ಕಲ್ಪ[6]ಗಳಲ್ಲಿ, ಅನೇಕ ವಿವರ್ತ ಕಲ್ಪ[7]ಗಳಲ್ಲಿ, ಅನೇಕ ಸಂವರ್ತ ವಿವರ್ತಕಲ್ಪಗಳಲ್ಲಿ ತನ್ನ ಒಂದು ಜನ್ಮ, ಎರಡು ಜನ್ಮ, ಮೂರು ಜನ್ಮ, ನಾಲ್ಕು ಜನ್ಮ, ಐದು ಜನ್ಮ, ಹತ್ತು ಜನ್ಮ, ಇಪ್ಪತ್ತು ಜನ್ಮ, ಮೂವತ್ತು

---

[1] ವ್ಯಕ್ತಿ. [2] ಒಂದು ಕಡೆ ಕೂಡಿದುದು. [3] ಚೆದರಿ ಹೋದುದು. [4] ಅದಕ್ಕೆ ಮೀರಿದುದು ಉಂಟು. [5] ಅದಕ್ಕೆ ಮೀರಿದುದು ಇಲ್ಲ. [6] ಲೋಕದ ಲಯಕ್ಕೆ ಬೇಕಾಗುವ ಸಮಯ. [7] ಲೋಕದ ಸೃಷ್ಟಿಗೆ ಬೇಕಾದ ಸಮಯ.

ಜನ್ಮ, ನಲುವತ್ತು ಜನ್ಮ, ಐವತ್ತು ಜನ್ಮ, ನೂರು ಜನ್ಮ, ಸಾವಿರ ಜನ್ಮ, ನೂರು ಸಾವಿರ ಜನ್ಮ—ಮೊದಲಾದ ಅನೇಕ ತೆರನಾದ ಪೂರ್ವನಿವಾಸಗಳನ್ನು ಅನುಸ್ಮರಿಸುವನು. 'ಇಂಥ ಕಡೆ ನನಗೆ ಇಂಥ ಹೆಸರಿತ್ತು, ಈ ಗೋತ್ರ ಇತ್ತು, ಇಂಥ ವರ್ಣವಿತ್ತು, ಇಂಥ ಆಹಾರವಿತ್ತು, ಸುಖ ದುಃಖಗಳ ಅನುಭವ ಹೀಗಿತ್ತು, ಆಯುಸ್ಸಿನ ಪರಿಮಿತಿ ಇಷ್ಟಿತ್ತು. ಅಲ್ಲಿ ಮುಗಿದ ಮೇಲೆ ಆ ಕಡೆ ಹುಟ್ಟಿದೆನು. ಅಲ್ಲಿ ನನ್ನ ಹೆಸರು, ಗೋತ್ರ, ವರ್ಣ, ಆಹಾರ, ಸುಖ ದುಃಖಗಳ ಅನುಭವ, ಆಯುಸ್ಸಿನ ಪರಿಮಿತಿ ಹೀಗೆ ಹೀಗೆ ಇತ್ತು. ಅಲ್ಲಿ ಮುಗಿದ ಮೇಲೆ ಅಲ್ಲ ಹುಟ್ಟಿದೆನು'—ಎಂದು ಅವನು ಅನೇಕ ತೆರನಾದ ಪೂರ್ವನಿವಾಸವನ್ನು ಸಾಕಾರವಾಗಿ[1] ಸೋದ್ದೇಶವಾಗಿ[2] ಅನುಸ್ಮರಿಸುವನು.

೯೪. "ಮಹಾರಾಜ! ಪುರುಷನೊಬ್ಬನು ಸ್ವಗ್ರಾಮದಿಂದ ಅನ್ಯಗ್ರಾಮಕ್ಕೆ ಹೋಗುವನು. ಆ ಗ್ರಾಮದಿಂದ ಬೇರೆ ಗ್ರಾಮಕ್ಕೆ ಹೋಗುವನು. ಆ ಗ್ರಾಮದಿಂದ ಸ್ವಗ್ರಾಮಕ್ಕೇ ಹಿಂದಿರುಗುವನು. ಅವನಿಗೆ 'ನಾನು ಸ್ವಗ್ರಾಮದಿಂದ ಆ ಗ್ರಾಮಕ್ಕೆ ಬಂದೆ. ಅಲ್ಲಿ ಹೀಗೆ ನಿಂತೆ, ಹೀಗೆ ಕುಳಿತೆ, ಹೀಗೆ ನುಡಿದೆ, ಹೀಗೆ ಮೌನವಾಗಿದ್ದೆ. ಆ ಗ್ರಾಮದಿಂದ ಆ ಗ್ರಾಮಕ್ಕೆ ಬಂದೆ. ಅಲ್ಲಿಯೂ ಹೀಗೆ ನಿಂತೆ, ಹೀಗೆ ಕುಳಿತೆ, ಹೀಗೆ ನುಡಿದೆ, ಹೀಗೆ ಮೌನವಾಗಿದ್ದೆ. ಈಗ ಆ ಗ್ರಾಮದಿಂದ ಸ್ವಗ್ರಾಮಕ್ಕೇ ಹಿಂದಿರುಗಿ ಬಂದೆ' ಎಂದೆನಿಸುವುದು. ಅದರಂತೆಯೇ ಮಹಾರಾಜ, ಭಿಕ್ಷುವು, ಹೀಗೆ ಚಿತ್ತವು ಸಮಾಹಿತವಾಗಿ, . . . [§ ೯೩] . . . ಪೂರ್ವನಿವಾಸವನ್ನು ಸಾಕಾರವಾಗಿ ಸೋದ್ದೇಶವಾಗಿ ಅನುಸ್ಮರಿಸುವನು.

"ಮಹಾರಾಜ! ಹಿಂದೆ ಹೇಳಿದ ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲಕ್ಕಿಂತ ಮೇಲಾದ, ಸಿಹಿಯಾದ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲವಿದು.

೯೫. "ಹೀಗೆ ಚಿತ್ತವು ಸಮಾಹಿತವಾಗಿ, . . . [§ ೮೩] . . . ಅನೇಜಪ್ರಾಪ್ತವಾಗಲು, ಸತ್ತ್ವಗಳ ಚ್ಯುತೋಪಪಾತ[3] ಜ್ಞಾನಕ್ಕೆ ಚಿತ್ತವನ್ನು ಒಯ್ಯುವನು, ಬಗ್ಗಿಸುವನು. ಅವನು ವಿಶುದ್ಧವಾದ, ಅತಿಕ್ರಾಂತಮಾನುಷವಾದ ದಿವ್ಯಚಕ್ಷುವಿನಿಂದ, ಚ್ಯುತಿಹೊಂದುವ, ಉಪಪನ್ನರಾಗುವ ಸತ್ತ್ವಗಳನ್ನು ಕಾಣುವನು; 'ಪೂಜ್ಯರೆ! ಈ ಸತ್ತ್ವಗಳು ಕಾಯದುಶ್ಚರಿತದಿಂದ ಕೂಡಿದವರು, ವಾಗ್ದುಶ್ಚರಿತದಿಂದ ಕೂಡಿದವರು, ಮನೋದುಶ್ಚರಿತದಿಂದ ಕೂಡಿದವರು, ಆರ್ಯರನ್ನು ಅವಹೇಳನ ಮಾಡುವವರು, ಮಿಥ್ಯಾದೃಷ್ಟಿಕರು,[4] [5]ಮಿಥ್ಯಾದೃಷ್ಟಿಕರ್ಮ ಸಮಾದಾನರು.[5]

---

[1] ಯಾವ ಯಾವ ತೆರನು ಎಂಬುದರೊಡನೆ. [2] ಪ್ರತಿಯೊಂದು ಸೂಕ್ಷ್ಮಾಂಶದೊಡನೆ [3] ಸಾಯುವುದು, ಹುಟ್ಟುವುದು. [4] ತಪ್ಪಾದ ತತ್ತ್ವದೃಷ್ಟಿಯುಳ್ಳವರು. [5] ಮಿಥ್ಯಾದೃಷ್ಟಿಯಿಂದ ಬರುವ ಕರ್ಮಫಲವನ್ನು ಸಂಪಾದಿಸುವವರು.

ಮರಣಾನಂತರ, ಕಾಯುಮುರಿದ ಮೇಲೆ ಅವರು ಅಪಾಯಕರವೂ ದುರ್ಗತಿಯೂ ಆದ ವಿನಿಪಾತ[1]ದಲ್ಲಿ, ನಿರಯ[2]ದಲ್ಲಿ ಹುಟ್ಟುವರು. ಪೂಜ್ಯರೆ! ಈ ಸತ್ತ್ವಗಳಾದರೋ ಕಾಯ ಸುಚರಿತದಿಂದ ಕೂಡಿದವರು, ವಾಕ್‌ಸುಚರಿತದಿಂದ ಕೂಡಿದವರು, ಮನೋಸುಚರಿತ ದಿಂದ ಕೂಡಿದವರು, ಆರ್ಯರನ್ನು ಅವಹೇಳನಮಾಡದವರು, ಸಮ್ಯಗ್ ದೃಷ್ಟಿಕರು, ಸಮ್ಯಗ್ ದೃಷ್ಟಿಕರ್ಮಸಮಾದಾನರು. ಮರಣಾನಂತರ, ಕಾಯುಮುರಿದ ಮೇಲೆ ಅವರು ಸುಗತಿಯಾದ ಸ್ವರ್ಗಲೋಕದಲ್ಲಿ ಹುಟ್ಟುವರು'—ಎಂದು, ಹೀನರನ್ನೂ ಪ್ರಣೀತರನ್ನೂ ಸುವರ್ಣ[3]ರನ್ನೂ ದುರ್ವರ್ಣ[4]ರನ್ನೂ ಸುಗತರನ್ನೂ ದುರ್ಗತರನ್ನೂ ಕರ್ಮಗಳಿಗನುಸಾರ ಹೋಗುವ ಸತ್ತ್ವಗಳನ್ನು ಚೆನ್ನಾಗಿ ತಿಳಿಯುವನು. ಹೀಗೆ ವಿಶುದ್ಧವಾದ, ಅತಿಕ್ರಾಂತಮಾನುಷವಾದ ದಿವ್ಯಚಕ್ಷುವಿನಿಂದ, ಚ್ಯುತಿಹೊಂದುವ, ಉಪಪನ್ನರಾಗುವ ಸತ್ತ್ವಗಳನ್ನು ಕಾಣುವನು; ಕರ್ಮಗಳಿಗನುಸಾರ ಹೋಗುವ ಸತ್ತ್ವಗಳನ್ನು—ಹೀನರನ್ನೂ ಪ್ರಣೀತರನ್ನೂ ಸುವರ್ಣರನ್ನೂ ದುರ್ವರ್ಣರನ್ನೂ ಸುಗತರನ್ನೂ ದುರ್ಗತರನ್ನೂ—ಚೆನ್ನಾಗಿ ತಿಳಿಯುವನು.

೯೬. "ಮಹಾರಾಜ! ಚೌಕದ ನಡುವೆ ಪ್ರಾಸಾದವಿದೆ. ಅಲ್ಲಿ ಕಣ್ಣಿರುವ ಪುರುಷನು ನಿಂತು, ಮನೆಯನ್ನು ಹೊಗುವ ಬಿಡುವ ಮನುಷ್ಯರನ್ನೂ ರಥವೀಥಿಯಲ್ಲಿ ತಿರುಗಾಡುವವರನ್ನೂ ಚೌಕದ ಮಧ್ಯೆ ಕುಳಿತವರನ್ನೂ ಕಾಣುವನು. ಆಗ ಅವನಿಗೆ 'ಈ ಮನುಷ್ಯರು ಮನೆ ಹೊಗುವರು, ಇವರು ಬಿಡುವರು, ಇವರು ರಥವೀಥಿಯಲ್ಲಿ ತಿರುಗಾಡುವರು, ಇವರು ಚೌಕದ ಮಧ್ಯೆ ಕುಳಿತಿರುವರು'—ಎನಿಸುವುದು. ಅದರಂತೆಯೇ ಮಹಾರಾಜ, ಭಿಕ್ಷುವು ಹೀಗೆ ಚಿತ್ತವು ಸಮಾಹಿತವಾಗಿ, . . . [§ ೯೫] . . . ಸುಗತರನ್ನೂ ದುರ್ಗತರನ್ನೂ ಚೆನ್ನಾಗಿ ತಿಳಿಯುವನು.

"ಮಹಾರಾಜ! ಹಿಂದೆ ಹೇಳಿದ ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲ ಕ್ಕಿಂತ ಮೇಲಾದ, ಸಿಹಿಯಾದ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲವಿದು.

೯೭. "ಹೀಗೆ ಚಿತ್ತವು ಸಮಾಹಿತವಾಗಿ, . . . [§ ೮೩] . . . ಅನೇಜ ಪ್ರಾಪ್ತವಾಗಲು, ಆಸ್ರವ[5]ಕ್ಷಯಜ್ಞಾನಕ್ಕೆ ಚಿತ್ತವನ್ನು ಒಯ್ಯುವನು, ಬಗ್ಗಿಸುವನು. ಅವನು 'ಇದು ದುಃಖ' ಎಂದು ಯಥಾಭೂತವನ್ನು ಚೆನ್ನಾಗಿ ತಿಳಿಯುವನು; 'ಇದು ದುಃಖ ಸಮುದಯ. ಇದು ದುಃಖನಿರೋಧ. ಇದು ದುಃಖ-ನಿರೋಧ-ಗಾಮಿನೀ-ಪ್ರತಿಪದ[6]'—ಎಂದು ಯಥಾಭೂತವನ್ನು ಚೆನ್ನಾಗಿ ತಿಳಿಯುವನು. 'ಇವು ಆಸ್ರವ

---

[1] ದುಃಖವನ್ನನುಭವಿಸುವ ಸ್ಥಾನ. [2] ನರಕ; ನಿರಯಗಳು ಅನೇಕವುಂಟು. [3] ಸುಂದರರು. [4] ಕುರೂಪಿಗಳು. [5] ಅರ್ಹತ್ವದವಿಗೆ ಏರಲಾಗದಂತೆ ಚಿತ್ತವನ್ನು ಕದಡಿ ಕೆಡಿಸುವ ಪ್ರವಾಹ. ಮೂರು ತೆರದ ಆಸ್ರವಗಳು ಮುಂದೆ ಹೇಳಿದೆ. [6] ಮಾರ್ಗ.

ಗಳು. ಇದು ಆಸ್ರವ ಸಮುದಯ. ಇದು ಆಸ್ರವ ನಿರೋಧ. ಇದು ಆಸ್ರವ-ನಿರೋಧ-ಗಾಮಿನೀ-ಪ್ರತಿಪದ'—ಎಂದು ಯಥಾಭೂತವನ್ನು ಚೆನ್ನಾಗಿ ತಿಳಿಯುವನು. ಹೀಗೆ ತಿಳಿದವನಿಗೆ, ಹೀಗೆ ಕಂಡವನಿಗೆ—ಕಾಮಾಸ್ರವ[1]ದಿಂದ ಚಿತ್ತವು ವಿಮುಕ್ತವಾಗುವುದು, ಭವಾಸ್ರವ[2]ದಿಂದ ಚಿತ್ತವು ವಿಮುಕ್ತವಾಗುವುದು, ಅವಿದ್ಯಾಸ್ರವ[3]ದಿಂದ ಚಿತ್ತವು ವಿಮುಕ್ತವಾಗುವುದು. 'ವಿಮುಕ್ತನಾದೆನು, ವಿಮುಕ್ತನು!' ಎಂಬ ಜ್ಞಾನವಾಗುವುದು. 'ಜಾತಿ[4] ಕ್ಷಯಿಸಿತು. ಬ್ರಹ್ಮಚರ್ಯ ಪೂರ್ಣವಾಯಿತು. ಮಾಡತಕ್ಕದು ಮಾಡಿಯಾಯಿತು. ಈ ಇದರಿಂದ ಆಚೆ ಇಲ್ಲ'—ಎಂದು ಚೆನ್ನಾಗಿ ತಿಳಿಯುವನು.

೯೮. "ಮಹಾರಾಜ! ಪರ್ವತ ಪಂಕ್ತಿಯ ನಡುವೆ ನೀರಿನ ಕೊಳವಿದೆ, ಸ್ವಚ್ಛವಾಗಿ, ವಿಪ್ರಸನ್ನವಾಗಿ ನಿರ್ಮಲವಾಗಿದೆ. ಅಲ್ಲಿ ಕಣ್ಣಿರುವ ಪುರುಷನು ತೀರದಲ್ಲಿ ನಿಂತು ಶುಕ್ತಿ,[5] ಕಪ್ಪೆಚಿಪ್ಪು, ಮರಳು, ಕಲ್ಲು, ಮೀನುಗುಂಪುಗಳನ್ನೂ ಅವು ಚಲಿಸುವುದನ್ನೂ ಮಲಗಿರುವುದನ್ನೂ ಕಾಣುವನು. ಅವನಿಗೆ 'ಈ ನೀರಿನ ಕೊಳವು ಸ್ವಚ್ಛವಾಗಿ, ವಿಪ್ರಸನ್ನವಾಗಿ ನಿರ್ಮಲವಾಗಿದೆ. ಇಲ್ಲಿ ಈ ಶುಕ್ತಿ, ಕಪ್ಪೆಚಿಪ್ಪು, ಮರಳು, ಕಲ್ಲು, ಮೀನುಗುಂಪುಗಳು ಚಲಿಸುತ್ತಿವೆ, ಮಲಗಿವೆ'—ಎಂದೆನಿಸುವುದು. ಅದರಂತೆಯೇ ಮಹಾರಾಜ, ಭಿಕ್ಷುವು ಹೀಗೆ ಚಿತ್ತವು ಸಮಾಹಿತವಾಗಿ, . . . [§ ೯೭] . . . ಈ ಇದರಿಂದ ಆಚೆ ಇಲ್ಲ' ಎಂದು ಚೆನ್ನಾಗಿ ತಿಳಿಯುವನು.

"ಮಹಾರಾಜ! ಹಿಂದೆ ಹೇಳಿದ ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲಕ್ಕಿಂತ ಮೇಲಾದ, ಸಿಹಿಯಾದ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲವಿದು. ಮಹಾರಾಜ! ಇಲ್ಲಿಯೇ ಕಂಡುಬರುವ ಈ ಶ್ರಾಮಣ್ಯಫಲಕ್ಕಿಂತ ಮೇಲಾದ, ಸಿಹಿಯಾದ, ಇಲ್ಲಿಯೇ ಕಂಡುಬರುವ ಶ್ರಾಮಣ್ಯಫಲ ಬೇರೆ ಇಲ್ಲ."

೯೯. ಹೀಗೆನ್ನಲು, ಮಗಧದ ರಾಜ ಅಜಾತಶತ್ರು ವೈದೇಹಿಪುತ್ರನು ಭಗವಂತನಿಗೆ ಹೀಗೆಂದನು—'ಬಲು ಸೊಗಸು, ಭನ್ತೆ! ಬಲು ಸೊಗಸು, ಭನ್ತೆ! ಬಿದ್ದಿದ್ದುದನ್ನು ಎತ್ತಿ ನಿಲಿಸಿದಂತೆ, ಮುಚ್ಚಿದ್ದುದನ್ನು ಬಿಚ್ಚಿದಂತೆ, ಮೂಢನಿಗೆ ಮಾರ್ಗ ತೋರಿಕೊಟ್ಟಂತೆ, ಕಣ್ಣಿರುವವರು ರೂಪಗಳನ್ನು ಕಾಣಲೆಂದು ಅಂಧಕಾರದಲ್ಲಿ ತೈಲಪ್ರದ್ಯೋತವನ್ನು ಧರಿಸಿದಂತೆ—ಅಂತೆಯೇ ಭಗವಂತನಿಂದ ಅನೇಕ ಪರ್ಯಾಯ[6]

---

[1] ಕಾಮುಗಳಲ್ಲಿ ಲೀನನಾಗುವ ಚಟ. [2] ಭವಿಸುವ ಎಂದರೆ ಮರಳಿ ಜನಿಸಬೇಕೆಂಬ ಚಟ.
[3] ದುಃಖ, ಸಮುದಯ, ನಿರೋಧ, ಮಾರ್ಗ ಎಂಬ ಆರ್ಯಸತ್ಯಗಳ ಜ್ಞಾನವಿಲ್ಲದಿರುವುದು.
[4] ಪುನಃ ಜನಿಸುವಿಕೆ. [5] ಈ ಜಲಚರ (Oyster) ದ ಚಿಪ್ಪಿನ ಒಳಗೇ ಮುತ್ತು ಬೆಳೆಯುವುದು.
[6] ಹೇಳುವ ರೀತಿ.

ಗಳಿಂದ ಧರ್ಮವು ಪ್ರಕಾಶಿತವಾಯಿತು. ಈಗ ನಾನು [1]ಭಗವಂತನನ್ನೂ ಧರ್ಮ ಭಿಕ್ಷುಸಂಘಗಳನ್ನೂ ಶರಣುಹೊಗುವೆನು,[1] ಭನ್ತೆ! ಇಂದಿನಿಂದ ಪ್ರಾಣವಿರುವ ವರೆಗೂ ಶರಣಾಗತನಾದ ಉಪಾಸಕ[2]ನೆಂದು ಭಗವಾನನು ನನ್ನನ್ನು ಸ್ವೀಕರಿಸಲಿ. ಭನ್ತೆ! ಬಾಲನಾಗಿ, ಮೂಢನಾಗಿ, ಅಕುಶಲಿಯಾಗಿ, ಮಾಡಬಾರದುದನ್ನು ಮಾಡಿದ್ದೇನೆ; ನನ್ನ ತಂದೆಯನ್ನು, ಆ ಧಾರ್ಮಿಕನನ್ನು, ಆ ಧರ್ಮರಾಜನನ್ನು ಐಶ್ವರ್ಯ[3]ಕ್ಕಾಗಿ ಕೊಲ್ಲಿಸಿದೆನು. ಭನ್ತೆ! ಮುಂದೆ ನಾನು ಸಂಯಮ ಪಡೆಯುವಂತೆ, ಅಪರಾಧವನ್ನು ಅಪರಾಧವೆನ್ನುವ ನನ್ನನ್ನು ಭಗವಾನನು ಪ್ರತಿಗ್ರಹಿಸಬೇಕು."

೧೦೦. "ಹೌದು, ಮಹಾರಾಜ! ಬಾಲನಾಗಿ, ಮೂಢನಾಗಿ, ಅಕುಶಲಿಯಾಗಿ ಮಾಡಬಾರದುದನ್ನು ಮಾಡಿರುವೆ; ಧಾರ್ಮಿಕನಾದ, ಧರ್ಮರಾಜನಾದ ನಿನ್ನ ತಂದೆಯ ಜೀವ ತೆಗೆದಿರುವೆ. ಮಹಾರಾಜ! ನೀನು ಅಪರಾಧವನ್ನು ಅಪರಾಧವೆಂದು ಕಂಡು, ಧರ್ಮಕ್ಕೆ ಅನುಸಾರವಾಗಿ ಒಪ್ಪಿಕೊಂಡುದರಿಂದ ನಾನು ಅದನ್ನು ಪ್ರತಿಗ್ರಹಿಸುವೆನು. ಅಪರಾಧವನ್ನು ಅಪರಾಧವೆಂದು ಕಂಡು, ಧರ್ಮಕ್ಕೆ ಅನುಸಾರವಾಗಿ ಒಪ್ಪಿಕೊಂಡವನು ಮುಂದೆ ಸಂವರವನ್ನು ಪಡೆಯುವನೆಂಬುದು ಆರ್ಯರ ವಿನಯ[4]ದಲ್ಲಿ ಬೆಳೆದುಬಂದುದು, ಮಹಾರಾಜ!"

೧೦೧. ಹೀಗೆನ್ನಲು, ಮಗಧದ ರಾಜ ಅಜಾತಶತ್ರು ವೈದೇಹಿಪುತ್ರನು ಭಗವಂತನಿಗೆ ಹೀಗೆಂದನು—"ಭನ್ತೆ! ನಾವು ಹೋಗಲಾದೀತು. ಬಹಳ ಕೆಲಸವಿದೆ, ಮಾಡಬೇಕಾದುದು ಬಹಳವಿದೆ."

"ನಿನಗೆ ಹೇಗೆನಿಸುವುದೊ ಹಾಗಾಗಲಿ, ಮಹಾರಾಜ!"

ಆಗ ಮಗಧದ ರಾಜ ಅಜಾತಶತ್ರು ವೈದೇಹಿಪುತ್ರನು ಭಗವಾನನ ನುಡಿಗೆ ಅಭಿನಂದಿಸಿ, ಅನುಮೋದಿಸಿ, ಆಸನದಿಂದೆದ್ದು ಭಗವಂತನಿಗೆ ಅಭಿವಾದಿಸಿ, ಪ್ರದಕ್ಷಿಣೆ ಮಾಡಿ ಹೊರಟನು.

೧೦೨. ಆಗ ಭಗವಾನನು, ಮಗಧದ ರಾಜ ಅಜಾತಶತ್ರು ವೈದೇಹಿಪುತ್ರನು ಹೋದ ಕೊಂಚಕಾಲವಾಗಲು, ಭಿಕ್ಷುಗಳನ್ನು ಕರೆದನು:—"ಭಿಕ್ಷುಗಳೇ! ಈ ರಾಜನು ನೊಂದಿದ್ದಾನೆ. ಭಿಕ್ಷುಗಳೇ! ಈ ರಾಜನು ಉಪಹತನಾಗಿದ್ದಾನೆ. ಭಿಕ್ಷುಗಳೇ! ಈ ರಾಜನು ಧಾರ್ಮಿಕನೂ ಧರ್ಮರಾಜನೂ ಆದ ತಂದೆಯ ಜೀವ ತೆಗೆಯ

---

[1] ಬುದ್ಧ, ಧರ್ಮ, ಸಂಘಗಳಿಗೆ ತ್ರಿಮಣಿ, ರತ್ನತ್ರಯ ಎಂದು ಹೆಸರು. ಈ ಮೂರಕ್ಕೆ ಶರಣಾಗುವುದು ಬೌದ್ಧರ ಸಂಪ್ರದಾಯ. [2] ಭಿಕ್ಷುವಾಗದೆ, ಗೃಹಸ್ಥನಾಗಿದ್ದು ಬೌದ್ಧನಾದವನು [3] ಈಶ್ವರತ್ವ, ಒಡೆತನ [4] ಸಂಘದ ನಡವಳಿಗಾಗಿ ಮಾಡಿದ ನಿಯಮಗಳು

ದಿದ್ದಿದ್ದರೆ, ಈ ಆಸನದಲ್ಲಿಯೇ ಅವನಿಗೆ ಕೊಳೆಯಿಲ್ಲದ ಮಲರಹಿತವಾದ ಧರ್ಮಚಕ್ಷು[1] ಹುಟ್ಟುತ್ತಿತ್ತು.''

ಭಗವಾನನು ಹೀಗೆಂದನು. ಆ ಭಿಕ್ಷುಗಳು ಭಗವಾನನ ಮಾತಿಗೆ ಆತ್ತಮನಸರಾಗಿ ಅಭಿನಂದಿಸಿದರು.

[ಶ್ರಾಮಣ್ಯ ಫಲ ಸೂತ್ರ ಮುಗಿಯಿತು.]

---

[1] 'ಸಮುದಯ ಧರ್ಮ ಸರ್ವವೂ ನಿರೋಧಧರ್ಮವು', ಎಂದರೆ ಹುಟ್ಟಿದುದೆಲ್ಲ ಹಾಳಾಗತಕ್ಕುದು ಎಂಬುದನ್ನು ಕಾಣುವ ಕಣ್ಣು. ಈ ಧರ್ಮಚಕ್ಷು ದೊರೆತರೆ ಅರ್ಹತ್ವದದ ದಾರಿ ಸೇರಿದಂತೆ. §೯೫ರಲ್ಲಿನ ದಿವ್ಯಚಕ್ಷುವಿಗಿಂತ ಈ ಧರ್ಮಚಕ್ಷು ಮೇಲು. ಇದಕ್ಕಿಂತ ಮೇಲಾದುದು—ಅರ್ಹತನಿಗೆ ಮಾತ್ರ ಇರುವ ಪ್ರಜ್ಞಾಚಕ್ಷು.

# ಅಂಬಷ್ಟ[1] ಸೂತ್ರ

[ಈ 'ಅಂಬಟ್ಠಸುತ್ತ'ವು 'ದೀಘನಿಕಾಯ'ದ ಮೂವತ್ತುನಾಲ್ಕು ಸೂತ್ರಗಳಲ್ಲಿ ಮೂರನೆಯದು. ಈ ಸೂತ್ರವು ಜಾತಿವಾದಕ್ಕೆ ಸಂಬಂಧಿಸಿದುದು "ಧರ್ಮಕುತೂಹಲಿಗೆ ಧರ್ಮವನ್ನು ವಿವರಿಸುವಾಗ ಜಾತಿವಾದ, ವರ್ಣವಾದ, ಗೋತ್ರವಾದಗಳು ಗಣನೆಗೆ ಬರಲಾಗದು" ಎಂದ ಭಗವಾನನ ಈ ಮಾತು ಬಹಳ ಮಹತ್ವದ್ದು. ಭಗವಾನನು ನುಡಿದಂತೆ ನಡೆದವನು. ಭಗವಾನನ ಶಿಷ್ಯವೃಂದದಲ್ಲಿ ತಮ್ಮೊಂದು ಆತ್ಮಶಕ್ತಿಯಿಂದ ಗಣನೀಯರಾಗಿರುವವರಲ್ಲಿ ಸಾರಿಪುತ್ರ ಮೌದ್ಗಲ್ಯಾಯನರು ಬ್ರಾಹ್ಮಣರು, ಅಜಾತಶತ್ರು ಪ್ರಸೇನಜಿತರು ಕ್ಷತ್ರಿಯರು, ವಿನಯಾಧಾರನೆನಿಸಿಕೊಂಡು ಪ್ರಥಮ ಸಂಗೀತಿಯಲ್ಲಿ ವಿನಯಪಿಟಕ ಸಂಪಾದನೆಗೆ ಕಾರಣನಾದ ಉಪಾಲಿ ನಾಪಿತ, ಭಗವಾನನ ಮಹಾಕರುಣೆಗೆ ಪಾತ್ರನಾಗಿ ಉದ್ಧೃತನಾದ ಸುನೀತನು ಜಲಗಾರ, ಸಾತಿಯು ಮೀಂಗುಲಿಗ; ಪೂರ್ಣ ಪೂರ್ಣಿಕಾ ಎಂಬವರು ಗುಲಾಮರು, ಸುಮಂಗಲಮಾತೆಯು ಬೆಸ್ತರವನ ಹೆಂಡತಿ; ಭಗವಾನನು ತಾನೇ ಆದರಿಸಿ ಕರೆದ ಚೂಳಪಂಥಕ ಮಹಾಪಂಥಕರು ವೃಷಲರು. ಹೀಗೆ ಕೊಡಬಹುದಾದ ಪಟ್ಟಿಯು ಕೊನೆ ಬಹುದೂರ

'ಮಹಾ ಕಾರುಣಿಕ'ನೆಂದು ಕೀರ್ತಿತನಾದ ಭಗವಂತನ ಈ ಕೃತ್ಯವು ಆಗಿನ ಬ್ರಾಹ್ಮಣರನ್ನು ಬಹು ತಳಮಳಗೊಳಿಸಿತು. ಈ ವಿಚಾರವಾಗಿ ಭಗವಾನನಿಗೂ ಆ ಬ್ರಾಹ್ಮಣರಿಗೂ ನಡೆದಷ್ಟು ತಿಕ್ಕಾಟ ಬೇರೆ ಯಾವ ವಿಚಾರವಾಗಿಯೂ ನಡೆದಂತೆ ಕಾಣುವುದಿಲ್ಲ. ಈ 'ಅಂಬಟ್ಠ ಸುತ್ತ'ದಲ್ಲಿ ಬರುವ ಪ್ರಶ್ನೆ 'ಮಜ್ಝಿಮ'ದ 'ಅಸ್ಸಲಾಯನ', 'ಮಾಧುರಿಯ', 'ಕಣ್ಣಕತ್ಥಲ' ಎಂಬ ಸುತ್ತಗಳಲ್ಲಿ ವಿಶದವಾಗಿ ಚರ್ಚೆಯಾಗುತ್ತದೆ. 'ದೀಘ'ದ 'ಸೋಣದಂಡ ಸುತ್ತ,' 'ಸುತ್ತನಿಪಾತ'ದ 'ವಾಸೆಟ್ಠಸುತ್ತ'ಗಳಲ್ಲಿ ಬ್ರಾಹ್ಮಣನಾರು ಎಂಬ ವಿಚಾರವುಂಟು. 'ದೀಘ'ದ 'ಅಗ್ಗಞ್ಞ ಸುತ್ತ'ದಲ್ಲಿ ಬ್ರಾಹ್ಮಣರು ಬ್ರಹ್ಮನಿಂದ ಜನಿಸಿ ಬಂದರೇ ಎಂಬುದನ್ನು ಭಗವಾನನು ವಿಚಾರಿಸುವನು. ಹೀಗೆ ಪೂರ್ಣವಾಗಿ ವರ್ಣವಾದಕ್ಕೇ ಮೀಸಲಾದ ಈ ಸೂತ್ರಗಳಲ್ಲದೆ ಸಣ್ಣ ಪುಟ್ಟ ವಚನಗಳೂ ಅನೇಕ ಉಂಟು. ಆ ಕಾಲದ ಬಹುಮುಖ್ಯ ಸಾಮಾಜಿಕ ಪ್ರಶ್ನೆಯಾಗಿದ್ದ ವರ್ಣವಾದಕ್ಕೆ ಸಂಬಂಧಿಸಿದ ಅನೇಕ ಸೂತ್ರಗಳಲ್ಲಿ ಈ ಸೂತ್ರವೂ ಮುಖ್ಯವಾದುದು.

ಇದು ಸೂತ್ರ ಸಂಕ್ಷೇಪ.

## ಸೂತ್ರಮುಖ (I § ೧–೯)

ಭಗವಾನನು ಒಂದು ಸಲ ಕೋಸಲದಲ್ಲಿ ತಂಗಿದ್ದಾನೆ. ಪೌಷ್ಕರಸಾದಿಯೆಂಬ ಬ್ರಾಹ್ಮಣನು ಬುದ್ಧನ ಕೀರ್ತಿಯನ್ನು ಕೇಳಿ, ಭಗವದ್ದರ್ಶನ ಕುತೂಹಲಿಯಾಗಿ,

---

1 'ಅಂಬಟ್ಠ.'

ಭಗವಾನನ ಮಹಾಪುರುಷ ಲಕ್ಷಣಗಳನ್ನು ತಿಳಿದುಬರಲು ತನ್ನ ಶಿಷ್ಯನಾದ ಅಂಬಷ್ಟನನ್ನು ಕಳುಹಿಸುವನು. ಅಂಬಷ್ಟನು ಬಂದು ಭಗವಂತನನ್ನು ಕಾಣುವನು.

## ಅಂಬಷ್ಟ ಬುದ್ಧ ಸಂವಾದ (I § ೧೦–೨೮)

ಅಂಬಷ್ಟನು ತಾನು ಬ್ರಾಹ್ಮಣನೆಂದು ಹೆಮ್ಮೆಗೊಂಡು ಶಾಕ್ಯರು ಹೀನರೆಂದು ಸಾರಿ ಸಾರಿ ಹೀಯಾಳಿಸುವನು (೧೦-೧೫). ಭಗವಾನನು ಅವನ ಮೌಢ್ಯವನ್ನು ಹರಿಸಬೇಕೆಂದು ಅವನ ಗೋತ್ರವನ್ನು ಕೇಳಿ, ಅಂಬಷ್ಟನು ಶಾಕ್ಯರ ದಾಸೀಪುತ್ರನೆಂದು ತಿಳಿಸುವನು. ಇಕ್ಷ್ವಾಕು ರಾಜನಿಂದ ಶಾಕ್ಯರು ಹುಟ್ಟಿದುದು, ಇಕ್ಷ್ವಾಕುವಿನ ದಾಸಿಗೆ ಅಂಬಷ್ಟನ ವಂಶದ ಮೂಲಪುರುಷನು ಹುಟ್ಟಿದುದು, ಆ ಮೂಲಪುರುಷನು ದಾಸೀಪುತ್ರನಾದರೂ ಮಹರ್ಷಿಯಾದುದು—ಇವುಗಳನ್ನು ವಿವರಿಸುವನು ಅಂಬಷ್ಟನು ಕೂಡ ಭಗವಾನನ ಮಾತಿನ ಸತ್ಯವನ್ನು ಒಪ್ಪಿಕೊಳ್ಳುವನು (೧೬-೨೩). ಅನಂತರ ಭಗವಾನನು ಕೆಲವು ಪರ್ಯಾಯಗಳಿಂದ ಬ್ರಾಹ್ಮಣರಿಗಿಂತ ಕ್ಷತ್ರಿಯರೇ ಶ್ರೇಷ್ಠರೆಂದು ತೋರಿಸಿ (೨೪-೨೭), ಜಾತಿ ಗೋತ್ರಗಳನ್ನು ನಂಬುವವರಿಗಿಂತ ವಿದ್ಯಾಚರಣಸಂಪನ್ನರೇ ಶ್ರೇಷ್ಠರೆನ್ನುವನು (೨೮)

## ತಥಾಗತ ವ್ಯಾಕರಣ (II § ೧–೧೦)

ವಿದ್ಯಾಚರಣಸಂಪದವೆಂದು ಕೇಳಿದ ಅಂಬಷ್ಟನಿಗೆ ಆ ವಿದ್ಯೆ ಚರಣಗಳನ್ನು ವಿವರವಾಗಿ ತಿಳಿಯುವ ಆಸೆಯಾಗುವುದು (೧) ಭಗವಾನನು ವಿವರಿಸುವನು, (೨) ಬುದ್ಧನ ಉದಯ—(ಶ್ರಾ. ಫ ಸೂ. § ೪೦), ಶ್ರೋತೃವಿನ ಪ್ರವ್ರಜ್ಯ—(ಶ್ರಾ. ಫ ಸೂ § ೪೧); **ಚರಣ**—ಎಂಟು ತೆರ: ಶೀಲಸಂಪಾದನೆ, ಭಯರಾಹಿತ್ಯ, ಇಂದ್ರಿಯ ದ್ವಾರಗೋಪನ, ಸ್ಮೃತಿ ಸಂಪ್ರಜಾನ್ಯ, ಸಂತುಷ್ಟಿ, ವಿವೇಕ, ಪಂಚನೀವರಣ ಅತಿಕ್ರಮ ಮತ್ತು ಧ್ಯಾನ ಚತುಷ್ಟಯ (ಶ್ರಾ. ಫ. ಸೂ § ೪೩-೮೨), **ವಿದ್ಯೆ**—ಎಂಟು ತೆರ: ಜ್ಞಾನದರ್ಶನ, ಮನೋಮಯ ಕಾಯನಿರ್ಮಾಣ, ಋದ್ಧಿ ವಿಧ, ದಿವ್ಯಶ್ರೋತ್ರ, ಚೇತೋಪರಿಯ ಜ್ಞಾನ, ಪೂರ್ವನಿವಾಸಾನುಸ್ಮೃತಿ ಜ್ಞಾನ, ಸತ್ತ್ವಗಳ ಚ್ಯುತೋಪಪಾತ ಜ್ಞಾನ ಮತ್ತು ಆಸ್ರವಕ್ಷಯ ಜ್ಞಾನ (ಶ್ರಾ. ಫ. ಸೂ. § ೮೩-೯೮).

ಅನಂತರ ಭಗವಾನನು ಈ ವಿದ್ಯಾಚರಣಸಂಪದಕ್ಕೆ ಬರುವ ನಾಲ್ಕು ಅಪಾಯ ಮುಖಗಳನ್ನು ತಿಳಿಸಿ (೩), ವಿದ್ಯಾಚರಣಸಂಪದವನ್ನಲ್ಲದಿದ್ದರೂ ಆ ನಾಲ್ಕು ಅಪಾಯ ಮುಖಗಳನ್ನೂ ಅಂಬಷ್ಟನು ಆಚಾರ್ಯಸಹಿತನಾಗಿ ಸಾಧಿಸಿಲ್ಲವೆಂದು ತೋರಿಸಿ (೪), ಅನೇಕ ಪರ್ಯಾಯಗಳಿಂದ ಅವರಿಬ್ಬರ ನಿಹೀನತೆ (deficiency)ಯನ್ನು ಕಾಣಿಸುತ್ತಾನೆ (೫-೧೦).

## ಪೌಷ್ಕರಸಾದಿ ಶರಣಾಗತಿ (II § ೧೧–೨೨)

ಭಗವಾನನ ಮಾತಿನಲ್ಲಿ ಅಂಬಷ್ಟನು ಸತ್ಯ ಕಂಡು, ಆತನ ಮೂವತ್ತೆರಡು ಮಹಾಪುರುಷ ಲಕ್ಷಣಗಳನ್ನು ಗಮನಿಸಿ ಹಿಂದಿರುಗುವನು (೧೧-೧೨). ಹಿಂದಿರುಗಿ ಬಂದು ನಡೆದುದನ್ನೆಲ್ಲ ಗುರುವಿಗೆ ನಿವೇದಿಸಲು (೧೩-೧೪), ಪೌಷ್ಕರಸಾದಿಯು ಅಂಬಷ್ಟನ

ನಡತೆಯನ್ನು ಮೆಚ್ಚದೆ (೧೫), ಭಗವದ್ದರ್ಶನಕ್ಕೆ ತಾನೇ ಹೋಗಿ (೧೬), ಅಂಬಷ್ಠನ ನಡತೆಗಾಗಿ ಬುದ್ಧನ ಕ್ಷಮೆ ಬೇಡುವನು (೧೭). ಭಗವಾನನು ತನಗೊಲಿದ ಪೌಷ್ಕರಸಾದಿಯ ಭಿಕ್ಷವನ್ನು ಒಪ್ಪಿ (೧೮-೧೯), ಭೋಜನಾನಂತರ (೨೦), ಬ್ರಾಹ್ಮಣ ಪೌಷ್ಕರಸಾದಿಗೆ ಧರ್ಮವನ್ನು ಪ್ರಕಾಶಗೊಳಿಸುವನು. ಪೌಷ್ಕರಸಾದಿಗೆ ಧರ್ಮಚಕ್ಷು ಪ್ರಾಪ್ತಿಯಾಗುವುದು (೨೧) ಅವನು ಬುದ್ಧ ಧರ್ಮ ಸಂಘಗಳಿಗೆ ಶರಣಾಗುವನು. (೨೨). ಸೂತ್ರ ಮುಗಿಯುವುದು ]

I. ೧. ನಾನು ಹೀಗೆ ಕೇಳಿರುವೆನು. ಒಂದು ಸಲ ಭಗವಾನನು ಕೋಸಲದಲ್ಲಿ ಭಿಕ್ಷಾಚರಣಮಾಡುತ್ತ, ಮಹಾ ಭಿಕ್ಷುಸಂಘದೊಡನೆ, ಸುಮಾರು ಐನೂರು ಭಿಕ್ಷುಗಳೊಡನೆ, ಇಚ್ಛಾನಂಕಲವೆಂಬ ಕೋಸಲದ ಬ್ರಾಹ್ಮಣಗ್ರಾಮಕ್ಕೆ ಬಂದನು. ಭಗವಾನನು ಅಲ್ಲಿ, ಇಚ್ಛಾನಂಕಲದಲ್ಲಿ, ಇಚ್ಛಾನಂಕಲ ವನಷಂಡದಲ್ಲಿ ತಂಗಿದ್ದನು. ಆ ಸಮಯದಲ್ಲಿ ಬ್ರಾಹ್ಮಣ ಪೌಷ್ಕರಸಾದಿ[1]ಯು ಉತ್ಕೃಷ್ಟ[2]ದಲ್ಲಿ ವಾಸಿಸುತ್ತಿದ್ದನು. (ಅದು) ಜೀವಿಗಳಿಂದ ತುಂಬ ತುಳುಕಿ, ಹುಲ್ಲು ಕಡ್ಡಿ ಕಾಳು ನೀರಿನಿಂದ ಕೂಡಿ, ರಾಜನು ಭೋಗಿಸಲು ತಕ್ಕುದು. (ಅದು) ಕೋಸಲದ ರಾಜ ಪ್ರಸೇನಜಿತನು ದಾನಮಾಡಿದ ರಾಜಯೋಗ್ಯವಾದ ದಾನ, ಶ್ರೇಷ್ಠವಾದ ದಾನ.

೨. ಆಗ ಬ್ರಾಹ್ಮಣ ಪೌಷ್ಕರಸಾದಿಯು ಕೇಳಿದನು—"ಭೋ! ಶಾಕ್ಯಪುತ್ರನೂ ಶಾಕ್ಯಕುಲದಿಂದ ಪ್ರವ್ರಜಿತನೂ ಆದ ಶ್ರಮಣ ಗೌತಮನು ಕೋಸಲದಲ್ಲಿ ಭಿಕ್ಷಾಚರಣಮಾಡುತ್ತ, ಮಹಾ ಭಿಕ್ಷುಸಂಘದೊಡನೆ, ಸುಮಾರು ಐನೂರು ಭಿಕ್ಷುಗಳೊಡನೆ ಇಚ್ಛಾನಂಕಲವನ್ನು ಸಾರಿ, ಇಚ್ಛಾನಂಕಲದಲ್ಲಿ, ಇಚ್ಛಾನಂಕಲ ವನಷಂಡದಲ್ಲಿ ತಂಗಿರುವನಂತೆ! ಆ ಪೂಜ್ಯಗೌತಮನನ್ನು ಕುರಿತು ಹರಡಿರುವ ಕಲ್ಯಾಣ ಕೀರ್ತಿಶಬ್ದವಿದು—[3]'ಆ ಭಗವಾನನು ಅರ್ಹನು, ಸಮ್ಯಕ್ಸಂಬುದ್ಧನು, ವಿದ್ಯಾಚರಣಸಂಪನ್ನನು, ಸುಗತನು, ಲೋಕವಿದನು, ಅನುತ್ತರನಾದ ಪುರುಷದಮ್ಯ ಸಾರಥಿಯು, ದೇವ ಮನುಷ್ಯರಿಗೆ ಶಾಸ್ತೃವು, ಬುದ್ಧನು, ಭಗವಾನನು.' ಅವನು ಈ ಲೋಕವನ್ನು—ದೇವ ಮಾರ ಬ್ರಹ್ಮ ಸಹಿತವಾಗಿ, ಶ್ರಮಣ ಬ್ರಾಹ್ಮಣ ಪ್ರಜೆಯೊಡನೆ, ದೇವಮನುಷ್ಯ ಸಹಿತವಾಗಿ—ಸ್ವಂತ ಅಭಿಜ್ಞೆಯಿಂದ ಕಂಡುಕೊಂಡು ತಿಳಿಯಪಡಿಸುತ್ತಾನೆ. ಆದಿಮಧ್ಯಾಂತ ಕಲ್ಯಾಣವಾದ ಧರ್ಮವನ್ನು ಸಾರ್ಥವಾಗಿ, ಸವ್ಯಂಜನವಾಗಿ ಸಾರುವನು. ಕೇವಲ ಪರಿಪೂರ್ಣವೂ ಪರಿಶುದ್ಧವೂ ಆದ ಬ್ರಹ್ಮಚರ್ಯವನ್ನು ಪ್ರಕಾಶಗೊಳಿಸುವನು. ಅಂತಹ ಅರ್ಹತರ ದರ್ಶನದಿಂದ ಮೇಲಾಗುವುದು[3]."

---

[1] 'ಪೋಕ್ಖರಸಾದಿ.' [2] 'ಉಕ್ಕಟ್ಠಮ್' [3] ಶ್ರಾಮಣ್ಯ ಫಲ ಸೂತ್ರದ § ೮ ಮತ್ತು § ೪೦ರ ಟಿಪ್ಪಣಿ ನೋಡಿ.

೩. ಆ ಸಮಯದಲ್ಲಿ ಮಾಣವ (= ತರುಣ ಬ್ರಾಹ್ಮಣ) ಅಂಬಷ್ಟನು ಬ್ರಾಹ್ಮಣ ಪೌಷ್ಕರಸಾದಿಯ ಅಂತೇವಾಸಿ[1]ಯಾಗಿದ್ದನು. ಅವನು ವೇದಗಳನ್ನು ಕಲಿತವನು (ಅಧ್ಯಾಯಕ), ಮಂತ್ರ ತಿಳಿದವನು (ಮಂತ್ರಧರ) ; ನಿಘಂಟು, 'ಕೇಟುಭ'[2], ಅಕ್ಷರ ಪ್ರಭೇದಗಳು[3] ಮತ್ತು ಐದನೆಯದಾಗಿ ಇತಿಹಾಸದೊಡನೆ ಮೂರು ವೇದ[4]ಗಳಲ್ಲಿ ಪಾರಗತನು ; ವೇದಗಳ ಪದಪಾಠವನ್ನು ಬಲ್ಲವನು (ಪದಕನು), ವೈಯಾಕರಣನು, ಲೋಕಾಯತ ಮಹಾಪುರುಷ ಲಕ್ಷಣ[5]ಗಳಲ್ಲಿ ಪಂಡಿತನು[6]; "ನಾನು ತಿಳಿದಿರುವುದನ್ನು ನೀನು ತಿಳಿದಿರುವೆ", "ನೀನು ತಿಳಿದಿರುವುದನ್ನು ನಾನು ತಿಳಿದಿರುವೆನು" ಎಂದು ಸ್ವಂತ ಆಚಾರ್ಯನಿಗೆ ಹೇಳುವಷ್ಟು ತ್ರೈವಿದ್ಯಪ್ರವಚನದಲ್ಲಿ ಅನುಜ್ಞಾತ ಪ್ರತಿಜ್ಞಾತ[7]ನಾದವನು.

೪. ಆಗ ಬ್ರಾಹ್ಮಣ ಪೌಷ್ಕರಸಾದಿಯು ಮಾಣವ ಅಂಬಷ್ಟನನ್ನು ಕರೆದನು. "ಪ್ರಿಯ ಅಂಬಷ್ಟ, ಶಾಕ್ಯಪುತ್ರನೂ ಶಾಕ್ಯಕುಲದಿಂದ ಪ್ರವ್ರಜಿತನೂ . . . [§ ೨] . . . ದರ್ಶನದಿಂದ ಮೇಲಾಗುವುದು. ಬಾ, ಪ್ರಿಯ ಅಂಬಷ್ಟ, ಶ್ರಮಣ ಗೌತಮನಿರುವಲ್ಲಿಗೆ ಹೋಗು. ಹೋಗಿ, ಆ ಪೂಜ್ಯಗೌತಮನು ಹರಡಿರುವ (ಕಲ್ಯಾಣ ಕೀರ್ತಿ) ಶಬ್ದಕ್ಕೆ ಸಮನಾಗಿರುವನೆ ಇಲ್ಲವೆ, ಆ ಪೂಜ್ಯಗೌತಮನು ಹಾಗಿರುವನೆ ಇಲ್ಲವೆ ತಿಳಿದುಕೊ. ಅದರಂತೆ ಆ ಪೂಜ್ಯಗೌತಮನನ್ನು ಕುರಿತು ನನಗೆ ತಿಳಿಸು."

೫. "ಭೋ! ಆ ಪೂಜ್ಯಗೌತಮನು ಹಾಗಿರುವನೆಂದು, ಆ ಪೂಜ್ಯಗೌತಮನು ಹರಡಿರುವ ಶಬ್ದಕ್ಕೆ ಸಮನಾಗಿರುವನೋ ಇಲ್ಲವೋ ಎಂದು, ಆ ಪೂಜ್ಯಗೌತಮನು ಹಾಗಿರುವನೋ ಇಲ್ಲವೋ ಎಂದು ನಾನು ತಿಳಿಯುವುದು ಹೇಗೆ?"

"ಪ್ರಿಯ ಅಂಬಷ್ಟ, ನಮ್ಮ ಮಂತ್ರಗಳಲ್ಲಿ ಮೂವತ್ತೆರಡು ಮಹಾಪುರುಷ ಲಕ್ಷಣಗಳು ನಡೆದು ಬಂದಿವೆ. ಅವು ಕೂಡಿಬಂದ ಮಹಾಪುರುಷನಿಗೆ ಎರಡು ಗತಿಯಲ್ಲದೆ ಬೇರೆಯದಾಗದು. ಮನೆಯಲ್ಲಿ ವಾಸಿಸಿದರೆ ರಾಜನಾಗುವನು, ಚಕ್ರವರ್ತಿಯಾಗುವನು, ಧಾರ್ಮಿಕನಾಗುವನು, ಧರ್ಮರಾಜನಾಗುವನು ; ನಾಲ್ಕು ದಿಕ್ಕುಗಳನ್ನೂ ಜಯಿಸುವನು, ಜನಪದವನ್ನು ಸ್ಥಿಮಿತಕ್ಕೆ ತರುವನು ; ಸಪ್ತರತ್ನಸಮನ್ವಿತನಾಗುವನು ; ಅವನಿಗೆ ಈ ಏಳು ರತ್ನಗಳು ಉಂಟಾಗುವುವು—ಎಂದರೆ ಚಕ್ರರತ್ನ,

---

[1] ಗುರುವಿನೊಡನೆ ವಾಸಮಾಡುವ ಶಿಷ್ಯ. [2] ಮಾಡತಕ್ಕ ಕರ್ಮಗಳ ನಿಯಮವನ್ನು ತಿಳಿಸುವ ಶಾಸ್ತ್ರಭಾಗ. ವೇದಾಂಗಗಳಲ್ಲಿ ಒಂದಾದ 'ಕಲ್ಪ'ವೇ ಈ 'ಕೇಟುಭ'ವೆನ್ನುವರು. [3] ಶಿಕ್ಷಾ ಮತ್ತು ನಿರುಕ್ತಿ [4] ಪಾಲೀ ಪಿಟಕವು ಅಥರ್ವಣ ವೇದವನ್ನು ಒಪ್ಪುವುದಿಲ್ಲ. [5] ಮಹಾ ಪುರುಷನಿಗೆ ಇರಬೇಕೆನ್ನುವ ಮೂವತ್ತೆರಡು ಲಕ್ಷಣಗಳು 'ದೀಘನಿಕಾಯ'ದ 'ಲಕ್ಖಣ ಸುತ್ತ'ದಲ್ಲಿ ವಿಶದವಾಗಿ ವರ್ಣಿತವಾಗಿವೆ. [6] 'ಅನವಯೋ'=ಅನೂನ ಪರಿಪೂರ್ಣಕಾರಿ. [7] ಪ್ರವೀಣನೆಂದೂ ಅಧಿಕಾರವಾಣಿಯೆಂದೂ ಇತರರಿಂದ ಒಪ್ಪಲ್ಪಟ್ಟವನು.

ಹಸ್ತಿ ರತ್ನ, ಅಶ್ವ ರತ್ನ, ಮಣಿ ರತ್ನ, ಸ್ತ್ರೀ ರತ್ನ, ಗೃಹಪತಿ ರತ್ನ, ಪರಿನಾಯಕ ರತ್ನ ಎಂಬ ಏಳು ; ಅವನಿಗೆ ವೀರರೂ ವೀರಾಂಗರೂಪರೂ[1] ಪರಸೇನಾಪ್ರಮರ್ದನರೂ ಆದ ಸಹಸ್ರಕ್ಕೆ ಮೇಲ್ಪಟ್ಟ ಪುತ್ರರಾಗುವರು. ಅವನು ದಂಡವಿಲ್ಲದೆ, ಶಸ್ತ್ರವಿಲ್ಲದೆ, ಧರ್ಮದಿಂದ ಸಾಗರಪರಿಯಂತವಾದ ಈ ಪೃಥ್ವಿಯನ್ನು ಪೂರ್ಣವಾಗಿ ಗೆದ್ದು ವಾಸಿಸುವನು. ಹಾಗಲ್ಲದೆ ಅವನು ಗಾರ್ಹಸ್ಥ್ಯದಿಂದ ಸಂನ್ಯಾಸಕ್ಕೆ ಪರಿವ್ರಜಿಸಿದರೆ ಅರ್ಹನಾಗುವನು, ಲೋಕದ ಮುಸುಕ[2]ನ್ನು ತೆಗೆಯುವ ಸಮ್ಯಕ್ಸಂಬುದ್ಧನಾಗುವನು. ಪ್ರಿಯ ಅಂಬಷ್ಟ, ನಾನು ಮಂತ್ರಗಳನ್ನು ಕೊಡುವವನು, ನೀನು ಮಂತ್ರಗಳನ್ನು ಪ್ರತಿಗ್ರಹಿಸುವವನು.''

೬. “ಹಾಗೆಯೇ ಆಗಲಿ, ಭೋ!” ಎಂದು ಮಾಣವ ಅಂಬಷ್ಟನು ಬ್ರಾಹ್ಮಣ ಪೌಷ್ಕರಸಾದಿಗೆ ಉತ್ತರಕೊಟ್ಟು, ಆಸನದಿಂದ ಎದ್ದು, ಬ್ರಾಹ್ಮಣ ಪೌಷ್ಕರಸಾದಿಗೆ ಅಭಿವಾದಿಸಿ, ಪ್ರದಕ್ಷಿಣೆಗೆಯ್ದು, ಹೆಣ್ಣುಕುದುರೆ ಕಟ್ಟಿದ ರಥವನ್ನು ಏರಿ, ಅನೇಕ ಮಾಣವಕರೊಡನೆ ಇಚ್ಛಾನಂಕಲ ವನಷಂಡವಿರುವೆಡೆಗೆ ತೆರಳಿದನು. ಯಾನಕ್ಕೆ ಭೂಮಿಯಿರುವ ವರೆಗೆ ಯಾನದಲ್ಲಿ ಹೋಗಿ, ಯಾನದಿಂದ ಇಳಿದು, ಪಾದಚಾರಿಯಾಗಿ ಆರಾಮ[3]ವನ್ನು ಪ್ರವೇಶಿಸಿದನು.

೭. ಆ ಸಮಯದಲ್ಲಿ ಅನೇಕ ಭಿಕ್ಷುಗಳು ಹೊರಗಿನ ಬಯಲಿನಲ್ಲಿ ಅಲ್ಲಿಂದಿಲ್ಲಿಗೆ ತಿರುಗಾಡುತ್ತಿದ್ದರು. ಆಗ ಮಾಣವ ಅಂಬಷ್ಟನು ಆ ಭಿಕ್ಷುಗಳಿದ್ದಲ್ಲಿಗೆ ಹೋಗಿ, ಆ ಭಿಕ್ಷುಗಳಿಗೆ ಹೀಗೆಂದನು—“ಭೋ! ಆ ಪೂಜ್ಯಗೌತಮನು ಈಗ ಎಲ್ಲಿ ವಿಹರಿಸುತ್ತಿರುವನು? ಆ ಪೂಜ್ಯಗೌತಮನನ್ನು ದರ್ಶಿಸಬೇಕೆಂದು ನಾವಿಲ್ಲಿ ಬಂದಿರುವೆವು.”

೮. ಆಗ ಆ ಭಿಕ್ಷುಗಳಿಗೆ ಹೀಗೆನ್ನಿಸಿತು—“ಈ ಮಾಣವ ಅಂಬಷ್ಟನು ಅಭಿಜ್ಞಾತ ಕುಲಜನು ; ಅಲ್ಲದೆ ಅಭಿಜ್ಞಾತನಾದ ಬ್ರಾಹ್ಮಣ ಪೌಷ್ಕರಸಾದಿಯ ಅಂತೇವಾಸಿ. ಇಂತಹ ಕುಲಪುತ್ರನೊಡನೆ ಭಗವಂತನಿಗೆ ಕಥಾಸಲ್ಲಾಪ[4] ಕಷ್ಟವಾಗದು.” ಅವರು ಮಾಣವ ಅಂಬಷ್ಟನಿಗೆ ಹೀಗೆಂದರು—“ಅದೋ! ಅಂಬಷ್ಟ, ಮುಚ್ಚಿದ ಬಾಗಿಲ ವಿಹಾರ. ಅಲ್ಪಶಬ್ದದಿಂದ ಅಲ್ಲಿ ಹೋಗಿ, ನಿಧಾನವಾಗಿ ಹೊರಸಾಲೆಯನ್ನು ಪ್ರವೇಶಿಸಿ, ಕೆಮ್ಮಿ, ಅಗುಳಿ ತಟ್ಟು. ಭಗವಾನನು ನಿನಗೆ ಬಾಗಿಲು ತೆರೆಯುವನು.''

೯. ಆಗ ಮಾಣವ ಅಂಬಷ್ಟನು ಮುಚ್ಚಿದ ಬಾಗಿಲ ವಿಹಾರದ ಬಳಿಗೆ ಅಲ್ಪಶಬ್ದದಿಂದ ಸಾರಿ, ನಿಧಾನವಾಗಿ ಹೊರಸಾಲೆಯನ್ನು ಪ್ರವೇಶಿಸಿ, ಕೆಮ್ಮಿ, ಅಗುಳಿ

---

[1] ದೇವಪುತ್ರ ಸದೃಶಕಾಯರು. [2] ರಾಗ, ದೋಷ, ಮೋಹವೆಂಬ ಮುಸುಕುಗಳು. [3] ಬುದ್ಧನಿಗಾಗಲಿ, ಸಂಘಕ್ಕಾಗಲಿ ದಾನಮಾಡಿದ ವನಪ್ರದೇಶ. ಅಲ್ಲಿ ಭಿಕ್ಷುಗಳು ಧ್ಯಾನ, ಧರ್ಮಕಥೆಗಳನ್ನು ನಡೆಸುವರು. [4] ಕಥನ ಪ್ರತಿಕಥನ.

ತಟ್ಟಿದನು. ಭಗವಾನನು ಬಾಗಿಲು ತೆರೆದನು. ಮಾಣವ ಅಂಬಷ್ಟನು ಪ್ರವೇಶಿಸಿದನು. ಮಾಣವಕರೂ ಪ್ರವೇಶಿಸಿ, ಭಗವಂತನೊಡನೆ ಸಮ್ಮೋದಗೊಂಡು ನುಡಿದು, ಕೇಳತಕ್ಕ ಕುಶಲ ಪ್ರಶ್ನೆಗಳನ್ನು ಕೇಳಿ, ಒಂದು ಕಡೆ ಕುಳಿತರು. ಆದರೆ ಮಾಣವ ಅಂಬಷ್ಟನು ಅಲ್ಲಿಂದಿಲ್ಲಿ ಸುತ್ತುತ್ತಲೇ, ಕುಳಿತ ಭಗವಂತನೊಡನೆ ಅದು ಇದು ಮಾತನಾಡಿ, ಕುಳಿತ ಭಗವಂತನೊಡನೆ ನಿಂತುಕೊಂಡೇ ಅದು ಇದು ಕುಶಲಪ್ರಶ್ನೆ ಯಾಡಿದನು.

೧೦. ಆಗ ಭಗವಾನನು ಮಾಣವ ಅಂಬಷ್ಟನಿಗೆ ಹೀಗೆಂದನು—"ಅಂಬಷ್ಟ, ವೃದ್ಧಬ್ರಾಹ್ಮಣರೊಡನೆಯೂ ಮಹಾ ಆರ್ಯಕರಾದ[1] ನಿನ್ನ ಆಚಾರ್ಯ ಪ್ರಾಚಾರ್ಯ[2]ರೊಡನೆಯೂ ನೀನು ಕಥಾಸಲ್ಲಾಪ ನಡೆಸುವುದು ಹೀಗೆಯೇನು— ನಾನು ಕುಳಿತಿರಲು ನೀನು ಚರಿಸುತ್ತ ನಿಲ್ಲುತ್ತ ಅದು ಇದು ಆಡುವ ರೀತಿಯಲ್ಲಿ?"

"ಖಂಡಿತ ಇಲ್ಲ, ಭೋ ಗೌತಮ! ನಡೆಯುತ್ತಿರುವ ಬ್ರಾಹ್ಮಣನು ಬ್ರಾಹ್ಮಣನು ನಡೆಯುತ್ತಿರುವಾಗ ಮಾತ್ರ ಅವನೊಡನೆ ಸಲ್ಲಪಿಸುವುದು ತಕ್ಕುದು. ನಿಂತಿರುವ ಬ್ರಾಹ್ಮಣನು ಬ್ರಾಹ್ಮಣನು ನಿಂತಿರುವಾಗ ಮಾತ್ರ ಅವನೊಡನೆ ಸಲ್ಲಪಿಸುವುದು ತಕ್ಕುದು. ಕುಳಿತಿರುವ ಬ್ರಾಹ್ಮಣನು ಬ್ರಾಹ್ಮಣನು ಕುಳಿತಿರುವಾಗ ಮಾತ್ರ ಅವನೊಡನೆ ಸಲ್ಲಪಿಸುವುದು ತಕ್ಕುದು. ಮಲಗಿರುವ ಬ್ರಾಹ್ಮಣನು ಬ್ರಾಹ್ಮಣನು ಮಲಗಿರುವಾಗ ಮಾತ್ರ ಅವನೊಡನೆ ಸಲ್ಲಪಿಸುವುದು ತಕ್ಕುದು. ಆದರೆ, ಭೋ ಗೌತಮ, ಮುಂಡಕರು, ಶ್ರಮಣಕರು, ಇಭ್ಯರು[3], ಕೃಷ್ಣರು[4], ಬಂಧುಪಾದಾಪತ್ಯರು[5], ಅವರಿಗೆ ನನ್ನೊಡನೆ ಇಂತಹ ಕಥಾಸಲ್ಲಾಪವಾದಾಗ—ಪೂಜ್ಯಗೌತಮನೊಡನೆ ಹೇಗೋ (ಹೇಗೆ ನಡೆಯುತ್ತಿರುವೆನೋ) ಹಾಗೆ."

೧೧. "ಅಂಬಷ್ಟ, ನೀನು ಇಲ್ಲಿ ಬಂದುದು ಒಂದು ಅರ್ಥ[6]ಕ್ಕೆ. ಯಾವ ಅರ್ಥಕ್ಕಾಗಿ ನೀನಿಲ್ಲಿ ಬಂದೆಯೋ ಅದೇ ಅರ್ಥವನ್ನು ಚೆನ್ನಾಗಿ ಮನಸ್ಸಿಗೆ ತಂದುಕೊ. ಈ ಮಾಣವ ಅಂಬಷ್ಟನು ಅಪೂರ್ಣನೇ ಸರಿ. ಪರಿಪೂರ್ಣನೆಂದು ಹೆಮ್ಮೆಪಡುವವನು ಅಪೂರ್ಣವಾದ ಆತ್ಮವುಳ್ಳವನಲ್ಲದೆ ಇನ್ನೇನು!"

೧೨. ಆಗ ಮಾಣವ ಅಂಬಷ್ಟನು ಭಗವಾನನ ಅಪೂರ್ಣತ್ವವಾದದಿಂದ ಮನಸ್ಸುಕೆಟ್ಟು, ಕೋಪಗೊಂಡು, ಅಸಂತುಷ್ಟಮನನಾಗಿ, ಭಗವಂತನನ್ನೇ ಗದರಿಸುತ್ತ, ಭಗವಂತನನ್ನೇ ಹೀಯ್ಯೈಸುತ್ತ, ಭಗವಂತನನ್ನೇ ನಿಂದಿಸುತ್ತ, "ಶ್ರಮಣ

---

1 ತಾರುಣ್ಯ ಹೋಗಿ, ಬಹು ವಯಸ್ಸಾಗಿ, ಗೌರವಾರ್ಹರಾದ. 2 ಆಚಾರ್ಯ ಮತ್ತು ಅವನ ಆಚಾರ್ಯ. 3 ಹೀನ ಕೆಲಸ ಮಾಡುವವರು. 4 ಕರಿಯರು. 5 ಬ್ರಹ್ಮನು ಬ್ರಾಹ್ಮಣರ ಬಂಧು; ಅವನ ಕಾಲಿನಿಂದ ಹುಟ್ಟಿದವರು ಶೂದ್ರರು. 6 ಗುರಿ, ಪ್ರಯೋಜನ.

ಗೌತಮನು ಕೆಟ್ಟನು" ಎಂದು ಭಗವಂತನಿಗೆ ಹೀಗೆಂದನು—"ಭೋ ಗೌತಮ! ಶಾಕ್ಯಜಾತಿಯು ಚಂಡವು[1], ಶಾಕ್ಯಜಾತಿಯು ಪರುಷ[2]ವು, ಶಾಕ್ಯಜಾತಿಯು ಲಘುಕ[3]ವು, ಶಾಕ್ಯಜಾತಿಯು ರಭಸ[4]ವು ; ಇಭ್ಯರು, ಇಭ್ಯಸಮಾನರು ; ಬ್ರಾಹ್ಮಣರನ್ನು ಸತ್ಕರಿಸರು, ಬ್ರಾಹ್ಮಣರನ್ನು ಗೌರವಿಸರು, ಬ್ರಾಹ್ಮಣರನ್ನು ಮಾನಿಸರು, ಬ್ರಾಹ್ಮಣರನ್ನು ಪೂಜಿಸರು, ಬ್ರಾಹ್ಮಣರಿಗೆ ಕೈಜೋಡಿಸರು. ಭೋ ಗೌತಮ, ಇಭ್ಯರಾಗಿ, ಇಭ್ಯಸಮಾನರಾಗಿ, ಈ ಶಾಕ್ಯರು ಬ್ರಾಹ್ಮಣರನ್ನು ಸತ್ಕರಿಸದೆ, ಬ್ರಾಹ್ಮಣರನ್ನು ಗೌರವಿಸದೆ, ಬ್ರಾಹ್ಮಣರನ್ನು ಮಾನಿಸದೆ, ಬ್ರಾಹ್ಮಣರನ್ನು ಪೂಜಿಸದೆ, ಬ್ರಾಹ್ಮಣರಿಗೆ ಕೈಜೋಡಿಸದಿರುವುದು—ಇದು ಸರಿಯಲ್ಲ, ಇದು ತಕ್ಕುದಲ್ಲ." ಹೀಗೆಂದು ಮಾಣವ ಅಂಬಷ್ಟನು ಈ ಮೊದಲಸಲ ಶಾಕ್ಯರಲ್ಲಿ ಇಭ್ಯವಾದವನ್ನು ಹೇಳಿಸಿದನು.

೧೩. "ಆದರೆ, ಶಾಕ್ಯರು ನಿನಗೇನು ಅಪರಾಧ ಮಾಡಿದರು, ಅಂಬಷ್ಟ?"

"ಭೋ ಗೌತಮ! ನಾನು ಒಂದು ಸಲ ಆಚಾರ್ಯ ಬ್ರಾಹ್ಮಣ ಪೌಷ್ಕರಸಾದಿಯ ಏನೋ ಒಂದು ಕೆಲಸಕ್ಕಾಗಿ ಕಪಿಲವಸ್ತುವಿಗೆ ತೆರಳಿ, ಶಾಕ್ಯರ ಸಂಸ್ಥಾಗಾರ[5]ವಿರುವಲ್ಲಿಗೆ ಹೋದೆನು. ಆಗ ಆ ಸಮಯದಲ್ಲಿ ಅನೇಕ ಶಾಕ್ಯರೂ ಶಾಕ್ಯಕುಮಾರರೂ ಸಂಸ್ಥಾಗಾರದಲ್ಲಿ ಉಚ್ಚಾಸನಗಳಲ್ಲಿ ಕುಳಿತು, ಒಬ್ಬರನ್ನೊಬ್ಬರು ಬೆರಳಿಂದ ತಿವಿಯುತ್ತ, ಗೇಲಿ ಮಾಡುತ್ತ ಆಟವಾಡುತ್ತಿದ್ದರು. ಅವರು ಗೇಲಿ ಮಾಡುತ್ತಿದ್ದುದು ನನ್ನನ್ನೇ ಸರಿ! ನನ್ನನ್ನು ಯಾರೂ ಆಸನಕ್ಕೆ ಕರೆಯಲಿಲ್ಲ. ಭೋ ಗೌತಮ, ಇಭ್ಯರಾಗಿ, ಇಭ್ಯಸಮಾನರಾಗಿ . . . [§ ೧೨ ಕೊನೆ] . . . ಇದು ಸರಿಯಲ್ಲ, ಇದು ತಕ್ಕುದಲ್ಲ." ಹೀಗೆಂದು ಮಾಣವ ಅಂಬಷ್ಟನು ಈ ಎರಡನೆಯ ಸಲ ಶಾಕ್ಯರಲ್ಲಿ ಇಭ್ಯವಾದವನ್ನು ಹೇಳಿಸಿದನು.

೧೪. "ಅಂಬಷ್ಟ, ಚಿಕ್ಕ ಹಕ್ಕಿಯಾದ ಲಟುಕಿಕೆ ಕೂಡ ತನ್ನ ಗೂಡಿನಲ್ಲಿ ಬೇಕಾದುದನ್ನು ಹೇಳಬಲ್ಲುದು. ಅಂಬಷ್ಟ, ಈ ಕಪಿಲವಸ್ತು ಶಾಕ್ಯರಿಗೆ ಸ್ವಂತ. ಇಂತಹ ಅಲ್ಪಮಾತ್ರಕ್ಕೆ ಅಂಬಷ್ಟನು ಕೋಪಗೊಳ್ಳುವುದು ಅರ್ಹವಲ್ಲ."

೧೫. "ಭೋ ಗೌತಮ, ವರ್ಣಗಳು ನಾಲ್ಕು—ಕ್ಷತ್ರಿಯರು, ಬ್ರಾಹ್ಮಣರು, ವೈಶ್ಯರು, ಶೂದ್ರರು. ಈ ನಾಲ್ಕು ವರ್ಣಗಳಲ್ಲಿ—ಭೋ ಗೌತಮ, ಕ್ಷತ್ರಿಯ, ವೈಶ್ಯ, ಶೂದ್ರ ಮೂರು ವರ್ಣಗಳು ಬ್ರಾಹ್ಮಣರಿಗೆ ಪರಿಚಾರಕರಲ್ಲದೆ ಬೇರೆಯಲ್ಲ! ಅದರಿಂದ ಭೋ ಗೌತಮ, ಇಭ್ಯರಾಗಿ, ಇಭ್ಯಸಮಾನರಾಗಿ . . . [§ ೧೨ ಕೊನೆ] . . .

---

[1] ಬೇಗ ಕೋಪ ಬರುವಂತಹುದು. [2] ಒಡ್ಡು. [3] ಕೊಂಚಕ್ಕೆಲ್ಲ ಕೆರಳುವವರು. [4] ಅತಿ ಮಾತನಾಡುವವರು. [5] ಸಭಾಸ್ಥಾನ.

ಇದು ಸರಿಯಲ್ಲ, ಇದು ತಕ್ಕುದಲ್ಲ." ಹೀಗೆಂದು ಮಾಣವ ಅಂಬಷ್ಟನು ಮೂರನೆಯ ಸಲ ಶಾಕ್ಯರಲ್ಲಿ ಇಭ್ಯವಾದವನ್ನು ಬೀಳಿಸಿದನು.

೧೬. ಆಗ ಭಗವಂತನಿಗೆ ಹೀಗೆನ್ನಿಸಿತು—"ಇಭ್ಯವಾದದಿಂದ ಶಾಕ್ಯರನ್ನು ತಗ್ಗಿಸಲು ಈ ಮಾಣವ ಅಂಬಷ್ಟನು ದೃಢಮಾಡಿದ್ದಾನೆ. ನಾನು ಇವನ ಗೋತ್ರ ಕೇಳುವೆನು." ಆಗ ಭಗವಾನನು ಮಾಣವ ಅಂಬಷ್ಟನಿಗೆ ಹೀಗೆಂದನು—"ನೀನಾವ ಗೋತ್ರ, ಅಂಬಷ್ಟ ?"

"ನಾನು ಕೃಷ್ಣಾಯನ, ಭೋ ಗೌತಮ !"

"ಅಂಬಷ್ಟ, ನಿನ್ನ ತಂದೆತಾಯಿಗಳ ನಾಮಗೋತ್ರವನ್ನು ಹಿಡಿದು ಹಿಂದೆ ಹೋದರೆ, ಶಾಕ್ಯರು ಆರ್ಯಪುತ್ರರಾಗುವರು; ನೀನು ಶಾಕ್ಯರ ದಾಸೀಪುತ್ರ ನಾಗುವೆ. ಅಲ್ಲದೆ, ಅಂಬಷ್ಟ, ಶಾಕ್ಯರು ಇಕ್ಷ್ವಾಕು[1]ರಾಜನು (ತಮಗೆ) ಪಿತಾಮಹ ನೆನ್ನುವರು. ಬಹು ಹಿಂದೆ, ಅಂಬಷ್ಟ, ಇಕ್ಷ್ವಾಕುರಾಜನು ತನಗೆ ಮನಸ್ಸಂತೋಷ ಗೊಳಿಸಿ ಪ್ರಿಯಳಾದ ರಾಣಿಯ ಪುತ್ರನಿಗೆ ರಾಜ್ಯವನ್ನು ಪರಿಣಮಿಸಲು[2] ಬಯಸಿ, [3]ಇಕ್ಷ್ವಾಮುಖ, ಕರಂಡು, ಹಸ್ತಿನೀಯ, ನೀನಿಪುರರೆಂಬ ಜ್ಯೇಷ್ಠಕುಮಾರರನ್ನು ರಾಷ್ಟ್ರದಿಂದ ಹೊರಡಿಸಿದನು. ಅವರು ರಾಷ್ಟ್ರದಿಂದ ಹೊರಟವರು, ಹಿಮವಂತದ ಪಾರ್ಶ್ವದ ಪುಷ್ಕರಣಿಯ ತೀರದಲ್ಲಿ ಮಹಾಶಾಕಷಂಡದ ಬಳಿ ವಾಸವನ್ನು ಕಲ್ಪಿಸಿದರು. ಅವರು ಜಾತಿಸಂಭೇದ ಭಯದಿಂದ ಸ್ವಂತ ಭಗಿನಿಯರೊಡನೆ ಸಂವಾಸವನ್ನು ಕಲ್ಪಿಸಿದರು.

"ಆಗ ಇಕ್ಷ್ವಾಕುರಾಜನು, ಅಂಬಷ್ಟ, ಅಮಾತ್ಯರನ್ನೂ ಪಾರಿಷದರನ್ನೂ ಕರೆದನು—'ಭೋ ! ಕುಮಾರರು ಈಗ ಎಲ್ಲಿ ವಾಸಿಸುವರು ?'

"'ದೇವ, ಹಿಮವಂತ ಪಾರ್ಶ್ವದಲ್ಲಿ ಪುಷ್ಕರಿಣಿಯ ತೀರದಲ್ಲಿ ಮಹಾಶಾಕ ಷಂಡವುಂಟು. ಕುಮಾರರು ಈಗ ಅಲ್ಲಿ ವಾಸಿಸುವರು. ಅವರು ಜಾತಿಸಂಭೇದ, ಭಯದಿಂದ ಸ್ವಂತ ಭಗಿನಿಯರೊಡನೆ ಸಂವಾಸ ಕಲ್ಪಿಸಿಕೊಂಡಿರುವರು.'

"ಆಗ, ಅಂಬಷ್ಟ, ಇಕ್ಷ್ವಾಕುರಾಜನು ಉದಾನವನ್ನು ಉದಾಸಿಸಿದನು—'ಆಹಾ ! ಕುಮಾರರು ಶಾಕ್ಯ[4]ರು ! ಆಹಾ ! ಕುಮಾರರು ಪರಮ ಶಾಕ್ಯ[4]ರು !'

---

[1] 'ಓಕ್ಕಾಕಮ್.' [2] ನ್ಯಾಯವಾಗಿ ಹೋಗಬೇಕಾದವರಿಗೆ ತಪ್ಪಿಸಿ, ಬೇರೆಯವರಿಗೆ ಕೊಡಲು. [3] 'ಓಕ್ಕಾಮುಖಮ್, ಕರಣ್ಡುಮ್, ಹತ್ಥಿನೀಯಮ್, ಸೀನಿಪುರಮ್.' [4] ಮೂಲ ದಲ್ಲಿನ 'ಸಕ್ಯಾ . . . ಪರಮ ಸಕ್ಯಾ' ಎಂಬುದಕ್ಕೆ 'ಶಕ್ಯರು', 'ಶಾಕ್ಯರು' ಎಂದು ಎರಡೂ ಅರ್ಥವಾಗುವುದು. ಜಾತಿಸಂಭೇದ ಭಯವನ್ನು ತಪ್ಪಿಸಿಕೊಂಡು ವರ್ಧಿಸಿದುದರಿಂದ ಅವರು ಶಕ್ಯರು. ಶಾಕಷಂಡದ ಬಳಿ ಬೆಳೆದುದರಿಂದ ಅವರು ಶಾಕ್ಯರು

"ಅದರಿಂದಲೇ, ಅಂಬಷ್ಟ, ಶಾಕ್ಯರೆನ್ನುವುದು. ಅವನೇ ಶಾಕ್ಯರಿಗೆ ಪೂರ್ವ ಪುರುಷನು. ಅಂಬಷ್ಟ, ಇಕ್ಷ್ವಾಕುರಾಜನಿಗೆ ದಿಶಾ ಎಂಬ ಹೆಸರಿನ ದಾಸಿಯಿದ್ದಳು. ಅವಳಿಗೆ ಕೃಷ್ಣನು ಜನಿಸಿದನು. ಕೃಷ್ಣನು ಹುಟ್ಟಿದ ಗಳಿಗೆಯೆ ಹೇಳಿದನು—'ನನ್ನನ್ನು ತೊಳೆ, ಅಮ್ಮ! ನನಗೆ ಸ್ನಾನಮಾಡಿಸು, ಅಮ್ಮ! ಅಮ್ಮ! ಈ ಅಶುಚಿಯಿಂದ ನನ್ನನ್ನು ಮುಕ್ತಿಗೊಳಿಸು. ನಾನು ನಿನಗೆ ಉಪಯೋಗವಾಗುವೆನು.'

"ಅಂಬಷ್ಟ, ಈಗ ಮನುಷ್ಯರು ಪಿಶಾಚಿಗಳನ್ನು 'ಪಿಶಾಚಿಗಳು' ಎನ್ನುವಂತೆ, ಅದರಂತೆಯೇ, ಅಂಬಷ್ಟ, ಆ ಕಾಲದಲ್ಲಿ ಮನುಷ್ಯರು ಪಿಶಾಚಿಗಳನ್ನು 'ಕೃಷ್ಣಗಳು' ಎನ್ನುತ್ತಿದ್ದರು. ಅವರು ಹೀಗೆಂದರು—'ಇದು ಹುಟ್ಟಿದ ಮರುಗಳಿಗೆ ಮಾತನಾಡಿತು. ಕೃಷ್ಣ ಹುಟ್ಟಿತು, ಪಿಶಾಚಿ ಹುಟ್ಟಿತು.' ಅದೆ ಮೊದಲಾಗಿ, ಅಂಬಷ್ಟ, ಕೃಷ್ಣಾಯನರೆನ್ನುವುದು. ಅವನೇ ಕೃಷ್ಣಾಯನರಿಗೆ ಪೂರ್ವಪುರುಷನು.

"ಹೀಗೆ, ಅಂಬಷ್ಟ, ನಿನ್ನ ತಂದೆತಾಯಿಗಳ ನಾಮಗೋತ್ರವನ್ನು ಹಿಡಿದು ಹಿಂದೆ ಹೋದರೆ, ಶಾಕ್ಯರು ಆರ್ಯಪುತ್ರರಾಗುವರು; ನೀನು ಶಾಕ್ಯರ ದಾಸೀಪುತ್ರನಾಗುವೆ."

೧೭. ಹೀಗೆನ್ನಲು, ಆ ಮಾಣವಕರು ಭಗವಂತನಿಗೆ ಹೀಗೆಂದರು—"ಪೂಜ್ಯ ಗೌತಮನು ದೃಢಮಾಡಿ ಮಾಣವ ಅಂಬಷ್ಟನನ್ನು ದಾಸೀಪುತ್ರವಾದದಿಂದ ತಗ್ಗಿಸದಿರಲಿ. ಭೋ ಗೌತಮ, ಮಾಣವ ಅಂಬಷ್ಟನು ಸುಜಾತನು, ಕುಲಪುತ್ರನು, ಬಹುಶ್ರುತನು, ಕಲ್ಯಾಣವಾಕ್ಕರಣನು, ಪಂಡಿತನು. ಮಾಣವ ಅಂಬಷ್ಟನು ಈ ವಿಷಯವಾಗಿ ಪೂಜ್ಯಗೌತಮನೊಡನೆ ಉತ್ತರ ಕೊಡಬಲ್ಲನು."

೧೮. ಆಗ ಭಗವಾನನು ಆ ಮಾಣವಕರಿಗೆ ಹೀಗೆಂದನು—"ಮಾಣವಕರೆ, 'ಮಾಣವ ಅಂಬಷ್ಟನು ದುರ್ಜಾತನು, ಅಕುಲಪುತ್ರನು, ಅಲ್ಪಶ್ರುತನು, ಅಕಲ್ಯಾಣವಾಕ್ಕರಣನು, ದುಷ್ಪ್ರಜ್ಞನು; ಮಾಣವ ಅಂಬಷ್ಟನು ಈ ವಿಷಯವಾಗಿ ಪೂಜ್ಯ ಗೌತಮನೊಡನೆ ಉತ್ತರ ಕೊಡಲಾರನು' ಎಂದು ನಿಮಗೆನಿಸಿದರೆ, ಮಾಣವ ಅಂಬಷ್ಟನು ಕುಳಿತುಕೊಳ್ಳಲಿ; ನೀವು ನನ್ನೊಡನೆ ಈ ವಿಚಾರವಾಗಿ ಮಂತಣ ನಡೆಸಿರಿ. ಹಾಗಲ್ಲದೆ 'ಮಾಣವ ಅಂಬಷ್ಟನು ಸುಜಾತನು, ಕುಲಪುತ್ರನು, ಬಹುಶ್ರುತನು, ಕಲ್ಯಾಣವಾಕ್ಕರಣನು, ಪಂಡಿತನು; ಮಾಣವ ಅಂಬಷ್ಟನು ಈ ವಿಷಯವಾಗಿ ಪೂಜ್ಯಗೌತಮನೊಡನೆ ಉತ್ತರ ಕೊಡಬಲ್ಲನು'—ಎಂದು ನಿಮಗೆನಿಸಿದರೆ, ನೀವು ಕುಳಿತುಕೊಳ್ಳಿ; ಮಾಣವ ಅಂಬಷ್ಟನು ನನ್ನೊಡನೆ ಮಂತಣ ನಡೆಸಲಿ."

೧೯. "ಭೋ ಗೌತಮ, ಮಾಣವ ಅಂಬಷ್ಟನು ಸುಜಾತನು, ಕುಲಪುತ್ರನು, ಬಹುಶ್ರುತನು, ಕಲ್ಯಾಣವಾಕ್ಕರಣನು, ಪಂಡಿತನು. ಮಾಣವ ಅಂಬಷ್ಟನು ಈ

ವಿಷಯವಾಗಿ ಪೂಜ್ಯಗೌತಮನೊಡನೆ ಉತ್ತರ ಕೊಡಬಲ್ಲನು. ನಾವು ಸುಮ್ಮ ನಾಗುವೆವು. ಮಾಣವ ಅಂಬಷ್ಟನು ಪೂಜ್ಯಗೌತಮನೊಡನೆ ಈ ವಿಚಾರವಾಗಿ ಮಂತಣವಾಡಲಿ."

೨೦. ಆಗ ಭಗವಾನನು ಮಾಣವ ಅಂಬಷ್ಟನಿಗೆ ಹೀಗೆಂದನು—"ಅಂಬಷ್ಟ, ಈಗ ಸಹಧರ್ಮಿಕ[1]ವಾದ ಈ ಪ್ರಶ್ನೆ ಬರುತ್ತದೆ; ಬೇಡವೆನಿಸಿದರೂ ಉತ್ತರ ಕೊಡ ಬೇಕಾದುದು. ಉತ್ತರ ಕೊಡದಿದ್ದರೆ, ಒಂದರಿಂದ ಒಂದಕ್ಕೆ ಜಾರಿದರೆ, ಇಲ್ಲ ಸುಮ್ಮ ನಿದ್ದರೆ, ಹೊರಟುಹೋದರೆ—ಆಗಲೇ ನಿನ್ನ ತಲೆಯು ಏಳಾಗಿ ಸೀಳುವುದು. ಏನೆಂಬೆ ಅಂಬಷ್ಟ, ವೃದ್ಧ ಬ್ರಾಹ್ಮಣರೂ ಮಹಾ ಆರ್ಯಕರಾದ ಆಚಾರ್ಯ ಪ್ರಚಾರ್ಯರೂ ಮಾತನಾಡುತ್ತಿರುವಾಗ ಕೃಷ್ಣಾಯನರು ಎಲ್ಲಿಂದ ಜನಿಸಿ ಬಂದರು, ಕೃಷ್ಣಾಯನರ ಪೂರ್ವಪುರುಷನು ಯಾರು ಎಂಬುದನ್ನು ಏನಾದರೂ ಕೇಳಿರುವೆಯ ?"

ಹೀಗೆನ್ನಲು, ಮಾಣವ ಅಂಬಷ್ಟನು ಸುಮ್ಮನಿದ್ದನು. ಎರಡನೆಯ ಸಲ ಭಗವಂತನು ಮಾಣವ ಅಂಬಷ್ಟನಿಗೆ ಹೀಗೆಂದನು—"ಏನೆಂಬೆ ಅಂಬಷ್ಟ, ವೃದ್ಧ ಬ್ರಾಹ್ಮಣರೂ ಮಹಾ ಆರ್ಯಕರಾದ ಆಚಾರ್ಯ ಪ್ರಾಚಾರ್ಯರೂ ಮಾತನಾಡು ತ್ತಿರುವಾಗ ಕೃಷ್ಣಾಯನರು ಎಲ್ಲಿಂದ ಜನಿಸಿ ಬಂದರು, ಕೃಷ್ಣಾಯನರ ಪೂರ್ವ ಪುರುಷನು ಯಾರು ಎಂಬುದನ್ನು ಏನಾದರೂ ಕೇಳಿರುವೆಯ ?" ಎರಡನೆಯ ಸಲವೂ ಮಾಣವ ಅಂಬಷ್ಟನು ಸುಮ್ಮನಿದ್ದನು.

ಆಗ ಭಗವಾನನು ಮಾಣವ ಅಂಬಷ್ಟನಿಗೆ ಹೀಗೆಂದನು—"ಇದಕ್ಕೆ ಉತ್ತರ ಕೊಡು, ಅಂಬಷ್ಟ. ಇದು ನೀನು ಸುಮ್ಮನಿರುವ ಕಾಲವಲ್ಲ. ಅಂಬಷ್ಟ, ತಥಾಗತನು ಮೂರನೆಯ ಸಲ ಕೇಳಿದ ಸಹಧರ್ಮಿಕವಾದ ಪ್ರಶ್ನೆಗೆ ಯಾವಾಗ ಉತ್ತರ ಕೊಡ ದಿರುವೆ, ಆಗಲೇ ನಿನ್ನ ತಲೆಯು ಏಳಾಗಿ ಸೀಳಿಹೋಗುವುದು."

೨೧. ಆ ಸಮಯದಲ್ಲಿ ಯಕ್ಷ ವಜ್ರಪಾಣಿ[2]ಯು ಆದಿತ್ಯನಂತೆ ಪ್ರಜ್ವಲಿಸುವ ಜ್ಯೋತಿರ್ಭೂತವಾದ ಮಹಾ ಅಯಃಕೂಟವನ್ನು ತಂದು—"ಭಗವಾನನು ಮೂರ ನೆಯ ಸಲ ಕೇಳಿದ ಸಹಧರ್ಮಿಕವಾದ ಪ್ರಶ್ನೆಗೆ ಈ ಮಾಣವ ಅಂಬಷ್ಟನು ಯಾವಾಗ ಉತ್ತರ ಕೊಡನು, ಆಗಲೇ ಇವನ ತಲೆಯನ್ನು ಏಳಾಗಿ ಸೀಳುವೆನು" ಎಂದು ಮಾಣವ ಅಂಬಷ್ಟನ ಮೇಲೆ ಆಕಾಶದಲ್ಲಿ ನಿಂತಿದ್ದನು. ಆಗ ಭಗವಾನನೂ ಮಾಣವ ಅಂಬಷ್ಟನೂ ಯಕ್ಷ ವಜ್ರಪಾಣಿಯನ್ನು ನೋಡಿದರು. ಆಗ ಮಾಣವ ಅಂಬಷ್ಟನು ಅದನ್ನು ಕಂಡು ಭೀತನಾಗಿ, ಸಂವಿಗ್ನನಾಗಿ, ರೋಮಾಂಚಗೊಂಡು ಭಗವಂತನನ್ನೇ

---

[1] ಇದುವರೆಗೆ ಆಡಿದ ಮಾತುಗಳಾದ ಮೇಲೆ ಸಹಜವಾಗಿ ಕೇಳಬೇಕಾದ. [2] ಈ ವಜ್ರ ಪಾಣಿಯು ಇಂದ್ರನೆಂದು ಬುದ್ಧಘೋಷನ ವ್ಯಾಖ್ಯೆ.

ಮರೆಹೊಕ್ಕು, ಭಗವಂತನನ್ನೇ ರಕ್ಷೆಹೊಕ್ಕು, ಭಗವಂತನನ್ನೇ ಶರಣುಹೊಕ್ಕು, ಬಳಿ ಬಂದು ಕುಳಿತು ಭಗವಂತನಿಗೆ ಹೀಗೆಂದನು—"ಪೂಜ್ಯಗೌತಮನು ಹೇಳಿದುದೇನು? ಪೂಜ್ಯಗೌತಮನು ಪುನಃ ಹೇಳಬೇಕು."

"ಏನೆಂಬೆ ಅಂಬಷ್ಠ, ವೃದ್ಧ ಬ್ರಾಹ್ಮಣರೂ ಮಹಾ ಆರ್ಯಕರಾದ ಆಚಾರ್ಯ ಪ್ರಾಚಾರ್ಯರೂ ಮಾತನಾಡುತ್ತಿರುವಾಗ ಕೃಷ್ಣಾಯನರು ಎಲ್ಲಿಂದ ಜನಿಸಿ ಬಂದರು, ಕೃಷ್ಣಾಯನರ ಪೂರ್ವಪುರುಷನು ಯಾರು ಎಂಬುದನ್ನು ಏನಾದರೂ ಕೇಳಿರುವೆಯ?"

"ಭೋ ಗೌತಮ, ಪೂಜ್ಯಗೌತಮನು ಹೇಳಿದಂತೆಯೇ ಕೇಳಿರುವೆನು; ಕೃಷ್ಣಾಯನರು ಜನಿಸಿ ಬಂದುದು ಹಾಗೆಯೇ, ಕೃಷ್ಣಾಯನರ ಪೂರ್ವಪುರುಷನು ಅವನೇ."

೨೨. ಹೀಗೆನ್ನಲು, ಮಾಣವಕರು ದನಿಯೆತ್ತಿ ಕೂಗಾಡುತ್ತ, ಕೋಲಾಹಲ ಮಾಡುತ್ತ ಎಂದರು—"ಮಾಣವ ಅಂಬಷ್ಠನು ದುರ್ಜಾತನಂತೆ! ಅಕುಲಪುತ್ರನಂತೆ! ಶಾಕ್ಯರ ದಾಸೀಪುತ್ರನಂತೆ! ಶಾಕ್ಯರು ಮಾಣವ ಅಂಬಷ್ಠನಿಗೆ ಆರ್ಯಪುತ್ರರಂತೆ! ಧರ್ಮವಾದಿಯೇ ತಾನಾದ ಶ್ರಮಣ ಗೌತಮನನ್ನು ನಂಬಲಾಗದೆಂದು ತಿಳಿದಿರಲಿಲ್ಲ."[1]

೨೩. ಆಗ ಭಗವಾನನಿಗೆ ಹೀಗೆನ್ನಿಸಿತು—"ಈ ಮಾಣವಕರು ದಾಸೀಪುತ್ರವಾದದಿಂದ ಮಾಣವ ಅಂಬಷ್ಠನನ್ನು ತಗ್ಗಿಸಬೇಕೆಂದು ದೃಢಮಾಡಿದ್ದಾರೆ. ಅವನನ್ನು ಬಿಡಿಸೋಣ." ಆಗ ಭಗವಾನನು ಆ ಮಾಣವಕರಿಗೆ ಹೀಗೆಂದನು—"ಮಾಣವಕರೆ, ನೀವು ದೃಢಮಾಡಿ ದಾಸೀಪುತ್ರವಾದದಿಂದ ಮಾಣವ ಅಂಬಷ್ಠನನ್ನು ತಗ್ಗಿಸಬೇಡಿ. ಆ ಕೃಷ್ಣನು ಶ್ರೇಷ್ಠನಾದ ಋಷಿಯಾದನು. ಅವನು ದಕ್ಷಿಣ ಜನಪದಕ್ಕೆ ಹೋಗಿ ಬ್ರಹ್ಮಮಂತ್ರ[2]ಗಳನ್ನು ಕಲಿತು, ಇಕ್ಷ್ವಾಕುರಾಜನ ಬಳಿಸಾರಿ, ಮದ್ರರೂಪಿ[3]ಯೆಂಬ ಮಗಳನ್ನು ಯಾಚಿಸಿದನು. ಅದಕ್ಕೆ ಇಕ್ಷ್ವಾಕುರಾಜನು 'ಅರೇ! ಮಗಳಾದ ಮದ್ರರೂಪಿಯನ್ನು ಯಾಚಿಸುವ, ನನ್ನ ದಾಸೀಪುತ್ರನಿಗೆ ಸಮಾನನಾದ ಇವನಾರು?' ಎಂದು ಕೋಪಗೊಂಡು, ಮನಸ್ಸು ಕೆಟ್ಟು, ಬಾಣ ಸಂಧಾನಮಾಡಿದನು. ಆದರೆ ಬಾಣ ಬಿಡುವುದಕ್ಕಾಗಲಿ, ಪ್ರತಿಸಂಹಾರಮಾಡುವುದಕ್ಕಾಗಲಿ ಅವನು ಅಶಕ್ಯನಾದನು. ಆಗ ಮಾಣವಕರೂ ಅಮಾತ್ಯರೂ ಪಾರಿಷದರೂ

---

[1] ಈ ಸಂದರ್ಭದಲ್ಲಿ ಈ ವಾಕ್ಯ ಅರ್ಥವಾಗದು. ಮೂಲ ಹೀಗಿದೆ. 'ಧಮ್ಮವಾದಿಂ ಯೇವ ಕಿರ ಮಯಂ ಸಮಣಂ ಗೋತಮಂ ಅಪಸಾದೇತಬ್ಬಂ ಅಮಞ್ಞಾಮ್ಹಾತಿ.' [2] ಅತ್ಯುತ್ಕೃಷ್ಟವಾದ ಮಂತ್ರ. [3] 'ಮದ್ದರೂಪೀ', 'ಖುದ್ದರೂಪೀ' ಎಂದೂ ಪಾಠವುಂಟು.

ಋಷಿ ಕೃಷ್ಣನ ಬಳಿ ಬಂದು ಹೀಗೆಂದರು—'ಭದಂತೆ[1]! ರಾಜನಿಗೆ ಸ್ವಸ್ತಿಯಾಗಲಿ. ರಾಜನಿಗೆ ಸ್ವಸ್ತಿಯಾಗಲಿ, ಭದಂತೆ!'

"'ರಾಜನಿಗೆ ಸ್ವಸ್ತಿಯಾಗುವುದು. ಆದರೆ ರಾಜನು ಬಾಣವನ್ನು ಕೆಳಗೆ ಬಿಟ್ಟರೆ, ರಾಜನು ಜಯಿಸಿರುವ ವರೆಗಿನ ಪೃಥ್ವಿಯಷ್ಟೂ ಚೂರಾಗುವುದು.'

"'ಭದಂತೆ! ರಾಜನಿಗೆ ಸ್ವಸ್ತಿಯಾಗಲಿ. ಜನಪದಕ್ಕೆ ಸ್ವಸ್ತಿಯಾಗಲಿ.'

"'ರಾಜನಿಗೆ ಸ್ವಸ್ತಿಯಾಗುವುದು. ಜನಪದಕ್ಕೆ ಸ್ವಸ್ತಿಯಾಗುವುದು. ಆದರೆ ರಾಜನು ಬಾಣ ಮೇಲೆ ಬಿಟ್ಟರೆ, ರಾಜನು ಜಯಿಸಿರುವ ವರೆಗಿನ ಅಷ್ಟಕ್ಕೂ ದೇವತೆ[2]ಯು ಏಳು ವರ್ಷ ಮಳೆಗರೆಯನು.'

"'ಭದಂತೆ! ರಾಜನಿಗೂ ಜನಪದಕ್ಕೂ ಸ್ವಸ್ತಿಯಾಗಲಿ. ದೇವತೆಯೂ ಮಳೆ ಗರೆಯಲಿ.'

"'ರಾಜನಿಗೂ ಜನಪದಕ್ಕೂ ಸ್ವಸ್ತಿಯಾಗುವುದು. ದೇವತೆಯೂ ಮಳೆ ಗರೆಯುವನು. ಆದರೆ ರಾಜನು ಬಾಣವನ್ನು ಜ್ಯೇಷ್ಠಕುಮಾರನಲ್ಲಿ ಪ್ರತಿಸ್ಥಾಪಿಸಲಿ. ಕುಮಾರನಿಗೆ ಕೂದಲಲುಗದಂತೆ ಸ್ವಸ್ತಿಯಾಗುವುದು.'

"ಆಗ ಆ ಮಾಣವಕರೂ ಅಮಾತ್ಯರೂ ಇಕ್ಷ್ವಾಕುವಿಗೆ ತಿಳಿಸಿದರು—'ಇಕ್ಷ್ವಾಕನು ಬಾಣವನ್ನು ಜ್ಯೇಷ್ಠಕುಮಾರನಲ್ಲಿ ಪ್ರತಿಸ್ಥಾಪಿಸಲಿ. ಕುಮಾರನಿಗೆ ಕೂದಲಲುಗದಂತೆ ಸ್ವಸ್ತಿಯಾಗುವುದು.' ಆಗ ಇಕ್ಷ್ವಾಕುರಾಜನು ಬಾಣವನ್ನು ಜ್ಯೇಷ್ಠಕುಮಾರನಲ್ಲಿ ಪ್ರತಿಸ್ಥಾಪಿಸಿದನು. ಕುಮಾರನಿಗೆ ಕೂದಲಲುಗದಂತೆ ಸ್ವಸ್ತಿಯಾಯಿತು. ಆಗ ಆ ಇಕ್ಷ್ವಾಕುರಾಜನು ಭೀತನಾಗಿ, ಬ್ರಹ್ಮದಂಡ[3]ದಿಂದ ತರ್ಜಿತನಾಗಿ, ಮದ್ರರೂಪಿ ಕುಮಾರಿಯನ್ನು ಕೊಟ್ಟನು. ಮಾಣವಕರೆ, ನೀವು ದೃಢಮಾಡಿ ದಾಸೀಪುತ್ರವಾದದಿಂದ ಮಾಣವ ಅಂಬಷ್ಟನನ್ನು ತಗ್ಗಿಸಬೇಡಿ. ಆ ಕೃಷ್ಣನು ಶ್ರೇಷ್ಠನಾದ ಋಷಿಯಾದನು."

೨೪. ಆಗ ಭಗವಾನನು ಮಾಣವ ಅಂಬಷ್ಟನನ್ನು ಕರೆದು ಕೇಳಿದನು—"ಏನೆಂಬೆ ಅಂಬಷ್ಟ, ಇಲ್ಲಿ, ಕ್ಷತ್ರಿಯಕುಮಾರನು ಬ್ರಾಹ್ಮಣ ಕನ್ಯೆಯೊಡನೆ ಸಂವಾಸ ಕಲ್ಪಿಸುವನು. ಆ ಸಂವಾಸದಿಂದ ಮಗನು ಹುಟ್ಟುವನು. ಹೀಗೆ ಆ ಕ್ಷತ್ರಿಯಕುಮಾರನಿಂದ ಬ್ರಾಹ್ಮಣ ಕನ್ಯೆಯಲ್ಲಿ ಹುಟ್ಟಿದ ಮಗನಿಗೆ ಬ್ರಾಹ್ಮಣರಲ್ಲಿ ಆಸನವಾಗಲಿ, ಉದಕವಾಗಲಿ ಲಭಿಸುವುದೆ?"

"ಲಭಿಸುವುದು, ಭೋ ಗೌತಮ!"

---

[1] ಶ್ರಾ. ಫ. ಸೂ. § ೧೨ ನೋಡಿ. [2] ಪರ್ಜನ್ಯ. [3] ಅತಿ ಮುಟ್ಟಿದ ದಂಡ (highest penalty).

"ಆದರೆ ಶ್ರಾದ್ಧದಲ್ಲಿ, ಸ್ಥಾಲೀಪಾಕ[1]ದಲ್ಲಿ, ಯಜ್ಞದಲ್ಲಿ, ಕರೆದಿಕ್ಕಿದ ಊಟದಲ್ಲಿ ಬ್ರಾಹ್ಮಣರು ಅವನನ್ನು ಉಣಗೊಡಿಸುವರೇನು ?"

"ಉಣಗೊಡಿಸುವರು, ಭೋ ಗೌತಮ !"

"ಆದರೆ, ಬ್ರಾಹ್ಮಣರು ಅವನಿಗೆ ಮಂತ್ರ ಕಲಿಸುವರೋ ಇಲ್ಲವೋ ?"

"ಕಲಿಸುವರು, ಭೋ ಗೌತಮ !"

"ಆದರೆ, ಅವರ ಸ್ತ್ರೀಯರು ಅವನಿಗೆ [2]ಆವೃತರೋ ಅನಾವೃತರೋ[2] ?"

"ಅವನಿಗೆ ಅನಾವೃತರೇ, ಭೋ ಗೌತಮ !"

"ಆದರೆ, ಕ್ಷತ್ರಿಯರು ಕ್ಷತ್ರಿಯಾಭಿಷೇಕದಿಂದ ಅವನಿಗೆ ಅಭಿಷೇಕಿಸುವರೋ ?"

"ಅದಾಗದಾಗದು, ಭೋ ಗೌತಮ !"

"ಅದಕ್ಕೆ ಕಾರಣ ?"

"ಅವನ ತಾಯಿಯ ಕಡೆಯ ಉತ್ಪನ್ನವು ಸರಿಯಾದುದಲ್ಲ, ಭೋ ಗೌತಮ !"

೨೫. "ಏನೆಂಬೆ ಅಂಬಷ್ಟ, ಇಲ್ಲಿ, ಬ್ರಾಹ್ಮಣ ಕುಮಾರನು ಕ್ಷತ್ರಿಯ ಕನ್ಯೆಯೊಡನೆ ಸಂವಾಸ ಕಲ್ಪಿಸುವನು. ಆ ಸಂವಾಸದಿಂದ ಮಗನು ಹುಟ್ಟುವನು. ಹೀಗೆ ಆ ಬ್ರಾಹ್ಮಣ ಕುಮಾರನಿಂದ ಕ್ಷತ್ರಿಯ ಕನ್ಯೆಯಲ್ಲಿ ಹುಟ್ಟಿದ ಮಗನಿಗೆ ಬ್ರಾಹ್ಮಣರಲ್ಲಿ ಆಸನವಾಗಲಿ, ಉದಕವಾಗಲಿ ಲಭಿಸುವುದೆ ?"

"ಲಭಿಸುವುದು, ಭೋ ಗೌತಮ !"

"ಆದರೆ ಶ್ರಾದ್ಧದಲ್ಲಿ, ಸ್ಥಾಲೀಪಾಕದಲ್ಲಿ, ಯಜ್ಞದಲ್ಲಿ, ಕರೆದಿಕ್ಕಿದ ಊಟದಲ್ಲಿ ಬ್ರಾಹ್ಮಣರು ಅವನನ್ನು ಉಣಗೊಡಿಸುವರೇನು ?"

"ಉಣಗೊಡಿಸುವರು, ಭೋ ಗೌತಮ !"

"ಆದರೆ, ಬ್ರಾಹ್ಮಣರು ಅವನಿಗೆ ಮಂತ್ರ ಕಲಿಸುವರೋ ಇಲ್ಲವೋ ?"

"ಕಲಿಸುವರು, ಭೋ ಗೌತಮ !"

"ಆದರೆ, ಅವರ ಸ್ತ್ರೀಯರು ಅವನಿಗೆ ಆವೃತರೋ ಅನಾವೃತರೋ ?"

"ಅವನಿಗೆ ಅನಾವೃತರೇ, ಭೋ ಗೌತಮ !"

"ಆದರೆ, ಕ್ಷತ್ರಿಯರು ಕ್ಷತ್ರಿಯಾಭಿಷೇಕದಿಂದ ಅವನಿಗೆ ಅಭಿಷೇಕಿಸುವರೋ ?"

"ಅದಾಗದಾಗದು, ಭೋ ಗೌತಮ !"

"ಅದಕ್ಕೆ ಕಾರಣ ?"

---

[1] ನವಣೆಯನ್ನಾಗಲಿ, ಅಕ್ಕಿಯನ್ನಾಗಲಿ ಹಾಲಿನಲ್ಲಿ ಬೇಯಿಸಿಕೊಟ್ಟ ನಿವೇದನೆ. ಯಜ್ಞಕಾಲವೇ ಮುಂತಾದ ವಿಶೇಷ ಪ್ರಕರಣಗಳಲ್ಲಿ ಇದನ್ನು ಅರ್ಪಿಸುವರು. [2] ಎಂದರೆ, ಆ ಹೆಂಗಸರು ಅವನ ಎದುರಿಗೆ ನಿಂತು ಬೆರೆಯುವರೋ ಅಥವಾ ಮರೆಯಾಗುವರೋ ಎಂದು.

"ಅವನ ತಂದೆಯ ಕಡೆಯ ಉತ್ಪನ್ನವು ಸರಿಯಾದುದಲ್ಲ, ಭೋ ಗೌತಮ !"

೨೬. "ಹೀಗೆ, ಅಂಬಷ್ಟ, ಸ್ತ್ರೀಯರೊಡನೆ ಸ್ತ್ರೀಯರನ್ನು ನೋಡಿದರೂ ಪುರುಷರೊಡನೆ ಪುರುಷರನ್ನು ನೋಡಿದರೂ ಕ್ಷತ್ರಿಯರೇ ಶ್ರೇಷ್ಠರು, ಬ್ರಾಹ್ಮಣರು ಹೀನರು. ಏನೆಂಬೆ ಅಂಬಷ್ಟ, ಇಲ್ಲಿ, ಬ್ರಾಹ್ಮಣರು ಯಾವುದಾದರೂ ಪ್ರಕರಣದಲ್ಲಿ ಒಬ್ಬ ಬ್ರಾಹ್ಮಣನಿಗೆ ತಲೆ ಬೋಳಿಸಿ, ಬೂದಿಸುರಿದು,[1] ರಾಷ್ಟ್ರದಿಂದಲೋ ನಗರದಿಂದಲೋ ಹೊರಗೆ ಕಳುಹಿಸುತ್ತಾರೆ. ಅವನಿಗೆ ಬ್ರಾಹ್ಮಣರಲ್ಲಿ ಆಸನವಾಗಲಿ, ಉದಕವಾಗಲಿ ಲಭಿಸುವುದೆ ?"

"ಅದಿಲ್ಲ, ಭೋ ಗೌತಮ !"

"ಆದರೆ ಶ್ರಾದ್ಧದಲ್ಲಿ, ಸ್ಥಾಲೀಪಾಕದಲ್ಲಿ, ಯಜ್ಞದಲ್ಲಿ, ಕರೆದಿಕ್ಕಿದ ಊಟದಲ್ಲಿ ಬ್ರಾಹ್ಮಣರು ಅವನನ್ನು ಉಣಗೊಡಿಸುವರೇನು ?"

"ಅದೂ ಇಲ್ಲ, ಭೋ ಗೌತಮ ?"

"ಆದರೆ ಬ್ರಾಹ್ಮಣರು ಅವನಿಗೆ ಮಂತ್ರ ಕಲಿಸುವರೋ ಇಲ್ಲವೋ ?"

"ಅದೂ ಇಲ್ಲ, ಭೋ ಗೌತಮ !"

"ಆದರೆ ಅವರ ಸ್ತ್ರೀಯರು ಅವನಿಗೆ ಆವೃತರೋ ಅನಾವೃತರೋ ?"

"ಅವನಿಗೆ ಆವೃತರೇ, ಭೋ ಗೌತಮ."

೨೭. "ಏನೆಂಬೆ ಅಂಬಷ್ಟ, ಇಲ್ಲಿ ಕ್ಷತ್ರಿಯರು ಯಾವುದಾದರೂ ಪ್ರಕರಣದಲ್ಲಿ ಒಬ್ಬ ಕ್ಷತ್ರಿಯನಿಗೆ ತಲೆ ಬೋಳಿಸಿ, ಬೂದಿ ಸುರಿದು, ರಾಷ್ಟ್ರದಿಂದಲೋ ನಗರದಿಂದಲೋ ಹೊರಗೆ ಕಳುಹಿಸುತ್ತಾರೆ. ಅವನಿಗೆ ಬ್ರಾಹ್ಮಣರಲ್ಲಿ ಆಸನವಾಗಲಿ, ಉದಕವಾಗಲಿ ಲಭಿಸುವುದೆ ?"

"ಲಭಿಸುವುದು, ಭೋ ಗೌತಮ !"

"ಆದರೆ ಶ್ರಾದ್ಧದಲ್ಲಿ, ಸ್ಥಾಲೀಪಾಕದಲ್ಲಿ, ಯಜ್ಞದಲ್ಲಿ, ಕರೆದಿಕ್ಕಿದ ಊಟದಲ್ಲಿ ಬ್ರಾಹ್ಮಣರು ಅವನನ್ನು ಉಣಗೊಡಿಸುವರೇನು ?"

"ಉಣಗೊಡಿಸುವರು, ಭೋ ಗೌತಮ !"

"ಆದರೆ ಬ್ರಾಹ್ಮಣರು ಅವನಿಗೆ ಮಂತ್ರ ಕಲಿಸುವರೋ ಇಲ್ಲವೋ ?"

"ಕಲಿಸುವರು, ಭೋ ಗೌತಮ !"

"ಆದರೆ ಅವರ ಸ್ತ್ರೀಯರು ಅವನಿಗೆ ಆವೃತರೋ ಅನಾವೃತರೋ ?"

"ಅವನಿಗೆ ಅನಾವೃತರೇ, ಭೋ ಗೌತಮ !"

---

[1] 'ಅಸ್ಸ ಪುಟೇನ ವಧಿತ್ವಾ'=ಬೂದಿಯ ಬುಟ್ಟಿಯಿಂದ **ಕೊಂದು**, ಬೂದಿ ಸುರಿದು, ಮಾನ **ಕಳೆದರೆ, ಕೊಂದಂತೆಯೆ.**

"ಆದರೆ ಅಂಬಷ್ಟ, ಕ್ಷತ್ರಿಯರು ತಲೆ ಬೋಳಿಸಿ, ಬೂದಿಸುರಿದು, ರಾಷ್ಟ್ರ ದಿಂದಲೋ ನಗರದಿಂದಲೋ ಹೊರಗೆ ಕಳುಹಿಸಿದಾಗಲೇ ಅಷ್ಟರಿಂದಲೇ ಕ್ಷತ್ರಿಯನು ಪರಮ ನಿಹೀನತೆ ಪಡೆಯುವನು. ಹೀಗೆ, ಅಂಬಷ್ಟ, ಕ್ಷತ್ರಿಯನು ಪರಮ ನಿಹೀನತೆ ಪಡೆದರೂ ಆಗಲೂ ಕ್ಷತ್ರಿಯರೇ ಶ್ರೇಷ್ಠರು, ಬ್ರಾಹ್ಮಣರು ಹೀನರು."

೨೮. "ಅಂಬಷ್ಟ, ಬ್ರಹ್ಮ ಸನತ್ಕುಮಾರನು ಕೂಡ ಈ ಗಾಹೆಗಳನ್ನು ನುಡಿದಿದ್ದಾನೆ—

'ಗೋತ್ರ ಹಿಡಿದು ಹೋಗುವ ಜನರ ನಡುವೆ ಕ್ಷತ್ರಿಯನು ಶ್ರೇಷ್ಠ,
ವಿದ್ಯಾಚರಣ[1]ಸಂಪನ್ನನು—ಅವನು ದೇವ ಮನುಷ್ಯರಲ್ಲಿ ಶ್ರೇಷ್ಠ.'

ಅಲ್ಲದೆ ಅಂಬಷ್ಟ, ಬ್ರಹ್ಮ ಸನತ್ಕುಮಾರನ ಆ ಗಾಹೆಗಳು ಸುಗೀತವಲ್ಲದೆ ದುರ್ಗೀತವಲ್ಲ, ಸುಭಾಷಿತವಲ್ಲದೆ ದುರ್ಭಾಷಿತವಲ್ಲ, ಅರ್ಥಸಂಹಿತವಲ್ಲದೆ ಅನರ್ಥಸಂಹಿತವಲ್ಲವೆಂದು ನನ್ನ ಮತ ಕೂಡ. ನಾನು ಕೂಡ ಅಂಬಷ್ಟ! ಹೀಗೆ ಹೇಳುವೆನು—

'ಗೋತ್ರ ಹಿಡಿದು ಹೋಗುವ ಜನರ ನಡುವೆ ಕ್ಷತ್ರಿಯನು ಶ್ರೇಷ್ಠ,
ವಿದ್ಯಾಚರಣಸಂಪನ್ನನು—ಅವನು ದೇವ ಮನುಷ್ಯರಲ್ಲಿ ಶ್ರೇಷ್ಠ.'

[ಮೊದಲ ಭಾಣವಾರ[2] ಮುಗಿಯಿತು.]

***

II. ೧. "ಮತ್ತೆ, ಭೋ ಗೌತಮ, ಆ ಚರಣವಾವುದು? ಆ ವಿದ್ಯೆ ಯಾವುದು?"

"ಅಂಬಷ್ಟ, ಅನುತ್ತರವಾದ ವಿದ್ಯಾಚರಣಸಂಪದಕ್ಕೆ 'ನೀನು ನನಗೆ ಅರ್ಹನು, ನೀನು ನನಗೆ ಅರ್ಹನಲ್ಲ' ಎಂದು ಜಾತಿವಾದ ಹೇಳುವುದಿಲ್ಲ, ಗೋತ್ರವಾದ ಹೇಳುವುದಿಲ್ಲ, ಮಾನವಾದ ಹೇಳುವುದಿಲ್ಲ. ಅಂಬಷ್ಟ, ಎಲ್ಲಿ ಆವಾಹ[3]ವಾಗುವುದು, ಎಲ್ಲಿ ವಿವಾಹ[3]ವಾಗುವುದು, ಎಲ್ಲಿ ಆವಾಹವಿವಾಹಗಳಾಗುವುದು, ಅಲ್ಲಿ 'ನೀನು ನನಗೆ ಅರ್ಹನು, ನೀನು ನನಗೆ ಅರ್ಹನಲ್ಲ' ಎಂದು ಜಾತಿವಾದ ಹೇಳುವರು, ಗೋತ್ರವಾದ ಹೇಳುವರು, ಮಾನವಾದ ಹೇಳುವರು. ಅಂಬಷ್ಟ, ಜಾತಿವಾದವಾಗಲಿ, ಗೋತ್ರವಾದ ವಾಗಲಿ, ಮಾನವಾದವಾಗಲಿ, ಆವಾಹವಿವಾಹಗಳಾಗಲಿ—ಇವುಗಳ ಪಿಸಿಬಂಧಕ್ಕೆ ಒಳಗಾದವರು ಅವರು ಅನುತ್ತರವಾದ ವಿದ್ಯಾಚರಣಸಂಪದಕ್ಕೆ ದೂರವಾದವರು. ಅಂಬಷ್ಟ, ಜಾತಿವಾದ, ಗೋತ್ರವಾದ, ಮಾನವಾದ, ಆವಾಹವಿವಾಹಗಳ ಪಿಸಿಬಂಧ

---

[1] ಶ್ರಾಮಣ್ಯ ಫಲ ಸೂತ್ರ § ೮೮ರ ಟಿಪ್ಪಣಿ ನೋಡಿ. [2] ಮುಖಪಾಠಕ್ಕೆ ಅನುಕೂಲ ವಾಗುವಂತೆ ವಿಂಗಡಿಸಿದ ಸೂತ್ರಭಾಗ. [3] ಹೆಣ್ಣು ಕೊಟ್ಟು ತರುವುದು.

ಗಳನ್ನು ಬಿಟ್ಟರೆ ಅನುತ್ತರವಾದ ವಿದ್ಯಾಚರಣಸಂಪದವು ಸಾಕ್ಷಾತ್ಕಾರವಾಗುವುದು."

೨. "ಆದರೆ ಭೋ ಗೌತಮ, ಆ ಚರಣವಾವುದು? ಆ ವಿದ್ಯೆಯಾವುದು?"

"ಇಲ್ಲಿ, ಅಂಬಷ್ಟ, ಅರ್ಹನೂ ಸಮ್ಯಕ್ಸಂಬುದ್ಧನೂ . . . [ಎಂದು ಶ್ರಾಮಣ್ಯ ಫಲ ಸೂತ್ರದಲ್ಲಿನ § ೪೦-೬೩ ಪೂರ್ತಿ ಪುನರುಕ್ತ] . . . ಭಿಕ್ಷುವು ಹೀಗೆ ಶೀಲಸಂಪನ್ನನಾಗುವನು, ಅಂಬಷ್ಟ !

"ಇಲ್ಲಿ, ಅಂಬಷ್ಟ, ಭಿಕ್ಷುವು ಹೇಗೆ ಶೀಲಸಂಪನ್ನನಾಗಿ . . . [ಎಂದು ಶ್ರಾಮಣ್ಯ ಫಲ ಸೂತ್ರದಲ್ಲಿನ § ೬೩—ಭಯರಾಹಿತ್ಯ, § ೬೪—ಇಂದ್ರಿಯದ್ವಾರಗೋಪನ, § ೬೫—ಸ್ಮೃತಿ ಸಂಪ್ರಜಾನ್ಯ, § ೬೬—ಸಂತುಷ್ಟಿ, § ೬೭—ವಿವೇಕ, § ೬೮-೭೪—ಪಂಚನೀವರಣ ಅತಿಕ್ರಮ—ಇವುಗಳ ಪುನರುಕ್ತ, ಮತ್ತು § ೭೫-೮೨—ಧ್ಯಾನಚತುಷ್ಟಯ ಆದರೆ ಪ್ರತಿಧ್ಯಾನದ ಕೊನೆಯಲ್ಲಿ 'ಮೇಲಾದ ಸಿಹಿಯಾದ ಶ್ರಾಮಣ್ಯ ಫಲ'ಕ್ಕೆ ಬದಲು 'ಹಿಂದಿನದಕ್ಕಿಂತ ಮೇಲಾದ ಸಿಹಿಯಾದ ಚರಣ' ಎಂದು ಓದಿಕೊಳ್ಳಬೇಕು] . . . ಅಂಬಷ್ಟ, ಇವು ಅವನ ಚರಣ.

"ಇಲ್ಲಿ, ಅಂಬಷ್ಟ, ಹೀಗೆ ಚಿತ್ತವು ಸಮಾಹಿತವಾಗಿ, . . . [ಎಂದು ಶ್ರಾಮಣ್ಯ ಫಲ ಸೂತ್ರದಲ್ಲಿನ § ೮೩-೮೪—ಜ್ಞಾನದರ್ಶನ, § ೮೫-೮೬—ಮನೋಮಯಕಾಯ ನಿರ್ಮಾಣ, § ೮೭-೮೮—ಋದ್ಧಿವಿಧ, § ೮೯-೯೦—ದಿವ್ಯಶ್ರೋತ್ರ, § ೯೧-೯೨—ಚೇತೋಪರಿಯ ಜ್ಞಾನ, § ೯೩-೯೪—ಪೂರ್ವನಿವಾಸಾನುಸ್ಮೃತಿ ಜ್ಞಾನ—§ ೯೫-೯೬—ಸತ್ತ್ವಗಳ ಚ್ಯುತೋಪಪಾತ ಜ್ಞಾನ, § ೯೭-೯೮—ಆಸ್ರವಕ್ಷಯ ಜ್ಞಾನ—ಇವುಗಳ ಪುನರುಕ್ತ. ಪ್ರತಿಯೊಂದರ ಕೊನೆಯಲ್ಲಿ 'ಇದು ಅವನ ವಿದ್ಯೆಯಾಗುವುದು. ಇದು ಹಿಂದಿನದಕ್ಕಿಂತ ಮೇಲಾದುದು, ಸಿಹಿಯಾದುದು' ಎಂದು ಓದಿಕೊಳ್ಳಬೇಕು.] . . . ಅಂಬಷ್ಟ, ಇವು ಅವನ ವಿದ್ಯೆ.

"ಆ ಭಿಕ್ಷುವನ್ನು, ಅಂಬಷ್ಟ, ವಿದ್ಯಾಸಂಪನ್ನನೆಂದು, ಚರಣಸಂಪನ್ನನೆಂದು, ವಿದ್ಯಾಚರಣಸಂಪನ್ನನೆಂದು ಹೇಳುವರು. ಅಂಬಷ್ಟ, ಈ ವಿದ್ಯಾಚರಣಸಂಪದಕ್ಕೆ ಮೇಲಾದ ಸಿಹಿಯಾದ ಬೇರೆ ವಿದ್ಯಾಸಂಪದವಿಲ್ಲ, ಚರಣ ಸಂಪದವಿಲ್ಲ.

೩. "ಅಂಬಷ್ಟ, ಈ ಅನುತ್ತರವಾದ ವಿದ್ಯಾಚರಣಸಂಪದಕ್ಕೆ ನಾಲ್ಕು ಅಪಾಯಮುಖ[1]ಗಳುಂಟು. ನಾಲ್ಕಾವುದು?

"ಇಲ್ಲಿ, ಅಂಬಷ್ಟ, ಯಾವನಾದರೂ ಶ್ರಮಣನೋ ಬ್ರಾಹ್ಮಣನೋ ಈ ಅನುತ್ತರವಾದ ವಿದ್ಯಾಚರಣಸಂಪದವನ್ನು ಚೆನ್ನಾಗಿ ಪಡೆಯದೆ, [2]ಖಾರಿ ವಿಧ[2]ವನ್ನು

---

[1] ವಿದ್ಯಾಚರಣ ಸಂಪದವು ಸಿದ್ಧಿಯಾಗದಂತೆ, ಮಾಡುವ ಪ್ರಯತ್ನವು ಬೇರೆ ಕಡೆಗೆ ಹರಿದು ಹೋಗುವ ದಾರಿಗಳು. [2] ಖಾರಿ ಎಂದರೆ ಅರಣಿ, ಕಮಂಡಲು, ಸೂಜಿ ಮೊದಲಾದ ತಾಪಸ ಪರಿಷ್ಕಾರ; ವಿಧ ಎಂದರೆ ಅಡ್ಡೆ. ಖಾರಿವಿಧ ಎಂದರೆ ಮೇಲೆ ಹೇಳಿದ ತಾಪಸ ಪರಿಷ್ಕಾರಗಳು ತುಂಬಿದ ಅಡ್ಡೆ.

ಕೊಂಡು, 'ಬಿದ್ದ ಹಣ್ಣು ತಿನ್ನುವವನಾಗುವೆನು' ಎಂದು ಅರಣ್ಯಾವಸವನ್ನು ಹೊಗುವನು. ಅವನು ವಿದ್ಯಾಚರಣಸಂಪನ್ನರ ಪರಿಚಾರಕನಾಗುವನಲ್ಲದೆ ಬೇರೆಯಲ್ಲ. ಈ ಅನುತ್ತರವಾದ ವಿದ್ಯಾಚರಣಸಂಪದಕ್ಕೆ ಇದು ಮೊದಲ ಅಪಾಯಮುಖವಾಗುವುದು, ಅಂಬಷ್ಟ!

"ಅಲ್ಲದೆ, ಪುನಃ, ಅಂಬಷ್ಟ, ಇಲ್ಲಿ, ಯಾವನಾದರೂ ಶ್ರಮಣನೋ ಬ್ರಾಹ್ಮಣನೋ ಈ ಅನುತ್ತರವಾದ ವಿದ್ಯಾಚರಣಸಂಪದವನ್ನು ಚೆನ್ನಾಗಿ ಪಡೆಯದೆ, ಬಿದ್ದ ಹಣ್ಣು ತಿನ್ನುವುದನ್ನೂ ಚೆನ್ನಾಗಿ ಸಾಧಿಸದೆ, [1]ಕುದ್ದಾಲಪಿಟಕ[1]ಗಳನ್ನು ಕೊಂಡು, 'ಕಂದ ಮೂಲ ಫಲಗಳನ್ನು ತಿನ್ನುವವನಾಗುವೆನು' ಎಂದು ಅರಣ್ಯಾವಸವನ್ನು ಹೊಗುವನು. ಅವನು ವಿದ್ಯಾಚರಣಸಂಪನ್ನರ ಪರಿಚಾರಕನಾಗುವನಲ್ಲದೆ ಬೇರೆಯಲ್ಲ. ಈ ಅನುತ್ತರವಾದ ವಿದ್ಯಾಚರಣಸಂಪದಕ್ಕೆ ಇದು ಎರಡನೆಯ ಅಪಾಯಮುಖವಾಗುವುದು, ಅಂಬಷ್ಟ!

"ಅಲ್ಲದೆ ಪುನಃ, ಅಂಬಷ್ಟ, ಇಲ್ಲಿ, ಯಾವನಾದರೂ ಶ್ರಮಣನೋ ಬ್ರಾಹ್ಮಣನೋ ಈ ಅನುತ್ತರವಾದ ವಿದ್ಯಾಚರಣಸಂಪದವನ್ನು ಚೆನ್ನಾಗಿ ಪಡೆಯದೆ, ಬಿದ್ದ ಹಣ್ಣು ತಿನ್ನುವುದನ್ನೂ ಚೆನ್ನಾಗಿ ಸಾಧಿಸದೆ, ಕಂದ ಮೂಲ ಫಲ ತಿನ್ನುವುದನ್ನೂ ಚೆನ್ನಾಗಿ ಸಾಧಿಸದೆ, ಗ್ರಾಮಸಮೀಪದಲ್ಲೋ ನಿಗಮಸಮೀಪದಲ್ಲೋ ಅಗ್ನ್ಯಗಾರಮಾಡಿಕೊಂಡು ಅಗ್ನಿ ಪರಿಚರ್ಯೆಮಾಡಿಕೊಂಡಿರುವನು. ಅವನು ವಿದ್ಯಾಚರಣಸಂಪನ್ನರ ಪರಿಚಾರಕನಾಗುವನಲ್ಲದೆ ಬೇರೆಯಲ್ಲ. ಈ ಅನುತ್ತರವಾದ ವಿದ್ಯಾಚರಣಸಂಪದಕ್ಕೆ ಇದು ಮೂರನೆಯ ಅಪಾಯಮುಖವಾಗುವುದು, ಅಂಬಷ್ಟ!

"ಅಲ್ಲದೆ ಪುನಃ, ಅಂಬಷ್ಟ, ಇಲ್ಲಿ, ಯಾವನಾದರೂ ಶ್ರಮಣನೋ ಬ್ರಾಹ್ಮಣನೋ ಈ ಅನುತ್ತರವಾದ ವಿದ್ಯಾಚರಣಸಂಪದವನ್ನು ಚೆನ್ನಾಗಿ ಪಡೆಯದೆ, ಬಿದ್ದ ಹಣ್ಣು ತಿನ್ನುವುದನ್ನೂ ಚೆನ್ನಾಗಿ ಸಾಧಿಸದೆ, ಕಂದ ಮೂಲ ಫಲ ತಿನ್ನುವುದನ್ನೂ ಚೆನ್ನಾಗಿ ಸಾಧಿಸದೆ, ಅಗ್ನಿ ಪರಿಚರ್ಯೆಯನ್ನೂ ಚೆನ್ನಾಗಿ ಸಾಧಿಸದೆ, ನಾಲ್ಕು ಮಹಾಪಥದೆಡೆಯಲ್ಲಿ ನಾಲ್ಕುದ್ವಾರದ ಮನೆಮಾಡಿ, 'ಈ ನಾಲ್ಕು ದೆಸೆಗಳಿಂದ ಬರುವ ಶ್ರಮಣರನ್ನಾಗಲಿ, ಬ್ರಾಹ್ಮಣರನ್ನಾಗಲಿ ನಾನು ಯಥಾಶಕ್ತಿಯಿಂದ, ಯಥಾಬಲದಿಂದ ಪ್ರತಿಪೂಜಿಸುವೆನು' ಎಂದು ವಾಸಿಸುವನು. ಅವನು ವಿದ್ಯಾಚರಣಸಂಪನ್ನರ ಪರಿಚಾರಕನಾಗುವನಲ್ಲದೆ ಬೇರೆಯಲ್ಲ. ಈ ಅನುತ್ತರವಾದ ವಿದ್ಯಾಚರಣಸಂಪದಕ್ಕೆ ಇದು ನಾಲ್ಕನೆಯ ಅಪಾಯಮುಖವಾಗುವುದು, ಅಂಬಷ್ಟ!"

---

[1] ಕಂದ ಮೂಲ ಫಲಗಳನ್ನು ಕೀಳುವ ಆಯುಧವು ಕುದ್ದಾಲ. ಅದನ್ನು ಹಾಕುವ ಬುಟ್ಟಿಯೇ ಪಿಟಕ.

"ಅಂಬಷ್ಟ, ಈ ಅನುತ್ತರವಾದ ವಿದ್ಯಾಚರಣಸಂಪದಕ್ಕೆ ಈ ನಾಲ್ಕು ಅಪಾಯ ಮುಖಗಳಾಗುವುವು."

೪. "ಮತ್ತೆ, ಏನೆಂಬೆ ಅಂಬಷ್ಟ, ಈ ಅನುತ್ತರವಾದ ವಿದ್ಯಾಚರಣಸಂಪದ ವನ್ನು ಆಚಾರ್ಯನೊಡಗೂಡಿ ನೀನು ಕಂಡಿರುವೆಯೇನು ?"

"ಇಲ್ಲ, ಭೋ ಗೌತಮ, ಆಚಾರ್ಯನೊಡಗೂಡಿ ನಾನೆಲ್ಲಿ ? ಅನುತ್ತರವಾದ ವಿದ್ಯಾಚರಣಸಂಪದವೆಲ್ಲಿ ? ಆಚಾರ್ಯನೊಡಗೂಡಿ ನಾನು ಅನುತ್ತರವಾದ ವಿದ್ಯಾ ಚರಣಸಂಪದಕ್ಕೆ ದೂರವಾದವನು."

"ಹಾಗಾದರೆ, ಏನೆಂಬೆ ಅಂಬಷ್ಟ, ಈ ಅನುತ್ತರವಾದ ವಿದ್ಯಾಚರಣಸಂಪದ ವನ್ನು ನೀನು ಪಡೆಯದಿದ್ದರೂ, ಖಾರವಿಧವನ್ನು ಕೊಂಡು, 'ಆಚಾರ್ಯನೊಡನೆ ಬಿದ್ದ ಹಣ್ಣು ತಿನ್ನುವವನಾಗುವೆನು' ಎಂದು ಅರಣ್ಯವನವನ್ನು ಪ್ರವೇಶಿಸಿರುವೆಯ?"

"ಅದೂ ಇಲ್ಲ, ಭೋ ಗೌತಮ !"

"ಹಾಗಾದರೆ, ಏನೆಂಬೆ ಅಂಬಷ್ಟ, ಈ ಅನುತ್ತರವಾದ ವಿದ್ಯಾಚರಣಸಂಪದ ವನ್ನು ನೀನು ಪಡೆಯದಿದ್ದರೂ, ಬಿದ್ದ ಹಣ್ಣು ತಿನ್ನುವುದನ್ನು ಸಾಧಿಸದಿದ್ದರೂ, ಕುದ್ದಾಲ ಪಿಟಕಗಳನ್ನು ಕೊಂಡು, 'ಆಚಾರ್ಯನೊಡನೆ ಕಂದ ಮೂಲ ಫಲ ತಿನ್ನುವವನಾಗುವೆನು' ಎಂದು ಅರಣ್ಯವನವನ್ನು ಪ್ರವೇಶಿಸಿರುವೆಯ ?"

"ಅದೂ ಇಲ್ಲ, ಭೋ ಗೌತಮ !"

"ಹಾಗಾದರೆ, ಏನೆಂಬೆ ಅಂಬಷ್ಟ, ಈ ಅನುತ್ತರವಾದ ವಿದ್ಯಾಚರಣಸಂಪದ ವನ್ನು ನೀನು ಪಡೆಯದಿದ್ದರೂ, ಬಿದ್ದ ಹಣ್ಣು ತಿನ್ನುವುದನ್ನು ಸಾಧಿಸದಿದ್ದರೂ, ಕಂದ ಮೂಲ ಫಲ ತಿನ್ನುವುದನ್ನು ನೆರವೇರಿಸದಿದ್ದರೂ, ಗ್ರಾಮಸಮೀಪದಲ್ಲೋ ನಿಗಮ ಸಮೀಪದಲ್ಲೋ ಅಗ್ನ್ಯಾಗಾರವಮಾಡಿಕೊಂಡು ಆಚಾರ್ಯನೊಡನೆ ಅಗ್ನಿ ಪರಿ ಚರ್ಯೆಮಾಡಿರುವೆಯೇನು ?"

"ಅದೂ ಇಲ್ಲ, ಭೋ ಗೌತಮ !"

"ಹಾಗಾದರೆ, ಏನೆಂಬೆ ಅಂಬಷ್ಟ, ಈ ಅನುತ್ತರವಾದ ವಿದ್ಯಾಚರಣಸಂಪದ ವನ್ನು ನೀನು ಪಡೆಯದಿದ್ದರೂ, ಬಿದ್ದ ಹಣ್ಣು ತಿನ್ನುವುದನ್ನು ನೀನು ಸಾಧಿಸದಿದ್ದರೂ, ಕಂದ ಮೂಲ ಫಲ ತಿನ್ನುವುದನ್ನು ನೀನು ನೆರವೇರಿಸದಿದ್ದರೂ, ಅಗ್ನಿ ಪರಿಚರ್ಯೆಯನ್ನು ನಡೆಸದಿದ್ದರೂ, 'ಈ ನಾಲ್ಕು ದೆಸೆಗಳಿಂದ ಬರುವ ಶ್ರಮಣರನ್ನಾಗಲಿ, ಬ್ರಾಹ್ಮಣ ರನ್ನಾಗಲಿ ಯಥಾಶಕ್ತಿಯಿಂದ, ಯಥಾಬಲದಿಂದ ನಾನು ಪ್ರತಿಪೂಜಿಸುವೆನು' ಎಂದು ನಾಲ್ಕು ಮಹಾಪಥವಿರುವೆಡೆ ನಾಲ್ಕುದ್ವಾರದ ಮನೆಮಾಡಿ ಆಚಾರ್ಯ ನೊಡನೆ ವಾಸಿಸಿರುವೆಯ ?"

"ಅದೂ ಇಲ್ಲ, ಭೋ ಗೌತಮ!"

೫೯. "ಹೀಗೆ ಅಂಬಷ್ಟ, ಈ ಅನುತ್ತರವಾದ ವಿದ್ಯಾಚರಣಸಂಪದದಲ್ಲಿ ಆಚಾರ್ಯನೊಡಗೂಡಿ ನೀನು ಪರಿಹೀನಕನು.[1] ಅನುತ್ತರವಾದ ವಿದ್ಯಾಚರಣ ಸಂಪದಕ್ಕೆ ಸಂಭವಿಸುವ ನಾಲ್ಕು ಅಪಾಯಮುಖಗಳಲ್ಲಿ ಕೂಡ ಆಚಾರ್ಯನೊಡ ಗೂಡಿ ನೀನು ಪರಿಹೀನಕನು. ಆದರೂ ಅಂಬಷ್ಟ, ಆಚಾರ್ಯ ಬ್ರಾಹ್ಮಣ ಪೌಷ್ಕರಸಾದಿಯು ತಾನು ಈ ಅಪಾಯಮುಖಗಳನ್ನೇ ಪರಿಪೂರ್ಣಗೊಳಿಸದಿದ್ದರೂ 'ಈ ಮುಂಡಕರು, ಶ್ರಮಣಕರು, ಇಭ್ಯರು, ಕೃಷ್ಣರು, ಬಂಧುಪಾದಾಪತ್ಯರು— ಇವರೆಲ್ಲಿ? ತ್ರೈವಿದ್ಯಬ್ರಾಹ್ಮಣರೊಡನೆ ಸಂಭಾಷಣೆಯೆಲ್ಲಿ?' ಎಂದು ನಿನಗೆ ಹೇಳಿರು ವನು. ನೋಡು, ಅಂಬಷ್ಟ, ಆಚಾರ್ಯ ಬ್ರಾಹ್ಮಣ ಪೌಷ್ಕರಸಾದಿಯು ನಿನಗೆ ಮಾಡಿರುವುದು ಎಷ್ಟು ಅಪರಾಧ!

೬೦. "ಅಲ್ಲದೆ, ಅಂಬಷ್ಟ, ಬ್ರಾಹ್ಮಣ ಪೌಷ್ಕರಸಾದಿಯು ಕೋಸಲದ ರಾಜ ಪ್ರಸೇನಜಿತನ ದತ್ತಿಕವನ್ನು ಉಣ್ಣುತ್ತಾನೆ. ಕೋಸಲದ ರಾಜ ಪ್ರಸೇನಜಿತನು ಅವನನ್ನು ಎದುರಿಗೂ ಬರಗೊಡನು. ಅವನೊಡನೆ ಮಂತಣ ನಡೆಸುವಾಗ, ಬಟ್ಟೆಯ ಹಿಂದಿನಿಂದ ಅವನೊಡನೆ ಮಂತಣ ನಡೆಸುವನು. ಯಾರ ಧಾರ್ಮಿಕವೂ ಶುದ್ಧವೂ ಆದ ಭಿಕ್ಷವನ್ನು ಪ್ರತಿಗ್ರಹಿಸುತ್ತಾನೋ ಆ ಕೋಸಲದ ರಾಜ ಪ್ರಸೇನಜಿತನು ಅವನನ್ನು ಎದುರಿಗೂ ಬರಗೊಡನೇಕೆ, ಅಂಬಷ್ಟ? ನೋಡು, ಅಂಬಷ್ಟ, ಆಚಾರ್ಯ ಬ್ರಾಹ್ಮಣ ಪೌಷ್ಕರಸಾದಿಯು ನಿನಗೆ ಮಾಡಿರುವುದು ಎಷ್ಟು ಅಪರಾಧ?[2]

೬೧. "ಮತ್ತೆ, ಏನೆಂಬೆ ಅಂಬಷ್ಟ, ಇಲ್ಲಿ, ಕೋಸಲದ ರಾಜ ಪ್ರಸೇನಜಿತನು ಆನೆಯ ಕತ್ತಿನ ಮೇಲೆ ಕುಳಿತೋ, ಇಲ್ಲ ಕುದುರೆಯ ಬೆನ್ನ ಮೇಲೆ ಕುಳಿತೋ, ರಥೋಪಸ್ತರದ ಮೇಲೆ ನಿಂತೋ, ಉಗ್ರ[3]ರೊಡನೆಯೋ ರಾಜನ್ಯ[4]ರೊಡನೆಯೋ ಏನಾದರೂ ಮಂತಣಮಾಡುವನು. ಅವನು ಆ ಪ್ರದೇಶದಿಂದ ಹೊರಟು ಒಂದು ಕಡೆ ನಿಲ್ಲಲು, ಅಲ್ಲಿ ಒಬ್ಬ ಶೂದ್ರನೋ ಶೂದ್ರದಾಸನೋ ಬರುವನು. ಅವನು ಆ ಪ್ರದೇಶ ದಲ್ಲಿ ನಿಂತು—'ಕೋಸಲದ ರಾಜ ಪ್ರಸೇನಜಿತನು ಹೀಗೆ ಹೇಳಿದನು' ಎಂದು ಅದೇ ಮಂತಣ ನಡೆಸುವನು. ಆದರೂ ಅವನು ರಾಜನೆಂದುದನ್ನೇ ಎನ್ನಲಿ, ರಾಜನ ಮಂತಣವನ್ನೇ ನಡೆಸಲಿ; ಅಷ್ಟರಿಂದ ಅವನು ರಾಜನೆ? ರಾಜಸಮಾನನೆ?"

---

[1] ಮಾಡಿದುದರಲ್ಲಿ ಪರಿಪೂರ್ಣತೆ ಪಡೆಯದವನು. [2] ಕ್ಷತ್ರಿಯನಾದ ಕೋಸಲದರಸು ಮಹಾ ಬ್ರಾಹ್ಮಣನಾದ ತನ್ನನ್ನು ಎಷ್ಟು ಕಡೆಗಣಿಸುತ್ತಿರುವನೆಂಬುದನ್ನು ಅಂಬಷ್ಟನಿಗೆ ತಿಳಿಸದಿದ್ದುದೇ ಪೌಷ್ಕರಸಾದಿಯ ಅಪರಾಧ. [3] ರಾಜ್ಯದ ದೊಡ್ಡ ಅಧಿಕಾರಿ. [4] ಇನ್ನೂ ಅಭಿಷೇಕವಿಲ್ಲದ ಕುಮಾರರು.

“ ಖಂಡಿತ ಇಲ್ಲ, ಭೋ ಗೌತಮ ! ”

೮. “ ಅದರಂತೆಯೇ, ಅಂಬಷ್ಟ, ನೀನು ‘ ಯಾರ ಗೀತ ಪ್ರವಾಚಿತ ಸಂಹಿತೆಗಳಾದ ಪುರಾತನ ಮಂತ್ರ ಪದಗಳನ್ನು ಈಗಿನ ಬ್ರಾಹ್ಮಣರು ಅನುಗಾಯನಮಾಡಿ ಅನುಭಾಷಣಮಾಡಿ, ಭಾಷಿಸಿದಂತೆ ಅನುಭಾಷಿಸಿ, ವಾಚಿಸಿದಂತೆ ಅನುವಾಚಿಸುವರೋ ; ಆ ಪೂರ್ವದ ಬ್ರಾಹ್ಮಣ ಋಷಿಗಳು, ಆ ಮಂತ್ರಕರ್ತರು, ಆ ಮಂತ್ರಪ್ರವಕ್ತರು ; ಎಂದರೆ [1]ಅಷ್ಟಕ, ವಾಮಕ, ವಾಮದೇವ, ವಿಶ್ವಾಮಿತ್ರ, ಜಮದಗ್ನಿ, ಅಂಗಿರಸ, ಭಾರದ್ವಾಜ, ವಾಸಿಷ್ಠ, ಕಶ್ಯಪ, ಭೃಗು[1]—ಅವರು ; ಅವರ ಮಂತ್ರಗಳನ್ನು ಆಚಾರ್ಯನೊಡಗೂಡಿ ನಾನು ಅಧ್ಯಯನಮಾಡಿರುವೆನು ’ ಎಂದು ನುಡಿದಷ್ಟರಿಂದ ಋಷಿಯಾಗುವುದು, ಋಷಿತ್ವ ಪಡೆವುದು—ಅಂತಹ ಸ್ಥಿತಿ ಇಲ್ಲ !

೯. “ ಏನೆಂಬೆ, ಅಂಬಷ್ಟ, ವೃದ್ಧ ಬ್ರಾಹ್ಮಣರೂ ಮಹಾ ಆರ್ಯಕರಾದ ನಿನ್ನ ಆಚಾರ್ಯ ಪ್ರಾಚಾರ್ಯರೂ ಮಾತನಾಡುವಾಗ ನೀನೇನು ಕೇಳಿರುವೆ? ಯಾರ ಗೀತಪ್ರವಾಚಿತ ಸಂಹಿತೆಗಳಾದ ಪುರಾತನ ಮಂತ್ರಪದಗಳನ್ನು ಈಗಿನ ಬ್ರಾಹ್ಮಣರು ಅನುಗಾಯನಮಾಡಿ, ಅನುಭಾಷಣಮಾಡಿ, ಭಾಷಿಸಿದಂತೆ ಅನುಭಾಷಿಸಿ, ವಾಚಿಸಿದಂತೆ ಅನುವಾಚಿಸುವರೋ ; ಆ ಪೂರ್ವದ ಬ್ರಾಹ್ಮಣ ಋಷಿಗಳು, ಆ ಮಂತ್ರಕರ್ತರು, ಆ ಮಂತ್ರ ಪ್ರವಕ್ತರು ; ಎಂದರೆ ಅಷ್ಟಕ, ವಾಮಕ, ವಾಮದೇವ, ವಿಶ್ವಾಮಿತ್ರ, ಜಮದಗ್ನಿ, ಅಂಗಿರಸ, ಭಾರದ್ವಾಜ, ವಾಸಿಷ್ಠ, ಕಶ್ಯಪ, ಭೃಗು—ಅವರು ; ಅವರು ಹೀಗೆಯೇ ಚೆನ್ನಾಗಿ ಸ್ನಾನಮಾಡಿ, ಲೇಪಿಸಿಕೊಂಡು, ಕೂದಲು ಗಡ್ಡಗಳನ್ನು ಶೃಂಗರಿಸಿ, ಮಾಲ್ಯಾಭರಣಗಳನ್ನು ಧರಿಸಿ ಬಿಳಿಯ ಬಟ್ಟೆಗಳನ್ನುಟ್ಟು, ಪಂಚಕಾಮಗುಣಗಳಿಂದ ಕೂಡಿ ಅದರಲ್ಲಿ ಲೀನರಾಗಿದ್ದರೇನು ?—ಹೀಗೆ, ಆಚಾರ್ಯನೊಡಗೂಡಿ ನೀನಿರುವಂತೆ ? ”

“ ಅದೂ ಇಲ್ಲ, ಭೋ ಗೌತಮ ! ”

೧೦. “ ಇಲ್ಲ, ಅವರು ಹೀಗೆಯೇ, ಕಪ್ಪು ಆರಿಸಿ ತೆಗೆದ ಶಾಲ್ಯನ್ನವನ್ನೂ ಅನೇಕ ಸೂಪವ್ಯಂಜನಗಳನ್ನೂ ಪರಿಭುಂಜಿಸುತ್ತಿದ್ದರೇನು ?—ಹೀಗೆ, ಆಚಾರ್ಯನೊಡಗೂಡಿ ನೀನಿರುವಂತೆ ? ”

“ ಅದೂ ಇಲ್ಲ, ಭೋ ಗೌತಮ ! ”

“ ಇಲ್ಲ, ಅವರು ಹೀಗೆಯೇ, [2]ವೇಷ್ಟಕ—ನತ—ಪಾರ್ಶ್ವ[2]ಗಳ ನಾರಿಯರಿಂದ ಪರಿಚರ್ಯೆಗೊಳ್ಳುತ್ತಿದ್ದರೇನು ?—ಹೀಗೆ, ಆಚಾರ್ಯನೊಡಗೂಡಿ ನೀನಿರುವಂತೆ ? ”

---

[1] ‘ ಅಟ್ಠಕೊ, ವಾಮಕೊ, ವಾಮದೇವೊ, ವೆಸ್ಸಾಮಿತ್ತೊ, ಯಮತಗ್ಗಿ, ಅಙ್ಗೀರಸೊ, ಭಾರದ್ವಾಜೊ, ವಾಸೆಟ್ಠೊ, ಕಸ್ಸಪೊ, ಭಗು.’ [2] ಹಳೆಯ ಚಿತ್ರಗಳಲ್ಲೂ ಶಿಲ್ಪಗಳಲ್ಲೂ ನಾರಿಯರ ನಡುವಿನಲ್ಲಿ ಕಾಣಬಹುದಾದ ವಿಶೇಷಾಭರಣ ಈ ವೇಷ್ಟಕ.

"ಅದೂ ಇಲ್ಲ, ಭೋ ಗೌತಮ!"

"ಇಲ್ಲ, ಅವರು ಹೀಗೆಯೇ, ಕೃತ್ರವಾಲ[1]ದ ಬಡಬಾರಥದಲ್ಲಿ, ಉದ್ದವಾದ ಚುಚ್ಚುಗೋಲಿನಿಂದ ವಾಹನವನ್ನು ಬಡಿದು ತಿರುಗುತ್ತಿದ್ದರೇನು?—ಹೀಗೆ, ಆಚಾರ್ಯನೊಡಗೂಡಿ ನೀನಿರುವಂತೆ?"

"ಅದೂ ಇಲ್ಲ, ಭೋ ಗೌತಮ!"

"ಇಲ್ಲ, ಅವರು ಹೀಗೆಯೇ, ಅಗಳು ತೆಗೆದು, ಅಡ್ಡಮರಗಳನ್ನು ಕೆಳಬಿಟ್ಟು, ಉದ್ದ ಕತ್ತಿ ಬಿಗಿದ ಪುರುಷರ ನಗರ ರಕ್ಷಣೆಯಿಂದ ರಕ್ಷಿಸಿಕೊಳ್ಳುತ್ತಿದ್ದರೇನು?—ಹೀಗೆ, ಆಚಾರ್ಯನೊಡಗೂಡಿ ನೀನಿರುವಂತೆ?"

"ಅದೂ ಇಲ್ಲ, ಭೋ ಗೌತಮ!"

"ಹೀಗೆ, ಅಂಬಷ್ಟ, ಆಚಾರ್ಯನೊಡಗೂಡಿ ನೀನು ಋಷಿಯಲ್ಲ, ಋಷಿತ್ವ ಪಡೆದಿಲ್ಲ. ಅಂಬಷ್ಟ, ನನ್ನನ್ನು ಕುರಿತು ಏನಾದರೂ ಸಂದೇಹ ಸಂಶಯಗಳಿದ್ದರೆ, ಪ್ರಶ್ನಿಸು; ನಾನು ವಿವರಣೆಯಿಂದ ಬೆಳಗಿಸುವೆನು."

೧೧. ಆಗ ಭಗವಾನನು ವಿಹಾರದಿಂದ ಹೊರಬಿದ್ದು, ಅತ್ತಿಂದಿತ್ತ ತಿರುಗಲು ಮೊದಲು ಮಾಡಿದನು. ಮಾಣವ ಅಂಬಷ್ಟನೂ ವಿಹಾರದಿಂದ ಹೊರಬಿದ್ದು, ಅತ್ತಿಂದಿತ್ತ ತಿರುಗಲು ಮೊದಲು ಮಾಡಿದನು. ಆಗ ಮಾಣವ ಅಂಬಷ್ಟನು, ತಿರುಗುವ ಭಗವಾನನ ಹಿಂದೆ ತಿರುಗಿ, ಭಗವಂತನ ದೇಹದಲ್ಲಿ ಮೂವತ್ತೆರಡು ಮಹಾಪುರುಷ ಲಕ್ಷಣಗಳನ್ನು ಗಮನಿಸಿದನು. ಮಾಣವ ಅಂಬಷ್ಟನು ಭಗವಂತನ ದೇಹದ ಮೂವತ್ತೆರಡು ಮಹಾಪುರುಷ ಲಕ್ಷಣಗಳಲ್ಲಿ ಎರಡುಳಿದು ಎಲ್ಲವನ್ನೂ ಕಂಡನು; ಕೋಶದಲ್ಲಿನ ವಸ್ತ್ರಗುಹ್ಯ[2], ನಾಲಗೆಯ ಉದ್ದ[3]—ಈ ಎರಡು ಮಹಾಪುರುಷ ಲಕ್ಷಣಗಳಲ್ಲಿ ಸಂದೇಹಪಟ್ಟನು, ಸಂಶಯಪಟ್ಟನು; ತೃಪ್ತನಾಗಲಿಲ್ಲ. ಪ್ರಸನ್ನನಾಗಲಿಲ್ಲ.

೧೨. ಆಗ ಭಗವಾನನಿಗೆ ಹೀಗೆನ್ನಿಸಿತು—"ಈ ಮಾಣವ ಅಂಬಷ್ಟನು ಎರಡುಳಿದ ಮೂವತ್ತೆರಡು ಮಹಾಪುರುಷ ಲಕ್ಷಣಗಳನ್ನು ನನ್ನಲ್ಲಿ ಕಾಣುವನು; ಕೋಶದಲ್ಲಿನ ವಸ್ತ್ರಗುಹ್ಯ, ನಾಲಗೆಯ ಉದ್ದ—ಈ ಎರಡು ಮಹಾಪುರುಷ ಲಕ್ಷಣಗಳಲ್ಲಿ ಸಂದೇಹಪಡುವನು, ಸಂಶಯಪಡುವನು; ತೃಪ್ತನಾಗಿಲ್ಲ, ಪ್ರಸನ್ನನಾಗಿಲ್ಲ."

ಆಗ ಭಗವಾನನು, ಭಗವಂತನ ಕೋಶದಲ್ಲಿನ ವಸ್ತ್ರಗುಹ್ಯವನ್ನು ಮಾಣವ ಅಂಬಷ್ಟನು ಕಾಣುವ ರೀತಿಯಲ್ಲಿ ಋದ್ಧಿಶಕ್ತಿಯನ್ನು ಪ್ರಯೋಗಿಸಿದನು. ಆಗ ಭಗ

---

[1] ಕುದುರೆಗಳ ಕತ್ತಿನ ಮತ್ತು ಬಾಲದ ಕೂದಲುಗಳನ್ನು ತೆರತೆರನಾಗಿ ಹೆಣೆದು ಅಲಂಕರಿಸುತ್ತಿದ್ದುದನ್ನು ಆ ಕಾಲದ ಶಿಲ್ಪಗಳಲ್ಲಿ ಕಾಣಬಹುದು. [2] ಇದು ಶಿಶ್ನ. ಇದು ಆನೆಯದರಂತಿರುವುದೆಂದು ಬುದ್ಧಘೋಷ. [3] 'ಪಹೂತ ಜಿವ್ಹತಾ'=ಉದ್ದವಾದ ನಾಲಗೆಯತನ.

ವಾನನು ನಾಲಗೆಯನ್ನು ಬಗ್ಗಿಸಿ ಎರಡು ಕಿವಿಗಳನ್ನೂ ಮುಟ್ಟಿ ಸವರಿದನು; ಮೂಗು ಎರಡನ್ನೂ ಮುಟ್ಟಿ ಸವರಿದನು; ಲಲಾಟಮಂಡಲವನ್ನ್ನೂ ನಾಲಗೆಯಿಂದ ಮುಚ್ಚಿದನು.

ಆಗ ಮಾಣವ ಅಂಬಷ್ಟನಿಗೆ ಹೀಗೆನ್ನಿಸಿತು—"ಶ್ರಮಣ ಗೌತಮನು ಮೂವತ್ತೆರಡು ಮಹಾಪುರುಷ ಲಕ್ಷಣಗಳಿಂದ, ಅಪರಿಪೂರ್ಣವಲ್ಲದೆ ಪರಿಪೂರ್ಣವಾಗಿ ಕೂಡಿದವನು." ಭಗವಂತನಿಗೆ ಹೀಗೆಂದನು—"ಭೋ ಗೌತಮ, ನಾವು ಹೋಗಲಾದೀತು. ಬಹಳ ಕೆಲಸವಿದೆ, ಮಾಡಬೇಕಾದುದು ಬಹಳವಿದೆ."

"ನಿನಗೆ ಹೇಗೆನಿಸುವುದೋ ಹಾಗಾಗಲಿ, ಅಂಬಷ್ಟ."

ಆಗ ಮಾಣವ ಅಂಬಷ್ಟನು ಬಡಬಾರಥವನ್ನು ಹತ್ತಿ ಹೊರಟನು.

೧೩. ಆ ಸಮಯದಲ್ಲಿ ಬ್ರಾಹ್ಮಣ ಪೌಷ್ಕರಸಾದಿಯು ಮಹಾ ಬ್ರಾಹ್ಮಣ ಗಣದೊಡನೆ ಉತ್ಕೃಷ್ಟದಿಂದ ಹೊರಟು, ತನ್ನ ಆರಾಮದಲ್ಲಿ ಕುಳಿತು, ಮಾಣವ ಅಂಬಷ್ಟನನ್ನೇ ಎದುರುನೋಡುತ್ತಿದ್ದನು. ಆಗ ಮಾಣವ ಅಂಬಷ್ಟನು (ಪೌಷ್ಕರಸಾದಿಯ) ಸ್ವಂತ ಆರಾಮವಿರುವಲ್ಲಿಗೆ ಹೋದನು. ಯಾನಭೂಮಿಯಿರುವ ವರೆಗೆ ಯಾನದಲ್ಲಿ ಹೋಗಿ, ಯಾನದಿಂದ ಇಳಿದು, ಪಾದಚಾರಿಯಾಗಿ ಬ್ರಾಹ್ಮಣ ಪೌಷ್ಕರಸಾದಿಯಿರುವ ಬಳಿ ಸಾರಿ, ಬ್ರಾಹ್ಮಣ ಪೌಷ್ಕರಸಾದಿಗೆ ಅಭಿವಾದಿಸಿ, ಒಂದು ಕಡೆ ಕುಳಿತನು. ಮಾಣವ ಅಂಬಷ್ಟನು ಒಂದು ಕಡೆ ಕುಳಿತುಕೊಳ್ಳಲು, ಬ್ರಾಹ್ಮಣ ಪೌಷ್ಕರಸಾದಿಯು ಹೀಗೆಂದನು—

೧೪. "ಪ್ರಿಯ ಅಂಬಷ್ಟ, ಆ ಪೂಜ್ಯಗೌತಮನನ್ನು ಕಂಡೆಯೇನು?"

"ನಾನು ಆ ಪೂಜ್ಯಗೌತಮನನ್ನು ಕಂಡೆನು, ಭೋ!"

"ಪ್ರಿಯ ಅಂಬಷ್ಟ, ಆ ಪೂಜ್ಯಗೌತಮನು ಎದ್ದು ಹರಡಿರುವ (ಕಲ್ಯಾಣ ಕೀರ್ತಿ) ಶಬ್ದದಂತಿರುವನೇನು? ಅನ್ಯಥಾ ಇಲ್ಲವೇನು? ಆ ಪೂಜ್ಯಗೌತಮನು ಹಾಗೆಯೇ ಇರುವನೇನು? ಬೇರೆ ತೆರ ಇಲ್ಲವೇನು?"

"ಭೋ! ಆ ಪೂಜ್ಯಗೌತಮನು ಹಾಗೆಯೇ, ಎದ್ದು ಹರಡಿರುವ (ಕಲ್ಯಾಣ ಕೀರ್ತಿ) ಶಬ್ದದಂತೆಯೇ ಇರುವನು; ಅನ್ಯಥಾ ಇಲ್ಲ. ಭೋ! ಆ ಪೂಜ್ಯಗೌತಮನು ಹಾಗೆಯೇ ಇರುವನು, ಬೇರೆ ತೆರ ಇಲ್ಲ. ಭೋ! ಆ ಪೂಜ್ಯಗೌತಮನು ಮೂವತ್ತೆರಡು ಮಹಾಪುರುಷ ಲಕ್ಷಣಗಳಿಂದ, ಅಪರಿಪೂರ್ಣವಲ್ಲದೆ ಪರಿಪೂರ್ಣವಾಗಿ ಕೂಡಿರುವನು."

"ಹಾಗಾದರೆ, ಶ್ರಮಣ ಗೌತಮನೊಡನೆ ನಿನಗೇನಾದರೂ ಕಥಾಸಲ್ಲಾಪವಾಯಿತೇ, ಪ್ರಿಯ ಅಂಬಷ್ಟ?"

"ಪೂಜ್ಯಗೌತಮನೊಡನೆ ನನಗೆ ಕೊಂಚ ಕಥಾಸಲ್ಲಾಪವಾಯಿತು, ಭೋ!"

"ಹಾಗಾದರೆ, ಪ್ರಿಯ ಅಂಬಷ್ಟ, ಶ್ರಮಣ ಗೌತಮನೊಡನೆ ನಿನಗೆ ಕಥಾಸಲ್ಲಾಪ ಹೇಗಾಯಿತು?"

ಆಗ ಮಾಣವ ಅಂಬಷ್ಟನು, ಭಗವಂತನೊಡನೆ ಎಷ್ಟೆಲ್ಲ ಕಥಾಸಲ್ಲಾಪವಾಯಿತೋ ಆ ಅಷ್ಟನ್ನೂ ಬ್ರಾಹ್ಮಣ ಪೌಷ್ಕರಸಾದಿಗೆ ತಿಳಿಸಿದನು.

೧೫. ಹೀಗೆನ್ನಲು, ಬ್ರಾಹ್ಮಣ ಪೌಷ್ಕರಸಾದಿಯು ಮಾಣವ ಅಂಬಷ್ಟನಿಗೆ ಹೀಗೆಂದನು—"ಅಹಾ! ನನ್ನ ಪಂಡಿತಕ! ಅಹಾ! ನನ್ನ ಬಹುಶ್ರುತಕ! ಅಹಾ! ನನ್ನ ತ್ರೈವಿದ್ಯಕ! ಈ ರೀತಿಯಾಗಿ ಹೋದ ಕೆಲಸ ನಡೆಸಿದ ಪುರುಷನು ಸತ್ತು ದೇಹ ಮುರಿದ ಮೇಲೆ ಅಪಾಯವಾದ ದುರ್ಗತಿಗೆ ಬಿದ್ದು ನಿರಯದಲ್ಲಿ ಹುಟ್ಟುವನು. ಅಂಬಷ್ಟ, ಯಾವಾಗ ನೀನು ಆ ಪೂಜ್ಯಗೌತಮನನ್ನು ಹೀಗೆ ಸಾರಿ ಸಾರಿ ಹೀಸೈಸಿದೆಯೋ, ಆಗಲೇ ಆ ಪೂಜ್ಯಗೌತಮನು ನಮ್ಮನ್ನೂ ಸಾರ ಸಾರಿ ಹೀಸೈಸಿದನು. ಅಹಾ! ನನ್ನ ಪಂಡಿತಕ! ಅಹಾ! ನನ್ನ ಬಹುಶ್ರುತಕ! ಅಹಾ! ನನ್ನ ತ್ರೈವಿದ್ಯಕ! ಈ ರೀತಿಯಾಗಿ ಹೋದ ಕೆಲಸ ನಡೆಸಿದ ಪುರುಷನು ಸತ್ತು ದೇಹ ಮುರಿದ ಮೇಲೆ ಅಪಾಯವಾದ ದುರ್ಗತಿಗೆ ಬಿದ್ದು ನಿರಯದಲ್ಲಿ ಹುಟ್ಟುವನು."

ಅವನು ಕುಪಿತನಾಗಿ, ಮನಸ್ಸು ಕೆಟ್ಟು, ಮಾಣವ ಅಂಬಷ್ಟನನ್ನು ಕಾಲಿನಿಂದಲೇ ಉರುಳಿಸಿ, ಆಗಲೇ ಭಗವಂತನನ್ನು ದರ್ಶಿಸಲು ಹೋಗಬೇಕೆಂದು ಇಚ್ಛಿಸಿದನು.

೧೬. ಆಗ ಆ ಬ್ರಾಹ್ಮಣರು ಬ್ರಾಹ್ಮಣ ಪೌಷ್ಕರಸಾದಿಗೆ ಹೀಗೆಂದರು—"ಭೋ! ಶ್ರಮಣ ಗೌತಮನ ದರ್ಶನಕ್ಕೆ ಹೋಗಲು ಈಗ ಅತಿ ವಿಕಾಲವು. ಶ್ರಮಣ ಗೌತಮನ ದರ್ಶನಕ್ಕೆ ಪೂಜ್ಯ ಪೌಷ್ಕರಸಾದಿಯು ನಾಳೆ ಹೋಗಬಹುದು."

ಆಗ ಬ್ರಾಹ್ಮಣ ಪೌಷ್ಕರಸಾದಿಯು ತನ್ನ ಮನೆಯಲ್ಲಿ ಸಿಹಿಯಾದ ಖಾದ್ಯ ಭೋಜ್ಯಗಳನ್ನು ಸಿದ್ಧಗೊಳಿಸಿ, ಯಾನಗಳಲ್ಲಿ ಏರಿಸಿಕೊಂಡು, ಪಂಜಿನ ಬೆಳಕಿನಲ್ಲಿ ಉತ್ಕೃಷ್ಟದಿಂದ ಹೊರಟು, ಇಚ್ಛಾನಂಕಲ ವನಷಂಡವಿರುವೆಡೆಗೆ ಹೋದನು. ಯಾನ ಭೂಮಿಯಿರುವ ವರೆಗೆ ಯಾನದಲ್ಲಿ ಹೋಗಿ, ಯಾನದಿಂದಿಳಿದು, ಪಾದಚಾರಿಯಾಗಿ ಭಗವಾನನಿರುವ ಬಳಿ ಸಾರಿದನು. ಬಳಿಸಾರಿ, ಭಗವಂತನ ಬಳಿ ಸಮ್ಮೋದದಿಂದ ಆಡಿ, ಕೇಳಬೇಕಾದ ಕುಶಲಪ್ರಶ್ನೆಗಳಾಗಲು, ಒಂದು ಕಡೆ ಕುಳಿತನು. ಒಂದು ಕಡೆ ಕುಳಿತು, ಬ್ರಾಹ್ಮಣ ಪೌಷ್ಕರಸಾದಿಯು ಭಗವಂತನಿಗೆ ಹೀಗೆಂದನು—

೧೭. "ಭೋ ಗೌತಮ, ನನ್ನ ಅಂತೇವಾಸಿ ಮಾಣವ ಅಂಬಷ್ಟನು ಇಲ್ಲಿ ಬಂದನೇನು?"

" ಅಂತೇವಾಸಿ ಮಾಣವ ಅಂಬಷ್ಟನು ಇಲ್ಲಿ ಬಂದನು, ಬ್ರಾಹ್ಮಣ ! "

" ಮತ್ತೆ, ಭೋ ಗೌತಮ, ನಿನಗೆ ಮಾಣವ ಅಂಬಷ್ಟನೊಡನೆ ಏನಾದರೂ ಕಥಾಸಲ್ಲಾಪವಾಯಿತೇನು ? "

" ನನಗೆ ಮಾಣವ ಅಂಬಷ್ಟನೊಡನೆ ಕೊಂಚ ಕಥಾಸಲ್ಲಾಪವಾಯಿತು, ಬ್ರಾಹ್ಮಣ ! "

" ಮತ್ತೆ, ಭೋ ಗೌತಮ, ಮಾಣವ ಅಂಬಷ್ಟನೊಡನೆ ನಡೆದ ಕಥಾಸಲ್ಲಾಪ ಹೇಗೆ ? "

ಆಗ ಭಗವಾನನು, ಮಾಣವ ಅಂಬಷ್ಟನೊಡನೆ ಎಷ್ಟೆಲ್ಲ ಕಥಾಸಲ್ಲಾಪವಾಯಿತು, ಆ ಅಷ್ಟನ್ನೂ ಬ್ರಾಹ್ಮಣ ಪೌಷ್ಕರಸಾದಿಗೆ ತಿಳಿಸಿದನು.

ಹಾಗೆನ್ನಲು, ಬ್ರಾಹ್ಮಣ ಪೌಷ್ಕರಸಾದಿಯು ಭಗವಂತನಿಗೆ ಹೀಗೆಂದನು— " ಭೋ ಗೌತಮ, ಮಾಣವ ಅಂಬಷ್ಟನು ಬಾಲನು.[1] ಪೂಜ್ಯಗೌತಮನು ಮಾಣವ ಅಂಬಷ್ಟನನ್ನು ಕ್ಷಮಿಸಬೇಕು."

" ಮಾಣವ ಅಂಬಷ್ಟನು ಸುಖಿಯಾಗಲಿ, ಬ್ರಾಹ್ಮಣ ! "

೧೮. ಆಗ ಬ್ರಾಹ್ಮಣ ಪೌಷ್ಕರಸಾದಿಯು ಭಗವಂತನ ದೇಹದಲ್ಲಿ ಮೂವತ್ತೆರಡು ಮಹಾಪುರುಷ ಲಕ್ಷಣಗಳನ್ನು ಗಮನಿಸಿದನು. ಬ್ರಾಹ್ಮಣ ಪೌಷ್ಕರಸಾದಿಯು ಭಗವಂತನ ದೇಹದ ಮೂವತ್ತೆರಡು ಮಹಾಪುರುಷ ಲಕ್ಷಣಗಳಲ್ಲಿ ಎರಡುಳಿದು ಎಲ್ಲವನ್ನೂ ಕಂಡನು ; ಕೋಶದಲ್ಲಿನ ವಸ್ತ್ರಗುಹ್ಯ, ನಾಲಗೆಯ ಉದ್ದ—ಈ ಎರಡು ಮಹಾಪುರುಷ ಲಕ್ಷಣಗಳಲ್ಲಿ ಸಂದೇಹಪಟ್ಟನು, ಸಂಶಯಪಟ್ಟನು ; ತೃಪ್ತನಾಗಲಿಲ್ಲ, ಪ್ರಸನ್ನನಾಗಲಿಲ್ಲ.

೧೯. ಆಗ ಭಗವಂತನಿಗೆ ಹೀಗೆನ್ನಿಸಿತು—" ಈ ಬ್ರಾಹ್ಮಣ ಪೌಷ್ಕರಸಾದಿಯು ಎರಡುಳಿದ ಮೂವತ್ತೆರಡು ಮಹಾಪುರುಷ ಲಕ್ಷಣಗಳನ್ನು ನನ್ನಲ್ಲಿ ಕಾಣುವನು ; ಕೋಶದಲ್ಲಿನ ವಸ್ತ್ರಗುಹ್ಯ, ನಾಲಗೆಯ ಉದ್ದ—ಈ ಎರಡು ಮಹಾಪುರುಷ ಲಕ್ಷಣಗಳಲ್ಲಿ ಸಂದೇಹಪಡುವನು, ಸಂಶಯಪಡುವನು ; ತೃಪ್ತನಾಗಿಲ್ಲ, ಪ್ರಸನ್ನನಾಗಿಲ್ಲ."

ಆಗ ಭಗವಾನನು, ಭಗವಂತನ ಕೋಶದಲ್ಲಿನ ವಸ್ತ್ರಗುಹ್ಯವನ್ನು ಬ್ರಾಹ್ಮಣ ಪೌಷ್ಕರಸಾದಿಯು ಕಾಣುವ ರೀತಿಯಲ್ಲಿ ಋದ್ಧಿಶಕ್ತಿಯನ್ನು ಪ್ರಯೋಗಿಸಿದನು. ಆಗ ಭಗವಾನನು ನಾಲಗೆಯನ್ನು ಬಗ್ಗಿಸಿ ಎರಡು ಕಿವಿಗಳನ್ನೂ ಮುಟ್ಟಿ ಸವರಿದನು ; ಮೂಗು ಎರಡನ್ನೂ ಮುಟ್ಟಿ ಸವರಿದನು ; ಲಲಾಟ ಮಂಡಲವಷ್ಟನ್ನೂ ನಾಲಗೆಯಿಂದ ಮುಚ್ಚಿದನು.

---

1 ಪಂಡಿತನಲ್ಲದವನು.

ಆಗ ಬ್ರಾಹ್ಮಣ ಪೌಷ್ಕರಸಾದಿಗೆ ಹೀಗೆನ್ನಿಸಿತು—"ಶ್ರಮಣ ಗೌತಮನು ಮೂವತ್ತೆರಡು ಮಹಾಪುರುಷ ಲಕ್ಷಣಗಳಿಂದ, ಅಪರಿಪೂರ್ಣವಲ್ಲದೆ ಪರಿಪೂರ್ಣವಾಗಿ ಕೂಡಿದವನು." ಭಗವಂತನಿಗೆ ಹೀಗೆಂದನು—"ಪೂಜ್ಯಗೌತಮನು ಭಿಕ್ಷುಸಂಘದೊಡನೆ ನಾಳೆ ನಮ್ಮ ಊಟಕ್ಕೆ ಸಮ್ಮತಿಸಬೇಕು." ಭಗವಂತನು ಮೌನದಿಂದ ಸಮ್ಮತಿಸಿದನು.

೨೦.* ಆಗ ಬ್ರಾಹ್ಮಣ ಪೌಷ್ಕರಸಾದಿಯು ಭಗವಂತನ ಸಮ್ಮತಿಯನ್ನು ತಿಳಿದು, ಭಗವಂತನಿಗೆ ಕಾಲವನ್ನು ತಿಳಿಸಿದನು—"ಕಾಲವಾಯಿತು, ಭೋ ಗೌತಮ, ಊಟ ಸಿದ್ಧವಾಗಿದೆ." ಆಗ ಭಗವಾನನು, ಪೂರ್ವಾಹ್ನಸಮಯದಲ್ಲಿ ಉಡುಪು ಹಾಕಿಕೊಂಡು, ಪಾತ್ರ ಚೀವರಗಳನ್ನು ಕೊಂಡು, ಭಿಕ್ಷುಸಂಘದೊಡನೆ ಬ್ರಾಹ್ಮಣ ಪೌಷ್ಕರಸಾದಿಯ ಪರಿವೇಶನ[1]ವಿರುವಲ್ಲಿಗೆ ಸಾರಿ, ಸಿದ್ಧಗೊಳಿಸಿದ್ದ ಆಸನದಲ್ಲಿ ಕುಳಿತನು. ಆಗ ಬ್ರಾಹ್ಮಣ ಪೌಷ್ಕರಸಾದಿಯು ಭಗವಂತನನ್ನೂ, ಮಾಣವಕರು ಭಿಕ್ಷುಸಂಘವನ್ನೂ, ಸಿಹಿಯಾದ ಖಾದ್ಯಭೋಜ್ಯಗಳನ್ನು ಸ್ವಹಸ್ತದಿಂದ ನೀಡಿ ಒಪ್ಪಿಸಿ, ಸಂತೃಪ್ತಿ ಪಡಿಸಿದರು. ಆಗ, ಭಗವಾನನು ಊಟಮಾಡಿ ಪಾತ್ರೆಯಿಂದ ಕೈತೆಗೆದ ಮೇಲೆ,[2] ಬ್ರಾಹ್ಮಣ ಪೌಷ್ಕರಸಾದಿಯು ಬೇರೆ ನೀಚಾಸನವನ್ನು ಹಿಡಿದು ಒಂದು ಕಡೆ ಕುಳಿತನು.

೨೧. ಒಂದು ಕಡೆ ಕುಳಿತ ಬ್ರಾಹ್ಮಣ ಪೌಷ್ಕರಸಾದಿಗೆ ಭಗವಾನನು ಆನುಪೂರ್ವಿಕಥೆ[3]ಯನ್ನು ಹೇಳಿದನು—ಎಂದರೆ ದಾನಕಥೆ, ಶೀಲಕಥೆ, ಸ್ವರ್ಗಕಥೆ, ಕಾಮಗಳ ಅಪಾಯ ಪಾಪ ಸಂಕ್ಲೇಶಗಳು, ನೈಷ್ಕ್ರಮ್ಯದ ಮಹಾತ್ಮೆ—ಇವುಗಳನ್ನು ಪ್ರಕಾಶಗೊಳಿಸಿದನು. ಬ್ರಾಹ್ಮಣ ಪೌಷ್ಕರಸಾದಿಯ ಚಿತ್ತವು ಹದವಾಗಿ, ಮೃದುವಾಗಿ, ವಿನೀವರಣ[4]ವಾಗಿ, ಉದಗ್ರವಾಗಿ, ಪ್ರಸನ್ನವಾಯಿತೆಂದು ತಿಳಿದಾಗ ; ಭಗವಾನನು, ಬುದ್ಧರಿಂದ ಕೀರ್ತಿತವಾಗಿರುವ [5]"ದುಃಖ, ಸಮುದಯ, ನಿರೋಧ, ಮಾರ್ಗ[5]" ಎಂಬ ಧರ್ಮದೇಶನವನ್ನು ಪ್ರಕಾಶಗೊಳಿಸಿದನು. ಕೊಳೆ ಹೋದ ಶುದ್ಧವಸ್ತ್ರವು ಚೆನ್ನಾಗಿಯೇ ರಂಗು ಹಿಡಿಯುವಂತೆ, ಹಾಗೆಯೇ ಬ್ರಾಹ್ಮಣ ಪೌಷ್ಕರಸಾದಿಗೆ

---

* ಇದು ಮಾರನೆಯ ದಿವಸ. [1] ಊಟ ಬಡಿಸುವ ಸ್ಥಲ. [2] ಎಂದರೆ ಪಾತ್ರೆಯನ್ನೂ ಕೈಯನ್ನೂ ತೊಳೆದ ಮೇಲೆ. [3] ಧರ್ಮದ ತುತ್ತತುದಿಗೆ ಶ್ರೋತೃವನ್ನು ಕ್ರಮವಾಗಿ ಮೆಟ್ಟಲು ಮೆಟ್ಟಲಾಗಿ ಕರೆದೊಯ್ಯುವ ಮಾತು. [4] ನೀವರಣಗಳ ವಿವರಕ್ಕೆ ಶ್ರಾಮಣ್ಯ ಫಲ ಸೂತ್ರದ § ೬೮-೭೪ ನೋಡಿ. [5] ದುಃಖ ಉಂಟು, ದುಃಖಕ್ಕೆ ಕಾರಣ ಉಂಟು, ಆ ಕಾರಣಕ್ಕೆ ನಿರೋಧ ಉಂಟು, ಆ ನಿರೋಧಕ್ಕೆ ಮಾರ್ಗ ಉಂಟು ಎಂಬ ಈ ನಾಲ್ಕು 'ಆರ್ಯಸತ್ಯ'ಗಳು ಬೌದ್ಧಧರ್ಮದ ಬಹು ಮುಖ್ಯವಾದ ಅಂಗ.

ವಿರಜವೂ ವೀತಮಲವೂ ಆದ, "ಸಮುದಯ ಧರ್ಮ ಸರ್ವವೂ ನಿರೋಧ ಧರ್ಮವು[1]" ಎಂಬ ಧರ್ಮಚಕ್ಷು[2] ಆ ಆಸನದಲ್ಲಿಯೇ ಹುಟ್ಟಿತು.

೨೨. ಆಗ ಬ್ರಾಹ್ಮಣ ಪೌಷ್ಕರಸಾದಿಯು ಧರ್ಮ ಕಂಡು, ಧರ್ಮ ಪ್ರಾಪ್ತಿ ಹೊಂದಿ, ಧರ್ಮ ತಿಳಿದು, ಧರ್ಮದಲ್ಲಿ ಇಳಿಮುಳುಗಿ, ವಿಚಿಕಿತ್ಸೆಯನ್ನು ದಾಟಿ, ಕಥಂಕಥವು ಹೋಗಿ, ವೈಶಾರದ್ಯ[3] ಪ್ರಾಪ್ತನಾಗಿ, ಶಾಸ್ತೃಶಾಸನದಲ್ಲಿ ಅಪರ ಪ್ರತ್ಯಯನಾಗಿ,[4] ಭಗವಂತನಿಗೆ ಹೀಗೆಂದನು—

"ಬಲು ಸೊಗಸು, ಭೋ ಗೌತಮ! ಬಲು ಸೊಗಸು, ಭೋ ಗೌತಮ! ಭೋ ಗೌತಮ! ಬಿದ್ದಿದ್ದುದನ್ನು ಎತ್ತಿ ನಿಲ್ಲಿಸಿದಂತೆ, ಮುಚ್ಚಿದ್ದುದನ್ನು ಬಿಚ್ಚಿದಂತೆ, ಮೂಢನಿಗೆ ಮಾರ್ಗ ತೋರಿಕೊಟ್ಟಂತೆ, ಕಣ್ಣಿರುವವರು ರೂಪಗಳನ್ನು ಕಾಣಲೆಂದು ಅಂಧಕಾರದಲ್ಲಿ ತೈಲಪ್ರದ್ಯೋತವನ್ನು ಧರಿಸಿದಂತೆ—ಅಂತೆಯೇ ಪೂಜ್ಯಗೌತಮನಿಂದ ಅನೇಕ ಪರ್ಯಾಯಗಳಿಂದ ಧರ್ಮವು ಪ್ರಕಾಶಿತವಾಯಿತು. ಭೋ ಗೌತಮ, ನಾನು ಮಕ್ಕಳೊಡನೆ, ಭಾರ್ಯೆಯೊಡನೆ, ಪರಿಷೆಯೊಡನೆ, ಅಮಾತ್ಯರೊಡನೆ ಭಗವಂತನಾದ ಗೌತಮನನ್ನೂ ಧರ್ಮ ಭಿಕ್ಷುಸಂಘಗಳನ್ನೂ ಶರಣುಹೊಗುವೆನು. ಇಂದಿನಿಂದ ಪ್ರಾಣವಿರುವ ವರೆಗೂ ಶರಣಾಗತನಾದ ಉಪಾಸಕನೆಂದು ಪೂಜ್ಯ ಗೌತಮನು ನನ್ನನ್ನು ಸ್ವೀಕರಿಸಲಿ. ಪೂಜ್ಯಗೌತಮನು ಉತ್ಕೃಷ್ಟದ ಇತರ ಉಪಾಸಕ ಕುಲಗಳನ್ನು ಸಾರುವಂತೆಯೇ ಪೂಜ್ಯಗೌತಮನು ಪೌಷ್ಕರಸಾದಿ ಕುಲವನ್ನೂ ಸಾರಲಿ. ಭಗವಂತನಾದ ಗೌತಮನಿಗೆ ಅಭಿವಾದನೆ ಗೆಯ್ಯುವ ಅಥವಾ ಪ್ರತ್ಯುತ್ಥಾನಮಾಡುವ, ಇಲ್ಲವೆ ಆಸನೋದಕಗಳನ್ನು ಕೊಡುವ, ಇಲ್ಲವೆ ಚಿತ್ತ ಪ್ರಸಾದ ಪಡೆವ ಮಾಣವಕರಾಗಲಿ, ಮಾಣವಿಕೆಯರಾಗಲಿ ಅಲ್ಲಿ ಇದ್ದರೆ—ಅದರಿಂದ ಅವರಿಗೆ ಬಹುಕಾಲ ಹಿತವುಂಟು, ಸುಖವುಂಟು."

"ಕಲ್ಯಾಣವನ್ನು ನುಡಿವೆ, ಬ್ರಾಹ್ಮಣ!"

[ಅಂಬಷ್ಟ ಸೂತ್ರ ಮುಗಿಯಿತು.]

---

[1] ಹುಟ್ಟುವುದು ಯಾವುದರ ಸ್ವಭಾವ, ಹಾಳಾಗುವುದು ಆ ಎಲ್ಲದರ ಸ್ವಭಾವ.
[2] ಶ್ರಾಮಣ್ಯ ಫಲ ಸೂತ್ರದ ಕೊನೆ ನೋಡಿ. [3] ಸ್ವಶಕ್ತಿಯಲ್ಲಿ ಸಂಪೂರ್ಣವಾದ ನಂಬಿಕೆ.
[4] ಬುದ್ಧ ಶಾಸನವನ್ನು ತಿಳಿಯಲು ಬೇರೆಯವರ ಸಹಾಯ ಬೇಕಿಲ್ಲದ ಸ್ಥಿತಿಗೆ ಬಂದು.

# ಸೋಣದಂಡ ಸೂತ್ರ

[ಬೌದ್ಧ ಧರ್ಮಸಾಹಿತ್ಯದಲ್ಲಿ ಜಾತಿವಾದಕ್ಕೆ ಸಂಬಂಧಿಸಿದಂತೆ ಸಿಕ್ಕುವ ಹಲವು ಸೂತ್ರಗಳಲ್ಲಿ ಒಂದಾದ ಈ 'ಸೋಣದಂಡ ಸುತ್ತ'ವು 'ದೀಘನಿಕಾಯ'ದ ಮೂವತ್ತುನಾಲ್ಕು ಸೂತ್ರಗಳಲ್ಲಿ ನಾಲ್ಕನೆಯದು. ಹಿಂದಿನ 'ಅಂಬಷ್ಟ ಸೂತ್ರ'ದಲ್ಲಿ ಪೂರ್ಣವಾಗದೆ ಅರೆಕೆಯಾಗಿ ನಿಂದುದು ಈ ಸೂತ್ರದಲ್ಲಿ ಕೂಡಿ ಬಂದಂತೆ ಇದೆ. ಅಲ್ಲಿ ಜಾತಿಯ ಹೆಮ್ಮೆಯ ಹೊಲಿಗೆಯನ್ನು ಬಿಚ್ಚಿ, ಭಗವಾನನು ಅದರ ಒಳಗು ಎಷ್ಟು ಪೊಳ್ಳು ಎಂದು ತೋರಿಸಿದನು. ತನ್ನ ಮೇರೆ ಮೀರಿದ ಮಾನಕ್ಕೆ ಅಂಬಷ್ಟನು ತಾನೇ ನಾಚುವಂತಾಯಿತು. ದಾಸೀಪುತ್ರನಾದ ಕೃಷ್ಣನು ಆರ್ಯಪುತ್ರನಾದ ಇಕ್ಷ್ವಾಕುವನ್ನು ಭಂಗಿಸಿ, ಅವನಿಗಿಂತ ಮೇಲೆನಿಸಿ, ಮುಂದುವರಿಯಲು ಜಾತಿಯಿಂದ ತಡೆಯಾಗಲಿಲ್ಲವೆಂದು ತೋರಿಸಿದನು. ಆ ಸೂತ್ರದಲ್ಲಿ ಜಾತಿಯ ನಿಷ್ಫಲತೆ ಚಿತ್ರಿತವಾಯಿತು. ಈ ಸೂತ್ರದಲ್ಲಿ ಕೂಡ ಜಾತಿ ವರ್ಣ ಮಂತ್ರಗಳಿಗಿಂತ ಶೀಲ ಪ್ರಜ್ಞೆಗಳೇ ಹೆಚ್ಚಿನವೆಂದು, ಶೀಲ ಪ್ರಜ್ಞೆಗಳಿಂದಲೇ ಬ್ರಾಹ್ಮಣ್ಯ ಸಿದ್ಧಿಸುವುದೆಂದು ಬುದ್ಧನು ವಿವರಿಸುವನು.

ಇದು ಸೂತ್ರ ಸಂಕ್ಷೇಪ.

## ಸೂತ್ರಮುಖ (§ ೧–೧೦)

ಭಗವಾನನು ಒಂದು ಸಲ ಚಂಪೆಯಲ್ಲಿ ತಂಗಿದ್ದಾನೆ (೧). ಅಲ್ಲಿಯ ಗೃಹಪತಿಗಳು ಭಗವದ್ದರ್ಶನಕ್ಕಾಗಿ ತೆರಳುವುದನ್ನು ಚಂಪಾವಾಸಿಯಾದ ಧನಾಢ್ಯ ಸೋಣದಂಡನು ಕಂಡು, ಕುತೂಹಲ ಹುಟ್ಟಿ (೨-೩), ತಾನೂ ಬುದ್ಧನನ್ನು ಕಾಣಲು ಹೊರಡುವನು (೪). ಸೋಣದಂಡನಂತಹ ವೃದ್ಧ ಕುಲಪುತ್ರನು ಗೌತಮನಂತಹ ತರುಣ ಪರಿವ್ರಾಜಕನನ್ನು ಕಾಣಲು ಹೋಗುವುದು ತಗದೆಂದು ಆ ಚಂಪೇಯಕರು ತಡೆಯುವರು (೫). ಪಂಡಿತನಾದ ಸೋಣದಂಡನು ಅವರ ಮಾತು ಒಲ್ಲದೆ, ಅತಿಥಿಯಾಗಿ ಬಂದ ಗೌತಮನನ್ನು ತಾನೇ ಹೋಗಿ ಕಾಣುವುದು ಹೇಗೆ ತಕ್ಕುದು ಎಂದು ವಿವರಿಸಿ (೬), ಬುದ್ಧನನ್ನು ಕಾಣಲು ಹೋಗುವನು (೭). ಬುದ್ಧನು ತಂಗಿದ್ದ ವನದ ಬಳಿ ಬಂದಾಗ, ಸೋಣದಂಡನಿಗೆ ಸಂದೇಹ ಬರುವುದು, ಬುದ್ಧನೊಡನೆ ಸಂವಾದ ನಡೆದು, ತಾನು ಸೋತು, ತನ್ನ ಯಶಸ್ಸಿಗೆ ಎಲ್ಲಿ ಹಾನಿ ತಗುಲುವುದೋ ಎಂದು ಹೆದರುತ್ತ, ಹಿಂದಿರುಗಲಾರದೆ ಮುಂದೆ ಸಾಗಿಬಂದು ಬುದ್ಧನ ಬಳಿ ಕುಳಿತುಕೊಳ್ಳುವನು (೮-೧೦).

## ಸೋಣದಂಡ–ಬುದ್ಧ ಸಂವಾದ (§ ೧೧–೨೧)

ಭಗವಾನನು ಸೋಣದಂಡನ ಭೀತಿಯನ್ನು ಕಂಡು, ಆತನು ತನ್ನ ಮನದಲ್ಲಿಯೇ ಬಯಸಿದ ತ್ರೈವಿದ್ಯಕವಾದ ಪ್ರಶ್ನೆಯೊಂದನ್ನು ಕೇಳುವನು (೧೧).

'ಬ್ರಾಹ್ಮಣನಿಗೆ ಇರಬೇಕಾದ ಅಂಗಗಳೆಷ್ಟು?' ಎಂಬುದೇ ಪ್ರಶ್ನೆ. ಸೋಣದಂಡನು ಬ್ರಾಹ್ಮಣನಿಗೆ ಐದು ಅಂಗಗಳಿರಬೇಕೆಂದು ತಿಳಿಸುವನು (೧೩). ಆ ಐದು ಅಂಗಗಳಲ್ಲಿ ಯಾವುವಾದರೂ ಅಂಗಗಳನ್ನು ಬಿಡಲು ಸಾಧ್ಯವೇ ಎಂಬ ಬುದ್ಧನ ಪ್ರಶ್ನೆಗೆ ಸೋಣದಂಡನು ಕ್ರಮವಾಗಿ ವರ್ಣ, ಮಂತ್ರ, ಜಾತಿಗಳನ್ನು ಬಿಡಬಹುದೆನ್ನುವನು; ಉಳಿದ ಪ್ರಜ್ಞೆ ಶೀಲಗಳನ್ನು ಮಾತ್ರ ಬಿಡಲಾಗದೆನ್ನುವನು (೧೪-೧೬). ಸೋಣದಂಡನು ಈ ರೀತಿಯಾಗಿ ಬುದ್ಧನ ಪಕ್ಷವನ್ನೇ ಸಮರ್ಥಿಸುವುದನ್ನು ಕಂಡು ಅಲ್ಲಿಯ ಬ್ರಾಹ್ಮಣರಲ್ಲಿ ಕೋಲಾಹಲವಾಗುವುದು. ಸೋಣದಂಡನು ಅವರನ್ನು ಸಮಾಧಾನಗೊಳಿಸುವನು (೧೭-೨೧).

## ತಥಾಗತ ವ್ಯಾಕರಣ (§ ೨೨–೨೩)

ಪ್ರಜ್ಞೆ ಶೀಲಗಳನ್ನು ವಿವರವಾಗಿ ತಿಳಿಯುವ ಆಸೆಯಿಂದ ಸೋಣದಂಡನಿಗೆ ಭಗವಾನನು ವಿವರಿಸುವನು. ಶ್ರಾಮಣ್ಯ ಫಲ ಸೂತ್ರದ § ೪೦-೬೩—ಇದು ಶೀಲ; § ೭೫-೯೮—ಇದು ಪ್ರಜ್ಞೆ.

## ಸೋಣದಂಡ ಶರಣಾಗತಿ (§ ೨೪–೨೭)

ಭಗವಾನನ ವಿವರಣೆಯಿಂದ ಪ್ರೀತನಾದ ಸೋಣದಂಡನು ಬುದ್ಧನನ್ನು ಮಾರನೆಯ ದಿನದ ಭಿಕ್ಷೆಗೆ ಕರೆಯುವನು (೨೪). ಭಗವಾನನು ಒಪ್ಪಿ ಹೋಗುವನು (೨೫). ಭೋಜನಾನಂತರ ಸೋಣದಂಡನು ಬುದ್ಧನಿಗೆ ಶರಣಾಗುವನು (೨೬). ಬುದ್ಧನು ಅವನಿಗೆ ಉಪದೇಶಮಾಡುವನು (೨೭). ಸೂತ್ರ ಮುಗಿಯುವುದು.]

೧. ನಾನು ಹೀಗೆ ಕೇಳಿರುವೆನು. ಒಂದು ಸಲ ಭಗವಾನನು ಅಂಗದಲ್ಲಿ ಭಿಕ್ಷಾಚರಣಮಾಡುತ್ತ, ಮಹಾ ಭಿಕ್ಷುಸಂಘದೊಡನೆ, ಸುಮಾರು ಐನೂರು ಭಿಕ್ಷುಗಳೊಡನೆ ಚಂಪೆಯಿರುವಲ್ಲಿಗೆ ಹೋದನು. ಭಗವಾನನು ಅಲ್ಲಿ, [1]ಚಂಪೆಯಲ್ಲಿ [2]ಗಗ್ಗರೆಯ ಪುಷ್ಕರಿಣೀ ತೀರದಲ್ಲಿ ತಂಗಿದ್ದನು. ಆ ಸಮಯದಲ್ಲಿ ಬ್ರಾಹ್ಮಣ ಸೋಣದಂಡನು ಚಂಪೆಯಲ್ಲಿ ವಾಸಿಸುತ್ತಿದ್ದನು. (ಅದು) ಜೀವಿಗಳಿಂದ ತುಂಬಿತುಳುಕಿ, ಹುಲ್ಲು ಕಡ್ಡಿ ಕಾಳು ನೀರಿನಿಂದ ಕೂಡಿ, ರಾಜನು ಭೋಗಿಸಲು ತಕ್ಕುದು. (ಅದು) ಮಗಧದ ರಾಜನಾದ ಶ್ರೇಣಿಯ ಬಿಂಬಿಸಾರನು ದಾನಮಾಡಿದ ರಾಜಯೋಗ್ಯವಾದ ದಾನ, ಶ್ರೇಷ್ಠವಾದ ದಾನ.

೨. ಚಂಪೆಯ ಬ್ರಾಹ್ಮಣ ಗೃಹಪತಿಗಳು ಕೇಳಿದರು—"ಭೋ! ಶಾಕ್ಯಪುತ್ರನೂ ಶಾಕ್ಯಕುಲದಿಂದ ಪ್ರವ್ರಜಿತನೂ ಆದ ಶ್ರಮಣ ಗೌತಮನು ಅಂಗದಲ್ಲಿ ಭಿಕ್ಷಾಚರಣಮಾಡುತ್ತ, ಮಹಾ ಭಿಕ್ಷುಸಂಘದೊಡನೆ, ಸುಮಾರು ಐನೂರು ಭಿಕ್ಷು

---

[1] ಅಂಗದೇಶದ ಆ ಕಾಲದ ರಾಜಧಾನಿ. ಮಗಧರಾಜ್ಯದ ಪೂರ್ವದ ಮೇರೆಯಾಗಿತ್ತು.

[2] ಆ ಪುಷ್ಕರಿಣಿಯನ್ನು ತೋಡಿಸಿದ ಒಬ್ಬ ರಾಣಿ.

ಗಳೊಡನೆ ಚಂಪೆಯನ್ನು ಸಾರಿ, ಚಂಪೆಯಲ್ಲಿ ಗಗ್ಗರೆಯ ಪುಷ್ಕರಿಣೀ ತೀರದಲ್ಲಿ ತಂಗಿರುವನಂತೆ! ಆ ಪೂಜ್ಯ ಗೌತಮನನ್ನು ಕುರಿತು ಹರಡಿರುವ ಕಲ್ಯಾಣ ಕೀರ್ತಿ ಶಬ್ದವಿದು—[1]'ಆ ಭಗವಾನನು ಅರ್ಹನು, ಸಮ್ಯಕ್ಸಂಬುದ್ಧನು, ವಿದ್ಯಾಚರಣ ಸಂಪನ್ನನು, ಸುಗತನು, ಲೋಕವಿದನು, ಅನುತ್ತರನಾದ ಪುರುಷದಮ್ಯಸಾರಥಿಯು, ದೇವಮನುಷ್ಯರಿಗೆ ಶಾಸ್ತೃವು, ಬುದ್ಧನು, ಭಗವಾನನು.' ಅವನು ಈ ಲೋಕವನ್ನು—ದೇವ ಮಾರ ಬ್ರಹ್ಮ ಸಹಿತವಾಗಿ, ಶ್ರಮಣ ಬ್ರಾಹ್ಮಣ ಪ್ರಜೆಯೊಡನೆ, ದೇವಮನುಷ್ಯ ಸಹಿತವಾಗಿ—ಸ್ವಂತ ಅಭಿಜ್ಞೆಯಿಂದ ಕಂಡುಕೊಂಡು ತಿಳಿಯಪಡಿಸುತ್ತಾನೆ. ಆದಿ ಮಧ್ಯಾಂತ ಕಲ್ಯಾಣವಾದ ಧರ್ಮವನ್ನು ಸಾರ್ಥವಾಗಿ ಸವ್ಯಂಜನವಾಗಿ ಸಾರುವನು. ಕೇವಲ ಪರಿಪೂರ್ಣವೂ ಪರಿಶುದ್ಧವೂ ಆದ ಬ್ರಹ್ಮಚರ್ಯವನ್ನು ಪ್ರಕಾಶಗೊಳಿಸುವನು. ಅಂತಹ ಅರ್ಹತರ ದರ್ಶನದಿಂದ ಮೇಲಾಗುವುದು."[1]

ಆಗ, ಚಂಪೆಯ ಬ್ರಾಹ್ಮಣ ಗೃಹಪತಿಗಳು ಚಂಪೆಯಿಂದ ಗುಂಪುಗುಂಪಾಗಿ, ಹಿಂಡುಹಿಂಡಾಗಿ ಹೊರಟು, ಗಗ್ಗರೆಯ ಪುಷ್ಕರಿಣಿಯಿರುವಲ್ಲಿಗೆ ತೆರಳಿದರು.

೩. ಆಗ, ಆ ಸಮಯದಲ್ಲಿ ಬ್ರಾಹ್ಮಣ ಸೋಣದಂಡನು ಹಗಲು ನಿದ್ರೆಮಾಡಲು ಪ್ರಾಸಾದದ ಮೇಲುಗಡೆ ಹೋಗಿದ್ದನು. ಚಂಪೆಯ ಬ್ರಾಹ್ಮಣ ಗೃಹಪತಿಗಳು ಚಂಪೆಯಿಂದ ಗುಂಪುಗುಂಪಾಗಿ ಹಿಂಡುಹಿಂಡಾಗಿ ಹೊರಟು, ಗಗ್ಗರೆಯ ಪುಷ್ಕರಿಣಿಯಿರುವಲ್ಲಿಗೆ ತೆರಳುವುದನ್ನು ಬ್ರಾಹ್ಮಣ ಸೋಣದಂಡನು ಕಂಡನು. ಕಂಡು ಕ್ಷತ್ತೃ[2]ವನ್ನು ಕರೆದನು—

"ಭೋ ಕ್ಷತ್ತೃ! ಚಂಪೆಯ ಬ್ರಾಹ್ಮಣ ಗೃಹಪತಿಗಳು ಚಂಪೆಯಿಂದ ಗುಂಪುಗುಂಪಾಗಿ, ಹಿಂಡುಹಿಂಡಾಗಿ ಹೊರಟು, ಗಗ್ಗರೆಯ ಪುಷ್ಕರಿಣಿಯಿರುವಲ್ಲಿಗೆ ತೆರಳುವರೇಕೆ?"

"ಭೋ! ಶಾಕ್ಯಕುಲದಿಂದ ಪರಿವ್ರಜಿಸಿದ ಶಾಕ್ಯಪುತ್ರ ಶ್ರಮಣ ಗೌತಮನುಂಟು. (ಅವನು) ಅಂಗದಲ್ಲಿ ಭಿಕ್ಷಾಚರಣಮಾಡುತ್ತ, ಮಹಾ ಭಿಕ್ಷುಸಂಘದೊಡನೆ, ಸುಮಾರು ಐನೂರು ಭಿಕ್ಷುಗಳೊಡನೆ, ಚಂಪೆಯನ್ನು ಸಾರಿ, ಚಂಪೆಯಲ್ಲಿ ಗಗ್ಗರೆಯ ಪುಷ್ಕರಿಣೀ ತೀರದಲ್ಲಿ ತಂಗಿರುವನು. ಭಗವಂತನಾದ ಆ ಗೌತಮನನ್ನು ಕುರಿತು ಹರಡಿರುವ ಕಲ್ಯಾಣ ಕೀರ್ತಿಶಬ್ದವಿದು—'ಆ ಭಗವಾನನು ಅರ್ಹನು, ಸಮ್ಯಕ್ಸಂಬುದ್ಧನು, ವಿದ್ಯಾಚರಣ ಸಂಪನ್ನನು, ಸುಗತನು, ಲೋಕವಿದನು, ಅನುತ್ತರನಾದ ಪುರುಷದಮ್ಯಸಾರಥಿಯು, ದೇವಮನುಷ್ಯರಿಗೆ ಶಾಸ್ತೃವು, ಬುದ್ಧನು, ಭಗವಾನನು.' ಇವರೆಲ್ಲರೂ ಪೂಜ್ಯ ಗೌತಮನ ದರ್ಶನಕ್ಕಾಗಿ ತೆರಳುವರು."

---

[1] ಶ್ರಾಮಣ್ಯ ಫಲ ಸೂತ್ರದ § ೮ ಮತ್ತು § ೪೦ರ ಟಿಪ್ಪಣಿ ನೋಡಿ.

[2] ಕೇಳಿ ಕೇಳಿದ ಪ್ರಶ್ನೆಗೆ ವಿವರ ಕೊಡಲು ಸಮರ್ಥನಾದ ಮಹಾಮಾತ್ಯ.

"ಭೋ ಕ್ಷತ್ತ್ರ! ಚಂಪೆಯ ಬ್ರಾಹ್ಮಣ ಗೃಹಪತಿಗಳಿರುವಲ್ಲಿಗೆ ಸಾರು. ಸಾರಿ, ಚಂಪೆಯ ಬ್ರಾಹ್ಮಣ ಗೃಹಪತಿಗಳಿಗೆ ಹೀಗೆ ಹೇಳು—'ಬ್ರಾಹ್ಮಣ ಸೋಣ ದಂಡನು ಹೀಗೆಂದನು—ತಾವು ಸ್ವಲ್ಪ ತಡೆಯಬೇಕು. ಬ್ರಾಹ್ಮಣ ಸೋಣದಂಡನು ಕೂಡ ಶ್ರಮಣ ಗೌತಮನ ದರ್ಶನಕ್ಕೆ ಬರುವನು.' "

"ಹಾಗೆಯೆ ಆಗಲಿ, ಭೋ!" ಎಂದು ಆ ಕ್ಷತ್ತ್ರವು ಬ್ರಾಹ್ಮಣ ಸೋಣ ದಂಡನ ಮಾತು ಒಪ್ಪಿ, ಚಂಪೆಯ ಬ್ರಾಹ್ಮಣ ಗೃಹಪತಿಗಳಿರುವೆಡೆ ಸಾರಿ, ಅವರಿಗೆ ಹೀಗೆಂದನು—

"ಭೋ! ಬ್ರಾಹ್ಮಣ ಸೋಣದಂಡನು ಹೀಗೆಂದನು—'ತಾವು ಸ್ವಲ್ಪ ತಡೆಯ ಬೇಕು. ಬ್ರಾಹ್ಮಣ ಸೋಣದಂಡನು ಕೂಡ ಶ್ರಮಣ ಗೌತಮನ ದರ್ಶನಕ್ಕೆ ಬರುವನು.' "

೪. ಆ ಸಮಯದಲ್ಲಿ ನಾನಾ ಅನ್ಯರಾಜ್ಯಗಳ ಬ್ರಾಹ್ಮಣರು, ಸುಮಾರು ಐನೂರು ಮಂದಿ ಬ್ರಾಹ್ಮಣರು, ಏನೋ ಕಾರ್ಯಕ್ಕಾಗಿ ಚಂಪೆಯಲ್ಲಿ ನಿಂತಿದ್ದರು. ಆ ಬ್ರಾಹ್ಮಣರು ಕೇಳಿದರು—"ಬ್ರಾಹ್ಮಣ ಸೋಣದಂಡನು ಶ್ರಮಣ ಗೌತಮನ ದರ್ಶನಕ್ಕೆ ಹೋಗುವನು!" ಆಗ ಆ ಬ್ರಾಹ್ಮಣರು ಬ್ರಾಹ್ಮಣ ಸೋಣದಂಡ ನಲ್ಲಿಗೆ ಸಾರಿ, ಹೀಗೆಂದರು—

"ಪೂಜ್ಯ ಸೋಣದಂಡನು ಶ್ರಮಣ ಗೌತಮನನ್ನು ಕಾಣಲು ಹೋಗುವ ನೆಂಬುದು ಸತ್ಯವೇನು?"

"ಭೋ! ನನಗೆ ಹಾಗೆನಿಸಿದೆ. ಶ್ರಮಣ ಗೌತಮನನ್ನು ಕಾಣಲು ನಾನೂ ಹೋಗುವೆನು."

೫. "ಶ್ರಮಣ ಗೌತಮನನ್ನು ಕಾಣಲು ಪೂಜ್ಯ ಸೋಣದಂಡನು ಹೋಗ ದಿರಲಿ. ಶ್ರಮಣ ಗೌತಮನನ್ನು ಕಾಣಲು ಪೂಜ್ಯ ಸೋಣದಂಡನು ಹೋಗುವುದು ತಕ್ಕುದಲ್ಲ. ಶ್ರಮಣ ಗೌತಮನನ್ನು ಕಾಣಲು ಪೂಜ್ಯ ಸೋಣದಂಡನು ಹೋದರೆ, ಪೂಜ್ಯ ಸೋಣದಂಡನ ಯಶಸ್ಸು ಕಡಿಮೆಯಾಗುವುದು; ಶ್ರಮಣ ಗೌತಮನ ಯಶಸ್ಸು ಬಲು ಹೆಚ್ಚುವುದು. ಪೂಜ್ಯ ಸೋಣದಂಡನ ಯಶಸ್ಸು ಕಡಿಮೆಯಾಗಿ ಶ್ರಮಣ ಗೌತಮನ ಯಶಸ್ಸು ಬಲು ಹೆಚ್ಚುವುದರಿಂದ, ಈ ಕಾರಣಗಳಿಂದ ಶ್ರಮಣ ಗೌತಮನನ್ನು ಕಾಣಲು ಪೂಜ್ಯ ಸೋಣದಂಡನು ಹೋಗುವುದು ತಕ್ಕುದಲ್ಲ; ಶ್ರಮಣ ಗೌತಮನೇ ಪೂಜ್ಯ ಸೋಣದಂಡನನ್ನು ಕಾಣಲು ಬರುವುದು ತಕ್ಕುದು.

"ಪೂಜ್ಯ ಸೋಣದಂಡನು ಉಭಯತ್ರ ಸುಜಾತನು; ಮಾತಾಪಿತೃಗಳಿಂದ ಏಳು ಪಿತಾಮಹ ಯುಗಗಳ ವರೆಗೂ ಸಂಶುದ್ಧವಾದ (ಜನ್ಮವನ್ನು) ಗ್ರಹಿಸಿದವನು;

ಜಾತಿವಾದದಲ್ಲಿ ಕಳಂಕವಿಲ್ಲದವನು, ನಿಂದೆಗೊಳಗಾಗದವನು. ಪೂಜ್ಯ ಸೋಣ ದಂಡನು ಹೀಗಿರುವುದರಿಂದ, ಈ ಕಾರಣಗಳಿಂದ ಶ್ರಮಣ ಗೌತಮನನ್ನು ಕಾಣಲು ಪೂಜ್ಯ ಸೋಣದಂಡನು ಹೋಗುವುದು ತಕ್ಕುದಲ್ಲ; ಶ್ರಮಣ ಗೌತಮನೇ ಪೂಜ್ಯ ಸೋಣದಂಡನನ್ನು ಕಾಣಲು ಬರುವುದು ತಕ್ಕುದು.

" ಪೂಜ್ಯ ಸೋಣದಂಡನು ಆಢ್ಯನು, ಮಹಾ ಧನವುಳ್ಳವನು, ಮಹಾ ಭೋಗ ವುಳ್ಳವನು. ಹೀಗಿರುವುದರಿಂದ, ಈ ಕಾರಣಗಳಿಂದ. . . . (ಹಿಂದಿನಂತೆ). . . .

[1]" ಪೂಜ್ಯ ಸೋಣದಂಡನು ವೇದಗಳನ್ನು ಕಲಿತವನು (ಅಧ್ಯಾಯಕ), ಮಂತ್ರ ತಿಳಿದವನು (ಮಂತ್ರಧರ); ನಿಘಂಟು, ಕೇಟುಭ, ಅಕ್ಷರ ಪ್ರಭೇದಗಳು ಮತ್ತು ಐದನೆಯದಾಗಿ ಇತಿಹಾಸದೊಡನೆ ಮೂರು ವೇದಗಳಲ್ಲಿ ಪಾರಗತನು; ವೇದಗಳ ಪದಪಾಠವನ್ನು ಬಲ್ಲವನು (ಪದಕನು), ವೈಯಾಕರಣನು, ಲೋಕಾಯತ ಮಹಾ ಪುರುಷ ಲಕ್ಷಣಗಳಲ್ಲಿ ಪಂಡಿತನು[1]—ಈ ಕಾರಣಗಳಿಂದ. . . .

" ಪೂಜ್ಯ ಸೋಣದಂಡನು ಅಭಿರೂಪನು, ದರ್ಶನೀಯನು, ಪ್ರಾಸಾದಿಕನು, ಪರಮ ವರ್ಣಪುಷ್ಕಲತೆಯಿಂದ ಕೂಡಿದವನು; ಬ್ರಹ್ಮವರ್ಣಿ[2]ಯೂ, ಬ್ರಹ್ಮವರ್ಚ ಸ್ವಿ[3]ಯೂ; ನೋಡಲು ದೀರ್ಘ ಗಂಭೀರಾಕಾರನು—ಈ ಕಾರಣಗಳಿಂದ. . . .

" ಪೂಜ್ಯ ಸೋಣದಂಡನು ಶೀಲವಂತನು, ವೃದ್ಧಶೀಲಿಯೂ, ವೃದ್ಧಶೀಲದಿಂದ ಕೂಡಿದವನು—ಈ ಕಾರಣಗಳಿಂದ. . . .

" ಪೂಜ್ಯ ಸೋಣದಂಡನು ವಿಸ್ಪಷ್ಟ[4]ವಾಗಿ, ಸ್ಪಷ್ಟವಾಗಿ, ಅರ್ಥವನ್ನು ತಿಳಿಯ ಪಡಿಸುವ ಕಲ್ಯಾಣವಾಕ್ಕಿನಿಂದ ಕೂಡಿದವನು, ಕಲ್ಯಾಣವಾಕ್ಕರಣನು, ಪೌರವಾಕ್ಕಿ ನಿಂದ ಕೂಡಿದವನು—ಈ ಕಾರಣಗಳಿಂದ. . . .

" ಪೂಜ್ಯ ಸೋಣದಂಡನು ಅನೇಕಾನೇಕ ಆಚಾರ್ಯರ ಆಚಾರ್ಯನು; ಮೂರುನೂರು ಮಾಣವಕರಿಗೆ ಮಂತ್ರ ಓದಿಸುವವನು. ನಾನಾ ದೆಸೆಗಳಿಂದ ನಾನಾ ಜನಪದಗಳಿಂದ ಅನೇಕ ಮಾಣವಕರು ಮಂತ್ರಾರ್ಥಿಗಳಾಗಿ ಮಂತ್ರ ಕಲಿಯಲು ಬಯಸಿ ಪೂಜ್ಯ ಸೋಣದಂಡನ ಸಮೀಪಕ್ಕೆ ಬರುವರು—ಈ ಕಾರಣಗಳಿಂದ. . . .

" ಪೂಜ್ಯ ಸೋಣದಂಡನು ಜೀರ್ಣನು, ವೃದ್ಧನು, ವಯಸ್ಸಾದವನು, ಅಧ್ವ ಗತನು, ವಯೋನುಪ್ರಾಪ್ತನು; ಶ್ರಮಣ ಗೌತಮನು ಇನ್ನೂ ತರುಣನು, ತರುಣ ಪರಿವ್ರಾಜಕನು—ಈ ಕಾರಣಗಳಿಂದ. . . .

---

[1] ಅಂಬಷ್ಟ ಸೂತ್ರದ § ೩ರ ಟಿಪ್ಪಣಿ ನೋಡಿ

[2] ಶ್ರೇಷ್ಠವರ್ಣ.—'ಬುದ್ಧಘೋಷ.'

[3] ಮಹಾ ಬ್ರಹ್ಮನ ಶರೀರ ಸದೃಶವಾದ ಶರೀರದಿಂದ ಕೂಡಿದವನು.—' ಬುದ್ಧಘೋಷ.'

[4] ಸಂದಿಗ್ಧ ವಿಲಂಬಿತಾದಿ ದೋಷರಹಿತ.—' ಬುದ್ಧಘೋಷ '

" ಪೂಜ್ಯ ಸೋಣದಂಡನು ಮಗಧದ ರಾಜನಾದ ಶ್ರೇಣಿಯ ಬಿಂಬಿಸಾರನಿಂದ ಸತ್ಕೃತನು, ಗೌರವಿತನು, ಮಾನಿತನು, ಪೂಜಿತನು, ಅಪಚಿತನು—ಈ ಕಾರಣ ಗಳಿಂದ. . . .

" ಪೂಜ್ಯ ಸೋಣದಂಡನು ಬ್ರಾಹ್ಮಣ ಪೌಷ್ಕರಸಾದಿಯಿಂದ ಸತ್ಕೃತನು, ಗೌರವಿತನು, ಮಾನಿತನು, ಪೂಜಿತನು, ಅಪಚಿತನು—ಈ ಕಾರಣಗಳಿಂದ. . . .

" ಪೂಜ್ಯ ಸೋಣದಂಡನು ಚಂಪೆಯಲ್ಲಿ ವಾಸಿಸುವನು. (ಅದು) ಜೀವಿಗಳಿಂದ ತುಂಬಿ ತುಳುಕಿ, ಹುಲ್ಲು ಕಡ್ಡಿ ಕಾಳು ನೀರಿನಿಂದ ಕೂಡಿ, ರಾಜನು ಭೋಗಿಸಲು ತಕ್ಕುದು. (ಅದು) ಮಗಧದ ರಾಜನಾದ ಶ್ರೇಣಿಯ ಬಿಂಬಿಸಾರನು ದಾನಮಾಡಿದ ರಾಜ ಯೋಗ್ಯವಾದ ದಾನ, ಶ್ರೇಷ್ಠವಾದ ದಾನ.—ಈ ಕಾರಣಗಳಿಂದ ಶ್ರಮಣ ಗೌತಮನನ್ನು ಕಾಣಲು ಪೂಜ್ಯ ಸೋಣದಂಡನು ಹೋಗುವುದು ತಕ್ಕುದಲ್ಲ ; ಶ್ರಮಣ ಗೌತಮನೇ ಪೂಜ್ಯ ಸೋಣದಂಡನನ್ನು ಕಾಣಲು ಬರುವುದು ತಕ್ಕುದು."

೬. ಹೀಗೆನ್ನಲು, ಬ್ರಾಹ್ಮಣ ಸೋಣದಂಡನು ಆ ಬ್ರಾಹ್ಮಣರಿಗೆ ಹೀಗೆಂದನು—

" ಭೋ ! ಈಗ ನನ್ನನ್ನೂ ಕೇಳಿರಿ. ಪೂಜ್ಯ ಗೌತಮನನ್ನು ನಾನೇ ಹೋಗಿ ಕಾಣುವುದು ಹೇಗೆ ತಕ್ಕುದು, ಪೂಜ್ಯ ಗೌತಮನು ನನ್ನನ್ನು ಕಾಣಲು ಬರುವುದು ಹೇಗೆ ತಗದು (ಎಂದು ಹೇಳುವೆನು).

" ಭೋ ! ಶ್ರಮಣ ಗೌತಮನು ಉಭಯತ್ರ ಸುಜಾತನು ; ಮಾತಾಪಿತೃಗಳಿಂದ ಏಳು ಪಿತಾಮಹ ಯುಗಗಳ ವರೆಗೂ ಸಂಶುದ್ಧವಾದ (ಜನ್ಮವನ್ನು) ಗ್ರಹಿಸಿದವನು ; ಜಾತಿವಾದದಲ್ಲಿ ಕಳಂಕವಿಲ್ಲದವನು, ನಿಂದೆಗೊಳಗಾಗದವನು. ಭೋ ! ಶ್ರಮಣ ಗೌತಮನು ಹೀಗಿರುವುದರಿಂದ, ಈ ಕಾರಣಗಳಿಂದ ಪೂಜ್ಯ ಗೌತಮನು ನನ್ನನ್ನು ಕಾಣಲು ಬರುವುದು ತಗದು ; ಪೂಜ್ಯ ಗೌತಮನನ್ನು ನಾನೇ ಹೋಗಿ ಕಾಣುವುದು ತಕ್ಕುದು.

" ಭೋ ! ಶ್ರಮಣ ಗೌತಮನು ಮಹಾ ಜ್ಞಾತಿಸಂಘವನ್ನು ತ್ಯಜಿಸಿ ಪರಿ ವ್ರಜಿಸಿದನು. . . .[1] ತರುಣನಾಗಿ, ಕಪ್ಪು ಕೂದಲಿನವನಾಗಿ, ಮಂಗಳಕರವಾದ ಯೌವನದಿಂದ ಕೂಡಿ, ಪ್ರಥಮ ವಯಸ್ಸಿನಲ್ಲಿ ಗಾರ್ಹಸ್ಥ್ಯದಿಂದ ಸಂನ್ಯಾಸಕ್ಕೆ ನಡೆದನು. . . . ತಾಯಿತಂದೆಯರು ಬಯಸದಿದ್ದರೂ ಅಶ್ರುಮುಖದಿಂದ ಅಳು ತ್ತಿದ್ದರೂ ಕೂದಲು ಗಡ್ಡಗಳನ್ನು ತೆಗೆದು, ಕಾಷಾಯ ವಸ್ತ್ರಗಳನ್ನು ಹೊದೆದು, ಗಾರ್ಹಸ್ಥ್ಯದಿಂದ ಸಂನ್ಯಾಸಕ್ಕೆ ಹೊರಟನು. . . . ಅವನು ಅಭಿರೂಪನು, ದರ್ಶ

[1] ಈ ತೆರನಾಗಿ ಈ ಪ್ಯಾರಾದಲ್ಲಿ ಚುಕ್ಕಿ ಇರುವ ಕಡೆ "ಹೀಗಿರುವುದರಿಂದ, ಈ ಕಾರಣ ಗಳಿಂದ . . ." ಎಂದು ಮೇಲಿನ ಪ್ಯಾರಾದಲ್ಲಿರುವಂತೆ ಓದಿಕೊಳ್ಳಬೇಕು.

ನೀಯನು, ಪ್ರಾಸಾದಿಕನು, ಪರಮ ವರ್ಣಪುಷ್ಕಲತೆಯಿಂದ ಕೂಡಿದವನು; ಬ್ರಹ್ಮ ವರ್ಣಿಯು, ಬ್ರಹ್ಮವರ್ಚಸ್ವಿಯು; ನೋಡಲು ದೀರ್ಘಗಂಭೀರಾಕಾರನು. . . . ಅವನು ಶೀಲವಂತನು, ಆರ್ಯಶೀಲಿ[1]ಯು, ಕುಶಲಶೀಲಿ[2]ಯು, ಕುಶಲಶೀಲದಿಂದ ಕೂಡಿದವನು. . . . ವಿಸ್ಪಷ್ಟವಾಗಿ, ಸ್ಪಷ್ಟವಾಗಿ, ಅರ್ಥವನ್ನು ತಿಳಿಯಪಡಿಸುವ ಕಲ್ಯಾಣವಾಕ್ಕಿನಿಂದ ಕೂಡಿದವನು, ಕಲ್ಯಾಣವಾಕ್ಕರಣನು, ಪೌರವಾಕ್ಕಿನಿಂದ ಕೂಡಿದವನು. . . . ಅನೇಕ ಆಚಾರ್ಯರ ಆಚಾರ್ಯನು. . . . ಕಾಮರಾಗಗಳು ಕ್ಷೀಣವಾದವನು, ಚಾಪಲ್ಯ ಹೋದವನು. . . . ಕರ್ಮವಾದಿ, ಕ್ರಿಯಾವಾದಿ; ಬ್ರಾಹ್ಮಣ್ಯ ಪ್ರಜೆಗಳಲ್ಲಿ ಅಪಾಪ[3]ವನ್ನು ಪುರಸ್ಕರಿಸುವವನು. . . . ಆದಿ ಕ್ಷತ್ರಿಯ ಕುಲಗಳಲ್ಲಿ ಉಚ್ಚಕುಲದಿಂದ ಪರಿವ್ರಜಿಸಿದನು. . . . ಮಹಾಧನವುಳ್ಳ ಮಹಾ ಭೋಗವುಳ್ಳ ಆಢ್ಯಕುಲದಿಂದ ಪರಿವ್ರಜಿಸಿದನು. . . . ಶ್ರಮಣ ಗೌತಮನನ್ನು ಪ್ರಶ್ನಿಸಲು (ಜನರು) ರಾಷ್ಟ್ರಗಳಾಚೆಯಿಂದ, ಜನಪದಗಳಾಚೆಯಿಂದ ಬರುತ್ತಾರೆ. . . . ಪ್ರಾಣಿಗಳು, ಅನೇಕ ದೇವತಾಸಹಸ್ರಗಳು ಶ್ರಮಣ ಗೌತಮನನ್ನು ಶರಣುಹೊಗುವರು. . . . ಶ್ರಮಣ ಗೌತಮನನ್ನು ಕುರಿತು ಹರಡಿರುವ ಕಲ್ಯಾಣ ಕೀರ್ತಿಶಬ್ದವಿದು—'ಆ ಭಗವಾನನು ಅರ್ಹನು, ಸಮ್ಯಕ್ಸಂಬುದ್ಧನು, ವಿದ್ಯಾಚರಣ ಸಂಪನ್ನನು, ಸುಗತನು, ಲೋಕವಿದನು, ಅನುತ್ತರನಾದ ಪುರುಷದಮ್ಯಸಾರಥಿಯು, ದೇವಮನುಷ್ಯರಿಗೆ ಶಾಸ್ತೃವು, ಬುದ್ಧನು, ಭಗವಾನನು.' . . . ಶ್ರಮಣ ಗೌತಮನು ಮೂವತ್ತೆರಡು ಮಹಾಪುರುಷಲಕ್ಷಣಗಳಿಂದ ಕೂಡಿದವನು. . . . ಅವನು ಏಹಿ-ಸ್ವಾಗತ-ವಾದಿ[4], ಸಖ್ಯದಿಂದಿರುವನು, ಸಮ್ಮೋದದಿಂದಿರುವನು; ಹುಬ್ಬು ಗಂಟಿಕ್ಕದವನು, ಸ್ಪಷ್ಟವಾಗಿ ನುಡಿಯುವವನು, ನುಡಿದನಂತರ ನುಡಿಯುವವನು. . . . ಶ್ರಮಣ ಗೌತಮನು ನಾಲ್ಕು ಪರಿಷ[5]ಗಳಿಂದಲೂ ಸತ್ಕೃತನು, ಗೌರವಿತನು, ಮಾನಿತನು, ಪೂಜಿತನು, ಅಪಚಿತನು. . . . ಅನೇಕ ದೇವತೆಗಳೂ ಮನುಷ್ಯರೂ ಶ್ರಮಣ ಗೌತಮನಲ್ಲಿ ಅಭಿಪ್ರಸನ್ನರು. . . . ಶ್ರಮಣ ಗೌತಮನು ಯಾವ ಗ್ರಾಮ ನಿಗಮಗಳಲ್ಲಿ ವಾಸಿಸುವನು, ಆ ಗ್ರಾಮದಲ್ಲಾಗಲಿ, ನಿಗಮದಲ್ಲಾಗಲಿ ಅಮನುಷ್ಯರು ಮನುಷ್ಯರನ್ನು ವಿರೋಧಿಸರು. . . . ಶ್ರಮಣ ಗೌತಮನು ಸಂಘದ ಮುಖ್ಯಸ್ಥ

---

[1] ಆರ್ಯರಿಗೆ ತಕ್ಕ ಶೀಲದಿಂದ ಕೂಡಿದವನು.

[2] ಕುಶಲವಾದ ಕರ್ಮಗಳೇ ಶೀಲವಾದವನು.

[3] ಪಾಪಮಾಡದೆ ಪುಣ್ಯಮಾಡುವುದು.

[4] 'ಏಹಿ ಭಿಕ್ಖು', 'ಏಹಿ ಭಿಕ್ಖುನೀ' ಎಂದು ಬುದ್ಧನು ಬಂದವರನ್ನು 'ಬನ್ನಿ' ಎಂದು ಸ್ವಾಗತಿಸುತ್ತಿದ್ದನು.

[5] ಭಿಕ್ಷುಗಳು, ಭಿಕ್ಷುಣಿಯರು, ಉಪಾಸಕರು ಮತ್ತು ಉಪಾಸಿಕೆಯರು.

ಸೆಂದು, ಗಣದ ಮುಖಂಡನೆಂದು, ಗಣಾಚಾರ್ಯನೆಂದು, ಬೇರೆ ಬೇರೆ ತೀರ್ಥಕರ ಅಗ್ರನೆಂದು ಹೇಳುವರು. . . . ಕೆಲವು ಶ್ರಮಣ ಬ್ರಾಹ್ಮಣರಿಗೆ ಹಾಗೋ ಹೀಗೋ ಯಶಸ್ಸು ಸೇರಿದರೆ, ಶ್ರಮಣ ಗೌತಮನಿಗೆ ಯಶಸ್ಸು ಸೇರಿದುದು ಹಾಗಲ್ಲ ; ಅನುತ್ತರ ವಾದ ವಿದ್ಯಾಚರಣ ಸಂಪದದಿಂದ ಶ್ರಮಣ ಗೌತಮನಿಗೆ ಯಶಸ್ಸು ಸೇರಿತು. . . . ಮಗಧದ ರಾಜನಾದ ಶ್ರೇಣಿಯ ಬಿಂಬಿಸಾರನು ತನ್ನ ಮಕ್ಕಳು, ಹೆಂಡತಿ. ಪರಿವಾರ, ಮಂತ್ರಿಗಳೊಡನೆ ಶ್ರಮಣ ಗೌತಮನಿಗೆ ಶರಣಾಗಿರುವನು. . . . ಕೋಸಲದ ರಾಜ ಪ್ರಸೇನಜಿತ್ತು ತನ್ನ ಮಕ್ಕಳು, ಹೆಂಡತಿ, ಪರಿವಾರ, ಮಂತ್ರಿಗಳೊಡನೆ ಶ್ರಮಣ ಗೌತಮನಿಗೆ ಶರಣಾಗಿರುವನು. . . . ಬ್ರಾಹ್ಮಣ ಪೌಷ್ಕರಸಾದಿಯು ತನ್ನ ಮಕ್ಕಳು, ಹೆಂಡತಿ, ಪರಿವಾರ, ಮಂತ್ರಿಗಳೊಡನೆ ಶ್ರಮಣ ಗೌತಮನಿಗೆ ಶರಣಾಗಿರುವನು. . . . ಶ್ರಮಣ ಗೌತಮನು ಮಗಧದ ರಾಜನಾದ ಶ್ರೇಣಿಯ ಬಿಂಬಿಸಾರನಿಂದ ಸತ್ಕೃತನು, ಗೌರವಿತನು, ಮಾನಿತನು, ಪೂಜಿತನು, ಅಪಚಿತನು. . . . ಶ್ರಮಣ ಗೌತಮನು ಕೋಸಲದ ರಾಜ ಪ್ರಸೇನಜಿತನಿಂದ ಸತ್ಕೃತನು, ಗೌರವಿತನು, ಮಾನಿತನು, ಪೂಜಿತನು, ಅಪಚಿತನು. . . . ಶ್ರಮಣ ಗೌತಮನು ಬ್ರಾಹ್ಮಣ ಪೌಷ್ಕರ ಸಾದಿಯಿಂದ ಸತ್ಕೃತನು, ಗೌರವಿತನು, ಮಾನಿತನು, ಪೂಜಿತನು, ಅಪಚಿತನು. . . . ಶ್ರಮಣ ಗೌತಮನು ಚಂಪೆಯನ್ನು ಸಾರಿ, ಚಂಪೆಯಲ್ಲಿ ಗಗ್ಗರೆಯ ಪುಷ್ಕರಿಣೀ ತೀರದಲ್ಲಿ ತಂಗಿರುವನು. ಯಾರಾದರೂ ಶ್ರಮಣ ಬ್ರಾಹ್ಮಣರು ನಮ್ಮ ಗ್ರಾಮ ಕ್ಷೇತ್ರಕ್ಕೆ ಬಂದರೆ, ಅವರು ನಮ್ಮ ಅತಿಥಿಗಳು. ಅತಿಥಿಗಳನ್ನು ನಾವು ಸತ್ಕರಿಸ ತಕ್ಕುದು, ಗೌರವಿಸತಕ್ಕುದು, ಮಾನಿಸತಕ್ಕುದು, ಪೂಜಿಸತಕ್ಕುದು, ಅಪಚಯಿಸ ತಕ್ಕುದು. ಶ್ರಮಣ ಗೌತಮನು ಚಂಪೆಗೆ ಬಂದು, ಚಂಪೆಯಲ್ಲಿ, ಗಗ್ಗರೆಯ ಪುಷ್ಕರಿಣೀ ತೀರದಲ್ಲಿ ತಂಗಿದಾಗ, ಶ್ರಮಣ ಗೌತಮನು ನಮ್ಮ ಅತಿಥಿಯು. ಅತಿಥಿಯನ್ನು ನಾವು ಸತ್ಕರಿಸತಕ್ಕುದು, ಗೌರವಿಸತಕ್ಕುದು, ಮಾನಿಸತಕ್ಕುದು, ಪೂಜಿಸತಕ್ಕುದು, ಅಪಚಯಿಸತಕ್ಕುದು. ಈ ಕಾರಣಗಳಿಂದ ಪೂಜ್ಯ ಗೌತಮನು ನನ್ನನ್ನು ಕಾಣಲು ಬರುವುದು ತಗದು ; ಪೂಜ್ಯ ಗೌತಮನನ್ನು ನಾನೇ ಹೋಗಿ ಕಾಣುವುದು ತಕ್ಕುದು.

"ಭೋ ! ಆ ಪೂಜ್ಯ ಗೌತಮನ ವರ್ಣವನ್ನು ನಾನು ತಿಳಿದಿರುವುದು ಇಷ್ಟೇ. ಆದರೆ, ಆ ಪೂಜ್ಯ ಗೌತಮನ ವರ್ಣ ಇಷ್ಟೇ ಅಲ್ಲ ; ಆ ಪೂಜ್ಯ ಗೌತಮನ ವರ್ಣವು ಅಪರಿಮಾಣವು."

೭. ಹೀಗೆನ್ನಲು, ಆ ಬ್ರಾಹ್ಮಣರು ಬ್ರಾಹ್ಮಣ ಸೋಣದಂಡನಿಗೆ ಹೀಗೆಂದರು—" ಪೂಜ್ಯ ಸೋಣದಂಡನು ಶ್ರಮಣ ಗೌತಮನ ವರ್ಣವನ್ನು ಹೇಗೆ ಹೇಳುವ

ನೆಂದರೆ—ಆ ಪೂಜ್ಯ ಗೌತಮನು ನೂರು ಯೋಜನದಲ್ಲಿ ತಂಗಿದ್ದರೂ ನಂಬಿಯೊಡನೆ ಯಾದರೂ (ಆ) ಕುಲಪುತ್ರನ ದರ್ಶನಕ್ಕೆ ಹೋಗುವಂತೆ ನಂಬಿಸಲು ಸಾಕು. ಆದರಿಂದ, ಭೋ! ಸರ್ವರೂ ಶ್ರಮಣ ಗೌತಮನನ್ನು ಕಾಣಲು ತೆರಳೋಣ.''

ಆಗ ಬ್ರಾಹ್ಮಣ ಸೋಣದಂಡನು, ಮಹಾ ಬ್ರಾಹ್ಮಣ ಗಣದೊಡನೆ ಗಗ್ಗರೆಯ ಪುಷ್ಕರಿಣಿಯೆಡೆಗೆ ತೆರಳಿದನು.

೮. ಆಗ, ವನಷಂಡವನ್ನು ದಾಟುತ್ತಿರುವಾಗ ಬ್ರಾಹ್ಮಣ ಸೋಣದಂಡನ ಚಿತ್ತದಲ್ಲಿ ಹೀಗೆ ಪರಿವಿತರ್ಕ ಹುಟ್ಟಿತು—

''ನಾನೇ ಶ್ರಮಣ ಗೌತಮನನ್ನು ಪ್ರಶ್ನೆ ಕೇಳಿದರೆ, ಶ್ರಮಣ ಗೌತಮನು—'ಬ್ರಾಹ್ಮಣ, ಪ್ರಶ್ನೆ ಹೀಗೆ ಕೇಳತಕ್ಕುದಲ್ಲ! ಪ್ರಶ್ನೆ ಹೀಗೆ ಕೇಳತಕ್ಕುದು, ಬ್ರಾಹ್ಮಣ!' ಎಂದು ಕೇಳಿದರೆ; ಅದರಿಂದ ಈ ಪರಿಷೆಯು—'ಬ್ರಾಹ್ಮಣ ಸೋಣದಂಡನು ಬಾಲನು, ಅವ್ಯಕ್ತನು, ಶ್ರಮಣ ಗೌತಮನನ್ನು ಇಂತಹ ಪ್ರಶ್ನೆ ಕೇಳಲು ಶಕ್ತನಲ್ಲ!' ಎಂದು ನನ್ನನ್ನು ಪರಿಭವಿಸುವುದು. (ಹೀಗೆ) ಈ ಪರಿಷೆ ಪರಿಭವಿಸಿದವನ ಯಶಸ್ಸೂ ಹೀನ ವಾಗುವುದು. ಯಶಸ್ಸು ಹೀನವಾದವನ ಭೋಗವೂ ಹೀನವಾಗುವುದು; (ಏಕೆಂದರೆ) ನಮ್ಮ ಭೋಗವು ಯಶೋಲಬ್ಧವಾದುದು.

''ಹಾಗಲ್ಲದೆ, ಶ್ರಮಣ ಗೌತಮನು ನನ್ನನ್ನೇ ಪ್ರಶ್ನಿಸಿದರೆ, ಆ ಪ್ರಶ್ನೆಗೆ ಉತ್ತರ ದಿಂದ ಅವನ ಚಿತ್ತವನ್ನು ಆರಾಧಿಸಲಾರೆನು. ಆಗ ಶ್ರಮಣ ಗೌತಮನು—'ಬ್ರಾಹ್ಮಣ, ಪ್ರಶ್ನೆಗೆ ಉತ್ತರ ಕೊಡತಕ್ಕುದು ಹೀಗಲ್ಲ! ಪ್ರಶ್ನೆಗೆ ಉತ್ತರ ಕೊಡತಕ್ಕುದು ಹೀಗೆ, ಬ್ರಾಹ್ಮಣ!' ಎಂದು ನನಗೆಂದರೆ; ಅದರಿಂದ ಈ ಪರಿಷೆಯು—'ಬ್ರಾಹ್ಮಣ ಸೋಣ ದಂಡನು ಬಾಲನು, ಅವ್ಯಕ್ತನು, ಶ್ರಮಣ ಗೌತಮನ ಪ್ರಶ್ನೆಗೆ ಉತ್ತರದಿಂದ ಅವನ ಚಿತ್ತವನ್ನು ಆರಾಧಿಸಲು ಶಕ್ಯನಾಗಲಿಲ್ಲ!' ಎಂದು ನನ್ನನ್ನು ಪರಿಭವಿಸುವುದು. (ಹೀಗೆ) ಈ ಪರಿಷೆ ಪರಿಭವಿಸಿದವನ ಯಶಸ್ಸೂ ಹೀನವಾಗುವುದು. ಯಶಸ್ಸು ಹೀನ ವಾದವನ ಭೋಗವೂ ಹೀನವಾಗುವುದು; (ಏಕೆಂದರೆ) ನಮ್ಮ ಭೋಗವು ಯಶೋ ಲಬ್ಧವಾದುದು.

''ಹಾಗಲ್ಲದೆ, ಇಷ್ಟು ಸಮೀಪ ಬಂದು, ಶ್ರಮಣ ಗೌತಮನನ್ನು ಕಾಣದೆ ಹಿಂದಿರುಗಿದರೆ; ಅದರಿಂದ ಈ ಪರಿಷೆಯು—'ಬ್ರಾಹ್ಮಣ ಸೋಣದಂಡನು ಬಾಲನು, ಅವ್ಯಕ್ತನು; ಮಾನದಿಂದ ಸ್ತಬ್ಧನಾಗಿ, ಭೀತನಾಗಿ, ಶ್ರಮಣ ಗೌತಮನನ್ನು ಕಂಡು ಬರಲಾರದೆ ಹೋದನು. ಇಷ್ಟು ಸಮೀಪ ಬಂದೂ ಶ್ರಮಣ ಗೌತಮನನ್ನು ಕಾಣದೆ ಹೇಗೆ ಹಿಂದಿರುಗಿದನು!' ಎಂದು ಪರಿಭವಿಸುವುದು. (ಹೀಗೆ) ಈ ಪರಿಷೆ ಪರಿಭವಿಸಿ ದವನ ಯಶಸ್ಸೂ ಹೀನವಾಗುವುದು. ಯಶಸ್ಸು ಹೀನವಾದವನ ಭೋಗವೂ ಹೀನ ವಾಗುವುದು; (ಏಕೆಂದರೆ) ನಮ್ಮ ಭೋಗವು ಯಶೋಲಬ್ಧವಾದುದು.''

೯. ಆಗ, ಬ್ರಾಹ್ಮಣ ಸೋಣದಂಡನು ಭಗವಾನನಿರುವಲ್ಲಿಗೆ ಸಾರಿ, ಭಗವಂತನೊಡನೆ ಸಮ್ಮೋದದಿಂದ ಆಡಿ, ಕೇಳತಕ್ಕ ಕುಶಲ ಪ್ರಶ್ನೆಗಳಾದ ಮೇಲೆ ಒಂದು ಕಡೆ ಕುಳಿತನು. ಚಂಪೆಯ ಬ್ರಾಹ್ಮಣ ಗೃಹಪತಿಗಳು ಕೂಡ—ಕೆಲವರು ಭಗವಂತನಿಗೆ ಅಭಿವಾದಿಸಿ ಒಂದು ಕಡೆ ಕುಳಿತರು ; ಕೆಲವರು ಭಗವಂತನೊಡನೆ ಸಮ್ಮೋದಗೊಂಡು ನುಡಿದು, ಕೇಳಬೇಕಾದ ಕುಶಲಪ್ರಶ್ನೆಗಳನ್ನು ಕೇಳಿ ಒಂದು ಕಡೆ ಕುಳಿತರು ; ಕೆಲವರು ಭಗವಂತನಿರುವ ಕಡೆಗೆ ಕೈಮುಗಿದು ಒಂದು ಕಡೆ ಕುಳಿತರು ; ಕೆಲವರು ನಾಮಗೋತ್ರಗಳನ್ನು ತಿಳಿಸಿ ಒಂದು ಕಡೆ ಕುಳಿತರು ; ಕೆಲವರು ಮೌನವಾಗಿ ಒಂದು ಕಡೆ ಕುಳಿತರು.

೧೦. ಆಗ ಕೂಡ ಬ್ರಾಹ್ಮಣ ಸೋಣದಂಡನು ಬಹುವಾದ ಅನುವಿತರ್ಕದಿಂದ ಕೂಡಿ ಕುಳಿತಿದ್ದನು.

" ನಾನೇ ಶ್ರಮಣ ಗೌತಮನನ್ನು ಪ್ರಶ್ನೆ ಕೇಳಿದರೆ, . . . [ಎಂದು § ೮ ರ ಮೊದಲು ಭಾಗದಂತೆ]. . . . ನಮ್ಮ ಭೋಗವು ಯಶೋಲಬ್ಧವಾದುದು.

" ಹಾಗಲ್ಲದೆ ಶ್ರಮಣ ಗೌತಮನು ನನ್ನನ್ನೇ ಪ್ರಶ್ನಿಸಿದರೆ, . . . [ಎಂದು § ೮ ರ ಎರಡನೆಯ ಭಾಗದಂತೆ] . . . ನಮ್ಮ ಭೋಗವು ಯಶೋಲಬ್ಧವಾದುದು.

" ಆಹಾ ! ಶ್ರಮಣ ಗೌತಮನು ನನ್ನ ಆಚಾರ್ಯಕವಾದ ತ್ರೈವಿದ್ಯದಲ್ಲಿ ಪ್ರಶ್ನೆ ಕೇಳಿದರೆ, ಪ್ರಶ್ನೆಗೆ ಉತ್ತರದಿಂದ ಅವನ ಚಿತ್ತವನ್ನು ಆರಾಧಿಸಿಯೇ ಆರಾಧಿಸುವೆನು ! "

೧೧. ಆಗ, ಬ್ರಾಹ್ಮಣ ಸೋಣದಂಡನ ಚೇತಸ್ಸಿನಲ್ಲಾದ ಚೇತಃಪರಿವಿತರ್ಕವನ್ನು ಕಂಡು, ಭಗವಾನನಿಗೆ ಹೀಗೆನ್ನಿಸಿತು—" ಈ ಬ್ರಾಹ್ಮಣ ಸೋಣದಂಡನು ಸ್ವಂತ ಚಿತ್ತದಿಂದ ನೋಯುತ್ತಿದ್ದಾನೆ. ನಾನು ಈಗಲೇ ಬ್ರಾಹ್ಮಣ ಸೋಣದಂಡನನ್ನು ಅವನ ಆಚಾರ್ಯಕವಾದ ತ್ರೈವಿದ್ಯದಲ್ಲಿ ಪ್ರಶ್ನೆ ಕೇಳುವೆನು."

ಆಗ, ಭಗವಾನನು ಬ್ರಾಹ್ಮಣ ಸೋಣದಂಡನಿಗೆ ಹೀಗೆಂದನು—" ಬ್ರಾಹ್ಮಣ ! 'ನಾನು ಬ್ರಾಹ್ಮಣ' ಎಂದು ಹೇಳುವವನು ಸರಿಯಾದುದನ್ನು ಹೇಳುವಂತೆ, ಸುಳ್ಳು ಹೇಳದಿರುವಂತೆ—ಬ್ರಾಹ್ಮಣನಿಗೆ ಎಷ್ಟು ಅಂಗಗಳಿರಬೇಕೆಂದು ಬ್ರಾಹ್ಮಣರು ತಿಳಿಸುವರು ? "

೧೨. ಆಗ, ಬ್ರಾಹ್ಮಣ ಸೋಣದಂಡನಿಗೆ ಹೀಗೆನ್ನಿಸಿತು—" 'ಆಹ ! ಶ್ರಮಣ ಗೌತಮನು ನನ್ನ ಆಚಾರ್ಯಕವಾದ ತ್ರೈವಿದ್ಯದಲ್ಲಿ ಪ್ರಶ್ನೆ ಕೇಳಿದರೆ, ಪ್ರಶ್ನೆಗೆ ಉತ್ತರದಿಂದ ಅವನ ಚಿತ್ತವನ್ನು ಆರಾಧಿಸಿಯೇ ಆರಾಧಿಸುವೆನು !'—ಎಂದು ಯಾವುದನ್ನು ಇಚ್ಛಿಸಿದೆನು, ಯಾವುದನ್ನು ಬಯಸಿದೆನು, ಯಾವುದು ಬೇಕೆಂದೆನು, ಯಾವುದನ್ನು ಬೇಡಿದೆನು—ಅದನ್ನು, ನನ್ನ ಆಚಾರ್ಯಕವಾದ ತ್ರೈವಿದ್ಯದಲ್ಲಿ ಪ್ರಶ್ನೆಯನ್ನು, ಶ್ರಮಣ

ಗೌತಮನು ಕೇಳಿರುವನು. ಪ್ರಶ್ನೆಗೆ ಉತ್ತರದಿಂದ ಅವನ ಚಿತ್ತವನ್ನು ಆರಾಧಿಸಿಯೇ ಆರಾಧಿಸುವೆನು !"

೧೩. ಆಗ, ಬ್ರಾಹ್ಮಣ ಸೋಣದಂಡನು ದೇಹವನ್ನು ನೆಟ್ಟಗಿರಿಸಿ, ಪರಿಷೆಯ ಸುತ್ತ ನೋಡಿ, ಭಗವಂತನಿಗೆ ಹೀಗೆಂದನು—"ಭೋ ಗೌತಮ ! 'ನಾನು ಬ್ರಾಹ್ಮಣ' ಎಂದು ಹೇಳುವವನು ಸರಿಯಾದುದನ್ನು ಹೇಳುವಂತೆ, ಸುಳ್ಳು ಹೇಳದಿರುವಂತೆ—ಬ್ರಾಹ್ಮಣನಿಗೆ ಐದು ಅಂಗಗಳಿರಬೇಕೆಂದು ಬ್ರಾಹ್ಮಣರು ತಿಳಿಸುವರು. ಐದಾವುವು ? ಭೋ ! ಇಲ್ಲಿ, ಬ್ರಾಹ್ಮಣನು ಉಭಯತ್ರ ಸುಜಾತನು ; ಮಾತಾಪಿತೃಗಳಿಂದ ಏಳು ಪಿತಾಮಹ ಯುಗಗಳ ವರೆಗೂ ಸಂಶುದ್ಧವಾದ (ಜನ್ಮವನ್ನು) ಗ್ರಹಿಸಿದವನು ; ಜಾತಿವಾದದಲ್ಲಿ ಕಳಂಕವಿಲ್ಲದವನು, ಸಿಂದೆಗೊಳಗಾಗದವನು. (ಅವನು) ವೇದಗಳನ್ನು ಕಲಿತವನು (ಅಧ್ಯಾಯಕ), ಮಂತ್ರ ತಿಳಿದವನು (ಮಂತ್ರಧರ) ; ನಿಘಂಟು, ಕೇಟುಭ, ಅಕ್ಷರ ಪ್ರಭೇದಗಳು ಮತ್ತು ಐದನೆಯದಾಗಿ ಇತಿಹಾಸದೊಡನೆ ಮೂರು ವೇದಗಳಲ್ಲಿ ಪಾರಗತನು ; ಪದಪಾಠವನ್ನು ಬಲ್ಲವನು (ಪದಕನು), ವೈಯಾಕರಣನು, ಲೋಕಾಯತ ಮಹಾಪುರುಷ ಲಕ್ಷಣಗಳಲ್ಲಿ ಪಂಡಿತನು. (ಅವನು) ಅಭಿರೂಪನು, ದರ್ಶನೀಯನು, ಪ್ರಾಸಾದಿಕನು, ಪರಮವರ್ಣಪುಷ್ಕಲತೆಯಿಂದ ಕೂಡಿದವನು ; ಬ್ರಹ್ಮವರ್ಣಿಯು, ಬ್ರಹ್ಮವರ್ಚಸ್ವಿಯು ; ನೋಡಲು ದೀರ್ಘಗಂಭೀರಾಕಾರನು. (ಅವನು) ಶೀಲವಂತನು, ವೃದ್ಧಶೀಲಿಯು, ವೃದ್ಧಶೀಲದಿಂದ ಕೂಡಿದವನು. ಅವನು ಪಂಡಿತನು, ಮೇಧಾವಿಯು ; ಸ್ರುಚ[1]ವನ್ನು ಹಿಡಿಯುವವರಲ್ಲಿ ಮೊದಲನೆಯವನು ಅಥವಾ ಎರಡನೆಯವನು. ಭೋ ಗೌತಮ ! 'ನಾನು ಬ್ರಾಹ್ಮಣ' ಎಂದು ಹೇಳುವವನು ಸರಿಯಾದುದನ್ನು ಹೇಳುವಂತೆ, ಸುಳ್ಳು ಹೇಳದಿರುವಂತೆ—ಬ್ರಾಹ್ಮಣನಿಗೆ ಈ ಐದು ಅಂಗಗಳಿರಬೇಕೆಂದು ಬ್ರಾಹ್ಮಣರು ತಿಳಿಸುವರು."

೧೪. "ಮತ್ತೆ, ಬ್ರಾಹ್ಮಣ, 'ನಾನು ಬ್ರಾಹ್ಮಣ' ಎಂದು ಹೇಳುವವನು ಸರಿಯಾದುದನ್ನು ಹೇಳುವಂತೆ, ಸುಳ್ಳು ಹೇಳದಿರುವಂತೆ, ಈ ಐದು ಅಂಗಗಳಲ್ಲಿ ಒಂದು ಅಂಗವನ್ನು ಬಿಟ್ಟು (ಮಿಕ್ಕ) ನಾಲ್ಕು ಅಂಗಗಳಿಂದ ಕೂಡಿದವನನ್ನು ಬ್ರಾಹ್ಮಣನೆಂದು ತಿಳಿಸಲು ಶಕ್ಯವೆ ?"

"ಶಕ್ಯ, ಭೋ ಗೌತಮ ! ಈ ಐದು ಅಂಗಗಳಲ್ಲಿ, ಭೋ ಗೌತಮ, ವರ್ಣವನ್ನು ಬಿಡಬಹುದು. ವರ್ಣವೇನು ಮಾಡುವುದು ? 'ನಾನು ಬ್ರಾಹ್ಮಣ' ಎಂದು ಹೇಳುವವನು ಸರಿಯಾದುದನ್ನು ಹೇಳುವಂತೆ, ಸುಳ್ಳು ಹೇಳದಿರುವಂತೆ, ಈ (ಮಿಕ್ಕ) ನಾಲ್ಕು ಅಂಗಗಳಿಂದ ಕೂಡಿದವನನ್ನು ಬ್ರಾಹ್ಮಣರು ಬ್ರಾಹ್ಮಣನೆಂದು ತಿಳಿಸುವರು."

---

[1] ಯಜ್ಞಕಾಲದಲ್ಲಿ ಅಗ್ನಿಗೆ ತುಪ್ಪ ಹುಯ್ಯಲು ಬಳಸುವ ಮರದ ಸೌಟು.

೧೫. "ಮತ್ತೆ, ಬ್ರಾಹ್ಮಣ, 'ನಾನು ಬ್ರಾಹ್ಮಣ' ಎಂದು ಹೇಳುವವನು ಸರಿಯಾದುದನ್ನು ಹೇಳುವಂತೆ, ಸುಳ್ಳು ಹೇಳದಿರುವಂತೆ, ಈ ನಾಲ್ಕು ಅಂಗಗಳಲ್ಲಿ ಒಂದು ಅಂಗವನ್ನು ಳಿದು (ಮಿಕ್ಕ) ಮೂರು ಅಂಗಗಳಿಂದ ಕೂಡಿದವನನ್ನು ಬ್ರಾಹ್ಮಣ ನೆಂದು ತಿಳಿಸಲು ಶಕ್ಯವೆ?"

"ಶಕ್ಯ, ಭೋ ಗೌತಮ! ಈ ನಾಲ್ಕು ಅಂಗಗಳಲ್ಲಿ, ಭೋ ಗೌತಮ, ಮಂತ್ರ ವನ್ನು ಬಿಡಬಹುದು. ಮಂತ್ರವೇನು ಮಾಡುವುದು? 'ನಾನು ಬ್ರಾಹ್ಮಣ' ಎಂದು ಹೇಳುವವನು ಸರಿಯಾದುದನ್ನು ಹೇಳುವಂತೆ, ಸುಳ್ಳು ಹೇಳದಿರುವಂತೆ, ಈ (ಮಿಕ್ಕ) ಮೂರು ಅಂಗಗಳಿಂದ ಕೂಡಿದವನನ್ನು ಬ್ರಾಹ್ಮಣರು ಬ್ರಾಹ್ಮಣನೆಂದು ತಿಳಿಸುವರು."

೧೬. "ಮತ್ತೆ, ಬ್ರಾಹ್ಮಣ, 'ನಾನು ಬ್ರಾಹ್ಮಣ' ಎಂದು ಹೇಳುವವನು ಸರಿಯಾದುದನ್ನು ಹೇಳುವಂತೆ, ಸುಳ್ಳು ಹೇಳದಿರುವಂತೆ, ಈ ಮೂರು ಅಂಗಗಳಲ್ಲಿ ಒಂದು ಅಂಗವನ್ನು ಳಿದು (ಮಿಕ್ಕ) ಎರಡು ಅಂಗಗಳಿಂದ ಕೂಡಿದವನನ್ನು ಬ್ರಾಹ್ಮಣ ನೆಂದು ತಿಳಿಸಲು ಶಕ್ಯವೆ?"

"ಶಕ್ಯ, ಭೋ ಗೌತಮ! ಈ ಮೂರು ಅಂಗಗಳಲ್ಲಿ, ಭೋ ಗೌತಮ, ಜಾತಿ ಯನ್ನು ಬಿಡಬಹುದು. ಜಾತಿಯೇನು ಮಾಡುವುದು? 'ನಾನು ಬ್ರಾಹ್ಮಣ' ಎಂದು ಹೇಳುವವನು ಸರಿಯಾದುದನ್ನು ಹೇಳುವಂತೆ, ಸುಳ್ಳು ಹೇಳದಿರುವಂತೆ, ಈ (ಮಿಕ್ಕ) ಎರಡು ಅಂಗಗಳಿಂದ ಕೂಡಿದವನನ್ನು ಬ್ರಾಹ್ಮಣರು ಬ್ರಾಹ್ಮಣನೆಂದು ತಿಳಿಸುವರು."

೧೭. ಹೀಗೆನ್ನಲು, ಆ ಬ್ರಾಹ್ಮಣರು ಬ್ರಾಹ್ಮಣ ಸೋಣದಂಡನಿಗೆ ಹೀಗೆಂದರು—"ಪೂಜ್ಯ ಸೋಣದಂಡನು ಹಾಗೆನ್ನದಿರಲಿ! ಪೂಜ್ಯ ಸೋಣದಂಡನು ಹಾಗೆನ್ನದಿರಲಿ. ಪೂಜ್ಯ ಸೋಣದಂಡನು ವರ್ಣವನ್ನು ಅವಹೇಳನಮಾಡುವುದಲ್ಲದೆ ಮಂತ್ರಗಳನ್ನೂ ಅವಹೇಳನಮಾಡುವನು, ಜಾತಿಯನ್ನೂ ಅವಹೇಳನಮಾಡುವನು. ಪೂಜ್ಯ ಸೋಣ ದಂಡನು ಶ್ರಮಣ ಗೌತಮನ ವಾದವನ್ನೇ ಸಮರ್ಥಿಸುತ್ತಿರುವನಲ್ಲ!"

೧೮. ಆಗ ಭಗವಾನನು ಆ ಬ್ರಾಹ್ಮಣರಿಗೆ ಹೀಗೆಂದನು—"ಬ್ರಾಹ್ಮಣರೆ! 'ಬ್ರಾಹ್ಮಣ ಸೋಣದಂಡನು ಅಲ್ಪಶ್ರುತನು, ಅಕಲ್ಯಾಣವಾಕ್ಕರಣನು, ದುಷ್ಪ್ರಾಜ್ಞನು, ಶ್ರಮಣ ಗೌತಮನೊಡನೆ ಮಾತನಾಡಿ ಮಂತಣಮಾಡಲಾರನು' ಎಂದು ನಿಮಗೆನಿಸಿದರೆ, ಬ್ರಾಹ್ಮಣ ಸೋಣದಂಡನು ಕುಳಿತುಕೊಳ್ಳಲಿ, ನೀವು ನನ್ನೊಡನೆ ಮಂತಣಮಾಡಿರಿ. ಹಾಗಲ್ಲದೆ, ಬ್ರಾಹ್ಮಣರೆ! 'ಬ್ರಾಹ್ಮಣ ಸೋಣದಂಡನು ಬಹುಶ್ರುತನು, ಕಲ್ಯಾಣವಾಕ್ಕರಣನು, ಪಂಡಿತನು, ಶ್ರಮಣ ಗೌತಮನೊಡನೆ ಮಾತನಾಡಿ ಮಂತಣಮಾಡಲಾಪನು' ಎಂದು ನಿಮಗೆನಿಸಿದರೆ, ನೀವು ಕುಳಿತುಕೊಳ್ಳಿ, ಬ್ರಾಹ್ಮಣ ಸೋಣದಂಡನು ನನ್ನೊಡನೆ ಮಂತಣ ನಡೆಸಲಿ."

೧೯. ಹಾಗೆನ್ನಲು, ಬ್ರಾಹ್ಮಣ ಸೋಣದಂಡನು ಭಗವಾನನಿಗೆ ಹೀಗೆಂದನು— "ಪೂಜ್ಯ ಗೌತಮನು (ಸುಮ್ಮನೆ) ಕುಳಿತುಕೊಳ್ಳಲಿ. ಪೂಜ್ಯ ಗೌತಮನು ಸುಮ್ಮನಾಗಲಿ. ಅವರ ಧರ್ಮದಿಂದ ಅವರಿಗೆ ನಾನೇ ಉತ್ತರಕೊಡುವೆನು."

ಆಗ ಬ್ರಾಹ್ಮಣ ಸೋಣದಂಡನು ಆ ಬ್ರಾಹ್ಮಣರಿಗೆ ಹೀಗೆಂದನು—" 'ಪೂಜ್ಯ ಸೋಣದಂಡನು ವರ್ಣವನ್ನು ಅವಹೇಳನಮಾಡಿದನು, ಮಂತ್ರಗಳನ್ನು ಅವಹೇಳನ ಮಾಡಿದನು, ಜಾತಿಯನ್ನು ಅವಹೇಳನಮಾಡಿದನು. ಪೂಜ್ಯ ಸೋಣದಂಡನು ಶ್ರಮಣ ಗೌತಮನ ವಾದವನ್ನೇ ಹಿಡಿಯುತ್ತಿರುವನಲ್ಲ!' ಎಂದು ಪೂಜ್ಯರು ಹಾಗೆನ್ನಬೇಡಿ, ಹಾಗೆನ್ನಬೇಡಿ. ವರ್ಣವನ್ನಾಗಲಿ, ಮಂತ್ರವನ್ನಾಗಲಿ, ಜಾತಿಯನ್ನಾಗಲಿ ನಾನು ಅವಹೇಳನಮಾಡೆನು, ಭೋ!"

೨೦. ಆಗ, ಆ ಸಮಯದಲ್ಲಿ ಬ್ರಾಹ್ಮಣ ಸೋಣದಂಡನ ಅಕ್ಕನ ಮಗನಾದ ಅಂಗಕನೆಂಬ ಮಾಣವಕನು ಆ ಪರಿಷೆಯಲ್ಲಿ ಕುಳಿತಿದ್ದನು. ಆಗ ಬ್ರಾಹ್ಮಣ ಸೋಣದಂಡನು ಆ ಬ್ರಾಹ್ಮಣರಿಗೆ ಹೀಗೆಂದನು—"ಪೂಜ್ಯರೆ! ನನ್ನ ಅಕ್ಕನ ಮಗನಾದ ಈ ಮಾಣವಕ ಅಂಗಕನನ್ನು ಕಾಣುವಿರಲ್ಲವೆ?"

"ಹೌದು, ಭೋ!"

"ಭೋ! ಮಾಣವಕ ಅಂಗಕನು ಅಭಿರೂಪನು, ದರ್ಶನೀಯನು, ಪ್ರಾಸಾದಿಕನು, ಪರಮವರ್ಣಪುಷ್ಕಲತೆಯಿಂದ ಕೂಡಿದವನು; ಬ್ರಹ್ಮವರ್ಣಿಯು, ಬ್ರಹ್ಮವರ್ಚಸ್ವಿಯು, ನೋಡಲು ದೀರ್ಘಗಂಭೀರಾಕಾರನು. ಈ ಎಲ್ಲ ಪರಿಷೆಯಲ್ಲಿ, ಶ್ರಮಣ ಗೌತಮನನ್ನು ಬಿಟ್ಟರೆ, ವರ್ಣದಲ್ಲಿ ಅವನ ಸಮಸಮರಿಲ್ಲ. ಭೋ! ಮಾಣವಕ ಅಂಗಕನು ವೇದ ಕಲಿತವನು (ಅಧ್ಯಾಯಕ), ಮಂತ್ರ ತಿಳಿದವನು (ಮಂತ್ರಧರ); ನಿಘಂಟು, ಕೇಟುಭ, ಅಕ್ಷರ ಪ್ರಭೇದಗಳು ಮತ್ತು ಐದನೆಯದಾಗಿ ಇತಿಹಾಸದೊಡನೆ ಮೂರು ವೇದಗಳಲ್ಲಿ ಪಾರಗತನು; ವೇದಗಳ ಪದಪಾಠವನ್ನು ಬಲ್ಲವನು (ಪದಕನು), ವೈಯಾಕರಣನು, ಲೋಕಾಯತ ಮಹಾಪುರುಷ ಲಕ್ಷಣಗಳಲ್ಲಿ ಪಂಡಿತನು. ನಾನು ಅವನಿಗೆ ಮಂತ್ರ ಕಲಿಸಿದವನು. ಭೋ! ಮಾಣವಕ ಅಂಗಕನು ಉಭಯತ್ರ ಸುಜಾತನು; ಮಾತಾಪಿತೃಗಳಿಂದ ಏಳು ಪಿತಾಮಹ ಯುಗಗಳ ವರೆಗೂ ಸಂಶುದ್ಧವಾದ (ಜನ್ಮವನ್ನು) ಗ್ರಹಿಸಿದವನು; ಜಾತಿವಾದದಲ್ಲಿ ಕಳಂಕವಿಲ್ಲದವನು, ನಿಂದೆಗೊಳಗಾಗದವನು. ಅವನ ತಾಯಿತಂದೆಯರನ್ನು ನಾನು ಬಲ್ಲೆ.

"ಭೋ! ಮಾಣವಕ ಅಂಗಕನು ಪ್ರಾಣಿಗಳನ್ನು ಕೊಂದರೆ, ಕೊಡದುದನ್ನು ತೆಗೆದುಕೊಂಡರೆ, ಪರದಾರಗಮನಮಾಡಿದರೆ, ಸುಳ್ಳು ನುಡಿದರೆ, ಮದ್ಯ ಕುಡಿದರೆ— ಅಲ್ಲಿ ವರ್ಣವೇನು ಮಾಡುವುದು? ಮಂತ್ರವೇನು? ಜಾತಿಯೇನು?

"ಭೋ! ಯಾವಾಗ ಬ್ರಾಹ್ಮಣನು ಶೀಲವಂತನಾಗಿ, ವೃದ್ಧಶೀಲಿಯಾಗಿ ವೃದ್ಧಶೀಲ ಸಮನ್ವಿತನಾಗಿ, ಪಂಡಿತನಾಗಿ, ಮೇಧಾವಿಯಾಗಿ, ಸ್ರುಚವನ್ನು ಹಿಡಿಯುವವರಲ್ಲಿ ಮೊದಲನೆಯವನೋ ಎರಡನೆಯವನೋ ಆಗುವನು; ಆಗ—'ನಾನು ಬ್ರಾಹ್ಮಣ' ಎಂದು ಹೇಳುವವನು ಸರಿಯಾದುದನ್ನು ಹೇಳುವಂತೆ, ಸುಳ್ಳು ಹೇಳದಿರುವಂತೆ—ಈ (ಮಿಕ್ಕ) ಎರಡು ಅಂಗಗಳಿಂದ ಕೂಡಿದವನನ್ನು ಬ್ರಾಹ್ಮಣರು ಬ್ರಾಹ್ಮಣನೆಂದು ತಿಳಿಸುವರು."

೨೧. "ಮತ್ತೆ, ಬ್ರಾಹ್ಮಣ, 'ನಾನು ಬ್ರಾಹ್ಮಣ' ಎಂದು ಹೇಳುವವನು ಸರಿಯಾದುದನ್ನು ಹೇಳುವಂತೆ, ಸುಳ್ಳು ಹೇಳದಿರುವಂತೆ—ಈ ಎರಡು ಅಂಗಗಳಲ್ಲಿ ಒಂದು ಅಂಗವನ್ನುಳಿದು (ಮಿಕ್ಕ) ಒಂದೇ ಅಂಗದಿಂದ ಕೂಡಿದವನನ್ನು ಬ್ರಾಹ್ಮಣನೆಂದು ತಿಳಿಸಲು ಶಕ್ಯವೆ?"

"ಅದಾಗದು, ಭೋ ಗೌತಮ! ಭೋ ಗೌತಮ! ಪ್ರಜ್ಞೆ ಶೀಲದಿಂದ ಪರಿಧೌತವಾದುದು, ಪ್ರಜ್ಞೆಯಿಂದ ಪರಿಧೌತವಾದುದು ಶೀಲ. ಶೀಲವಿರುವೆಡೆ ಪ್ರಜ್ಞೆ, ಪ್ರಜ್ಞೆಯಿರುವೆಡೆ ಶೀಲ. ಪ್ರಜ್ಞೆಯು ಶೀಲವಂತನಿಗೆ, ಶೀಲವು ಪ್ರಜ್ಞಾವಂತನಿಗೆ. ಶೀಲ ಪ್ರಜ್ಞೆಗಳನ್ನು ಲೋಕದಲ್ಲಿ ಅಗ್ರವೆಂದು ಹೇಳುವರು. ಭೋ ಗೌತಮ! ಕೈಯಿಂದ ಕೈ ತೊಳೆಯುವಂತೆ, ಕಾಲಿನಿಂದ ಕಾಲು ತೊಳೆಯುವಂತೆ; ಹಾಗೆಯೇ ಭೋ ಗೌತಮ, ಪ್ರಜ್ಞೆಯು ಶೀಲದಿಂದ ಪರಿಧೌತವಾದುದು, ಪ್ರಜ್ಞೆಯಿಂದ ಪರಿಧೌತವಾದುದು ಶೀಲ. ಶೀಲವಿರುವೆಡೆ ಪ್ರಜ್ಞೆ, ಪ್ರಜ್ಞೆಯಿರುವೆಡೆ ಶೀಲ. ಪ್ರಜ್ಞೆಯು ಶೀಲವಂತನಿಗೆ, ಶೀಲವು ಪ್ರಜ್ಞಾವಂತನಿಗೆ. ಶೀಲ ಪ್ರಜ್ಞೆಗಳನ್ನು ಲೋಕದಲ್ಲಿ ಅಗ್ರವೆಂದು ಹೇಳುವರು."

೨೨. "ಅದು ಹಾಗೆಯೇ ಸರಿ, ಬ್ರಾಹ್ಮಣ! ಬ್ರಾಹ್ಮಣ! ಪ್ರಜ್ಞೆಯು ಶೀಲದಿಂದ ಪರಿಧೌತವಾದುದು, ಪ್ರಜ್ಞೆಯಿಂದ ಪರಿಧೌತವಾದುದು ಶೀಲ. ಶೀಲವಿರುವೆಡೆ ಪ್ರಜ್ಞೆ, ಪ್ರಜ್ಞೆಯಿರುವೆಡೆ ಶೀಲ. ಪ್ರಜ್ಞೆಯು ಶೀಲವಂತನಿಗೆ, ಶೀಲವು ಪ್ರಜ್ಞಾವಂತನಿಗೆ. ಶೀಲ ಪ್ರಜ್ಞೆಗಳನ್ನು ಲೋಕದಲ್ಲ ಅಗ್ರವೆಂದು ಹೇಳುವರು. ಆದರೆ, ಬ್ರಾಹ್ಮಣ, ಆ ಶೀಲವಾವುದು? ಆ ಪ್ರಜ್ಞೆಯಾವುದು?"

"ಭೋ ಗೌತಮ! ಈ ಅರ್ಥವಾಗಿ ನನಗೆ ತಿಳಿದಿರುವುದು ಇಷ್ಟೇ. ಪೂಜ್ಯ ಗೌತಮನು ಈ ಹೇಳಿದ ಅರ್ಥವನ್ನು ಬೆಳಗಿಸುವುದು ಮೇಲು."

೨೩. "ಅದರಿಂದ, ಬ್ರಾಹ್ಮಣ, ಕಿವಿಗೊಟ್ಟು ಕೇಳು. ಸಾಧುವಾದುದನ್ನು ಮನಸ್ಸಿನಲ್ಲಿಡು, ಹೇಳುವೆನು."

"ಹಾಗೆಯೇ ಆಗಲಿ, ಭೋ!" ಎಂದು ಬ್ರಾಹ್ಮಣ ಸೋಣದಂಡನು ಭಗವಂತನ ಮಾತಿಗೆ ಒಪ್ಪಿದನು.

ಭಗವಾನನು ಹೀಗೆಂದನು—

"ಇಲ್ಲಿ, ಬ್ರಾಹ್ಮಣ, ಅರ್ಹನ್ಸೂ ಸಮ್ಯಕ್ಸಂಬುದ್ಧನೂ . . . [ಎಂದು ಶ್ರಾಮಣ್ಯ ಫಲ ಸೂತ್ರದ § ೪೦-೬೩—ಪೂರ್ತಿ ಪುನರುಕ್ತ—ಬುದ್ಧನ ಉದಯ, § ೪೦—ಶ್ರೋತೃವಿನ ಪ್ರವ್ರಜ್ಯ, § ೪೧—ಶೀಲಸಂಪತ್ತಿ, § ೪೨-೬೨—ಮತ್ತು ಭಯರಾಹಿತ್ಯ, § ೬೩.] . . . ಹೀಗೆ, ಬ್ರಾಹ್ಮಣ, ಭಿಕ್ಷುವು ಶೀಲಸಂಪನ್ನನಾಗುವನು. ಇದುವೇ, ಬ್ರಾಹ್ಮಣ, ಶೀಲ.

"ಅವನು ಕಾಮಗಳಿಂದ ಬೇರಾಗಿ, ಅಕುಶಲಧರ್ಮಗಳಿಂದ ದೂರನಾಗಿ, . . . [ಎಂದು ಮೊದಲಾಗಿ ಶ್ರಾಮಣ್ಯ ಫಲ ಸೂತ್ರದ § ೭೫-೯೮—ಪೂರ್ತಿ ಪುನರುಕ್ತ—ಧ್ಯಾನ ಚತುಷ್ಟಯ, § ೭೫-೮೨—ಜ್ಞಾನದರ್ಶನ, § ೮೩-೮೪—ಮನೋಮಯಕಾಯ ನಿರ್ಮಾಣ, § ೮೫-೮೬—ಋದ್ಧಿ ವಿಧ, § ೮೭-೮೮—ದಿವ್ಯಶ್ರೋತ್ರ, § ೮೯-೯೦—ಚೇತೋಪರಿಯ ಜ್ಞಾನ, § ೯೧-೯೨—ಪೂರ್ವನಿವಾಸಾನುಸ್ಮೃತಿ ಜ್ಞಾನ, § ೯೩-೯೪—ಸತ್ತ್ವಗಳ ಚ್ಯುತೋಪಪಾತ ಜ್ಞಾನ, § ೯೫-೯೬—ಮತ್ತು ಆಸ್ರವಕ್ಷಯ ಜ್ಞಾನ, § ೯೭-೯೮. ಪ್ರತಿಯೊಂದರ ಕೊನೆಯಲ್ಲಿ 'ಶ್ರಾಮಣ್ಯ ಫಲ' ಎಂಬುದಕ್ಕೆ ಬದಲು 'ಪ್ರಜ್ಞೆ' ಎಂದು ತಕ್ಕಂತೆ ಓದಿಕೊಳ್ಳಬೇಕು.] . . . ಇದೆ, ಬ್ರಾಹ್ಮಣ, ಆ ಪ್ರಜ್ಞೆ."

೨೪. ಹೀಗೆನ್ನಲು, ಬ್ರಾಹ್ಮಣ ಸೋಣದಂಡನು ಭಗವಂತನಿಗೆ ಹೀಗೆಂದನು— "ಬಲು, ಸೊಗಸು, ಭೋ ಗೌತಮ! ಬಲು ಸೊಗಸು, ಭೋ ಗೌತಮ! ಭೋ ಗೌತಮ! ಬಿದ್ದಿದ್ದುದನ್ನು ಎತ್ತಿ ನಿಲ್ಲಿಸಿದಂತೆ, ಮುಚ್ಚಿದ್ದುದನ್ನು ಬಿಚ್ಚಿದಂತೆ, ಮೂಢನಿಗೆ ಮಾರ್ಗ ತೋರಿಕೊಟ್ಟಂತೆ, ಕಣ್ಣಿರುವವರು ರೂಪಗಳನ್ನು ಕಾಣಲೆಂದು ಅಂಧಕಾರದಲ್ಲಿ ತೈಲಪ್ರದ್ಯೋತವನ್ನು ಧರಿಸಿದಂತೆ—ಅಂತೆಯೇ ಪೂಜ್ಯ ಗೌತಮನಿಂದ ಅನೇಕ ಪರ್ಯಾಯಗಳಿಂದ ಧರ್ಮವು ಪ್ರಕಾಶಿತವಾಯಿತು. ಭಗವಂತ ಗೌತಮನನ್ನೂ ಧರ್ಮ ಭಿಕ್ಷುಸಂಘಗಳನ್ನೂ ಈ ನಾನೂ ಶರಣುಹೊಗುವೆನು; ಇಂದಿನಿಂದ ಪ್ರಾಣವಿರುವ ವರೆಗೂ ಶರಣಾಗತನಾದ ಉಪಾಸಕನೆಂದು ಪೂಜ್ಯ ಗೌತಮನು ನನ್ನನ್ನು ಸ್ವೀಕರಿಸಲಿ. ಪೂಜ್ಯ ಗೌತಮನು ಭಿಕ್ಷುಸಂಘದೊಡನೆ ನಾಳೆ ನಮ್ಮ ಊಟಕ್ಕೆ ಸಮ್ಮತಿಸಬೇಕು."

ಭಗವಂತನು ಮೌನದಿಂದ ಸಮ್ಮತಿಸಿದನು. ಆಗ ಬ್ರಾಹ್ಮಣ ಸೋಣದಂಡನು ಭಗವಂತನ ಸಮ್ಮತಿಯನ್ನು ತಿಳಿದು, ಆಸನದಿಂದೆದ್ದು, ಭಗವಂತನಿಗೆ ಅಭಿವಾದಿಸಿ, ಪ್ರದಕ್ಷಿಣೆಗೆಯ್ದು ಹೊರಟನು. ಆಗ, ಬ್ರಾಹ್ಮಣ ಸೋಣದಂಡನು, ಆ ರಾತ್ರಿ ಮುಗಿಯಲು ತನ್ನ ಮನೆಯಲ್ಲಿ ಸಿಹಿಯಾದ ಖಾದ್ಯ ಭೋಜ್ಯಗಳನ್ನು ಸಿದ್ಧಗೊಳಿಸಿ, ಭಗವಂತನಿಗೆ ಕಾಲವನ್ನು ತಿಳಿಸಿದನು—"ಕಾಲವಾಯಿತು, ಭೋ ಗೌತಮ! ಊಟ ಸಿದ್ಧವಾಗಿದೆ."

೨೫. ಆಗ, ಭಗವಾನನು ಪೂರ್ವಾಹ್ಣ ಸಮಯದಲ್ಲಿ ಉಡುಪು ಹಾಕಿಕೊಂಡು,

ಪಾತ್ರೆ ಚೀವರಗಳನ್ನು ಕೊಂಡು, ಭಿಕ್ಷುಸಂಘದೊಡನೆ ಬ್ರಾಹ್ಮಣ ಸೋಣದಂಡನ ಮನೆಯಿರುವಲ್ಲಿಗೆ ಸಾರಿ, ಸಿದ್ಧಗೊಳಿಸಿದ್ದ ಆಸನದಲ್ಲಿ ಕುಳಿತನು. ಆಗ ಬ್ರಾಹ್ಮಣ ಸೋಣದಂಡನು ಬುದ್ಧ ಮೊದಲಾದ ಭಿಕ್ಷುಸಂಘವನ್ನು—ಸಿಹಿಯಾದ ಖಾದ್ಯ ಭೋಜ್ಯಗಳನ್ನು ಸ್ವಹಸ್ತದಿಂದ ನೀಡಿ ಒಪ್ಪಿಸಿ—ಸಂತೃಪ್ತಿಪಡಿಸಿದನು. ಆಗ, ಭಗವಂತನು ಊಟಮಾಡಿ ಪಾತ್ರೆಯಿಂದ ಕೈತೆಗೆದ ಮೇಲೆ, ಬ್ರಾಹ್ಮಣ ಸೋಣದಂಡನು ಬೇರೆ ನೀಚಾಸನವನ್ನು ಹಿಡಿದು ಒಂದು ಕಡೆ ಕುಳಿತನು. ಒಂದು ಕಡೆ ಕುಳಿತು, ಬ್ರಾಹ್ಮಣ ಸೋಣದಂಡನು ಭಗವಂತನಿಗೆ ಹೀಗೆಂದನು—

೨೬. "ಮತ್ತೆ, ಭೋ ಗೌತಮ, ನಾನು ಪರಿಷೆಗೆ ಬಂದು ಆಸನದಿಂದ ಮೇಲೆದ್ದು ಭಗವಂತ ಗೌತಮನಿಗೆ ಅಭಿವಾದಿಸಿದರೆ, ಅದರಿಂದ ಆ ಪರಿಷೆಯು ನನ್ನನ್ನು ಪರಿಭವಿಸುವುದು. ಆ ಪರಿಷೆ ಪರಿಭವಿಸಿದವನ ಯಶಸ್ಸು ಕ್ಷೀಣವಾಗುವುದು. ಯಶಸ್ಸು ಕ್ಷೀಣವಾದವನ ಭೋಗವೂ ಕ್ಷೀಣವಾಗುವುದು ; (ಏಕೆಂದರೆ) ನಮ್ಮ ಭೋಗಗಳು ಯಶೋಲಬ್ಧಗಳು. ಭೋ ಗೌತಮ, ಪರಿಷೆಗೆ ಬಂದು ನಾನು ಕೈ ಜೋಡಿಸಿ ಹಿಡಿದರೆ, ನಾನು ಆಸನದಿಂದ ಪ್ರತ್ಯುತ್ಥಾನಗೆಯ್ದಂತೆ ಅದನ್ನು ಸ್ವೀಕರಿಸಬೇಕು. ಭೋ ಗೌತಮ, ಪರಿಷೆಗೆ ಬಂದು ನಾನು ವೇಷ್ಟನವನ್ನು ತೆಗೆದರೆ, ಅದನ್ನು ನಾನು ಮಾಡಿದ ಅಭಿವಾದನದಂತೆ ಸ್ವೀಕರಿಸಬೇಕು. ಭೋ ಗೌತಮ, ನಾನು ಯಾನದಲ್ಲಿ ಹೋಗುತ್ತ, ಯಾನದಿಂದ ಇಳಿದು ಭಗವಂತ ಗೌತಮನಿಗೆ ಅಭಿವಾದನೆಗೆಯ್ದರೆ, ಆ ಪರಿಷೆಯು ನನ್ನನ್ನು ಪರಿಭವಿಸುವುದು. ಆ ಪರಿಷೆ ಪರಿಭವಿಸಿದವನ ಯಶಸ್ಸು ಕ್ಷೀಣವಾಗುವುದು. ಯಶಸ್ಸು ಕ್ಷೀಣವಾದವನ ಭೋಗವೂ ಕ್ಷೀಣವಾಗುವುದು; (ಏಕೆಂದರೆ) ನಮ್ಮ ಭೋಗಗಳು ಯಶೋಲಬ್ಧಗಳು. ಭೋ ಗೌತಮ, ನಾನು ಯಾನದಲ್ಲಿ ಹೋಗುತ್ತ ಚುಚ್ಚುಗೋಲನ್ನು ತಗ್ಗಿಸಿದರೆ, ಅದನ್ನು ನಾನು ಯಾನದಿಂದ ಇಳಿದಂತೆ ಪೂಜ್ಯ ಗೌತಮನು ಸ್ವೀಕರಿಸಬೇಕು. ಭೋ ಗೌತಮ, ನಾನು ಯಾನದಲ್ಲಿ ಹೋಗುತ್ತ ಕೈ ಚೀಸಿದರೆ, ಅದು ನಾನು ಪೂಜ್ಯ ಗೌತಮನಿಗೆ ಶಿರಸಾ ಮಾಡಿದ ಅಭಿವಾದನೆಯೆಂದು ಸ್ವೀಕರಿಸಬೇಕು."

೨೭. ಆಗ, ಭಗವಾನನು ಧಾರ್ಮಿಕ ಕಥೆಯಿಂದ ಬ್ರಾಹ್ಮಣ ಸೋಣದಂಡನನ್ನು ಸಂದರ್ಶ[1]ಗೊಳಿಸಿ, ಸಮಾದಪನ[2]ಗೊಳಿಸಿ, ಸಮುತ್ತೇಜನಗೊಳಿಸಿ, ಸಂಪ್ರಹರ್ಷಗೊಳಿಸಿ, ಆಸನದಿಂದ ಎದ್ದು ಹೊರಟನು.

[1] ಧರ್ಮವನ್ನು ಕಾಣುವಂತೆ ಮಾಡಿ.

[2] ಧರ್ಮವನ್ನು ಒಪ್ಪಿಕೊಳ್ಳುವಂತೆ ಪ್ರೇರಿಸಿ.

[ಸೋಣದಂಡ ಸೂತ್ರ ಮುಗಿಯಿತು.]